ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಹೊಸರಿತ್ತಿ

ಪ್ರಧಾನ ಸಂಪಾದಕರು
**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು
**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು
**ಡಾ. ಹೇಮಪ್ಪ ಬ. ಕೆಂಚಳ್ಳಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**HOSARITTI:** An Introduction Book on Places in Karnataka that Played a Major Role in the Freedom Struggle, Written by Dr. Hemappa B. Kenchalli, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಹೇಮಪ್ಪ ಬ. ಕೆಂಚಳ್ಳಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೮೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೇಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೇಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತೀಯ ಇತಿಹಾಸದಲ್ಲಿ ಸ್ವಾತಂತ್ರ್ಯಪೂರ್ವ ಕಾಲ ಅತ್ಯಂತ ಮಹತ್ವಪೂರ್ಣವಾಗಿದೆ. ಅಲ್ಲಿ ದೇಶಭಕ್ತಿ ಹಾಗೂ ಸ್ವಾತಂತ್ರ್ಯಗಳ ಬೆಲೆ ಅರಿತವರು ನವಭಾರತ ನಿರ್ಮಾಣವನ್ನೇ ಧ್ಯೇಯವಾಗಿಟ್ಟುಕೊಂಡು ಕ್ರೀಯಾಶೀಲರಾಗಿದ್ದ ಕಾಲವದು. ವರ್ಷಗಳು ಕಳೆದಂತೆ ಆ ಮಹಾನುಭಾವರ ಮೌಲ್ಯಗಳು ಸಮಾಜದಿಂದ ಬರುಬರುತ್ತಾ ಕಣ್ಮರೆಯಾಗುತ್ತಾ ಬಂದವು. ಇಂದು ಭಾರತ ವಿಕ್ಷಿಪ್ತರೂಪ ತಳೆದಿದೆ. ಪರಿಸ್ಥಿತಿ ಸಂಪೂರ್ಣ ಕೈಮೀರುವ ಮುನ್ನ ಸರಿಪಡಿಸಿಕೊಳ್ಳಬೇಕು ಎನ್ನುವ ಮನೋಭಾವನೆಯನ್ನು ಅಂದಿನಿಂದ ಇಂದಿನವರೆಗೂ ದೇಶಭಕ್ತಿ, ಸ್ವಾತಂತ್ರ್ಯ, ತ್ಯಾಗ, ನಿಸ್ವಾರ್ಥ ಸಮಾಜ ಸೇವೆ, ಉನ್ನತ ಆದರ್ಶಗಳನ್ನು ಪರಿಚಯಿಸಬೇಕು. ಈ ಕಾರ್ಯ ಈಗಾಗಲೇ ನಡೆದಿದೆಯಾದರೂ ಹಳ್ಳಿಗಾಡಿನಲ್ಲಿ ವಾಸಿಸುವ ಈಗಾಗಲೇ ಅತಿ ಹೆಚ್ಚು ಚಳುವಳಿಯ ವೀರರು ನಮ್ಮನ್ನಗಲಿರುವ ಸ್ವಾತಂತ್ರ್ಯ ಹೋರಾಟಗಾರರ ಸಾಮಾಜಿಕ, ಶೈಕ್ಷಣಿಕ ಕಾರ್ಯಕರ್ತರ ಜೀವನ ಚರಿತ್ರೆಗಳು ಇನ್ನೂ ಬೆಳಕಿಗೆ ಬಾರದೇ ಕಾಲಗರ್ಭದಲ್ಲಿ ಉಳಿದುಕೊಂಡಿವೆ. ಅಂಥವರ ಪಂಕ್ತಿಯಲ್ಲಿ 'ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಸರಿತ್ತಿ' ಈ ಕಿರುಪುಸ್ತಕ. ಇದರಲ್ಲಿ ಹೊಸರಿತ್ತಿ ನಾಡಿನಲ್ಲಿ ದೇಶಕ್ಕೊಸ್ಕರ ಹಾಗೂ ಸಮಾಜಕ್ಕೊಸ್ಕರ ಅಂದು ಹೋರಾಟ ಮಾಡಿದ ವೀರರನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಕಾರ್ಯ ನನ್ನದಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ "ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ ೭೫ ಸ್ಥಳಗಳ ೭೫ ಕಿರುಪುಸ್ತಕಗಳನ್ನು ಪ್ರಕಟಿಸಬೇಕೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಉದ್ದೇಶಿಸಿದೆ. ಸಾಹಿತ್ಯ ಅಕಾಡೆಮಿಯ ಈ ಕಾರ್ಯ ಸಂತೋಷಕರ ವಿಷಯ. ಸಾಹಿತ್ಯ ಅಕಾಡೆಮಿ ಹಾಗೂ



ಡಾ. ಎಸ್. ಜಿ. ರಾಮದಾಸ ರೆಡ್ಡಿಯವರ ಸಲಹೆಯ ಪ್ರಕಾರ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ 'ಹೊಸರಿತ್ತಿ' ಎಂಬ ಕಿರುಪುಸ್ತಕದಲ್ಲಿ ಹೊಸರಿತ್ತಿ ಪ್ರದೇಶದ ಪರಿಚಯದೊಂದಿಗೆ ಅದರ ಸುತ್ತಮುತ್ತಲಿನ ಪ್ರದೇಶ ರಾಷ್ಟ್ರೀಯ ಹೋರಾಟದಲ್ಲಿ ನಿರ್ವಹಿಸಿದ ಕಾರ್ಯವನ್ನು ತಿಳಿಸುವುದರೊಂದಿಗೆ ಆ ಭಾಗದ ಚಳುವಳಿಕಾರರು ಅಂದಿನ ಸಮಾಜದಲ್ಲಿಯ ಮೌಢ್ಯಗಳನ್ನು ವಿರೋಧಿಸುತ್ತಾ ಸಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಮಾಡುತ್ತಾ ತಮ್ಮ ಪಾತ್ರಗಳನ್ನು ನಿರ್ವಂಚನೆಯಿಂದ ನಿರ್ವಹಿಸಿದ ಮಹಾನುಭಾವರನ್ನೂ, ಅವರ ಕಾರ್ಯಗಳನ್ನು ಈ ಕಿರುಪುಸ್ತಕದಲ್ಲಿ ಪರಿಚಯಿಸಲಾಗಿದೆ. ಇದರಲ್ಲಿ ಅಂದಿನ ಚಳುವಳಿಕಾರರು ನೇರವಾಗಿ ಹೇಳಿದ ಹೇಳಿಕೆಗಳನ್ನು, ಅವರ ಚರಿತ್ರೆಗಳನ್ನು, ಅವರ ಸಮಕಾಲೀನ ಸ್ನೇಹಿತರು ಪ್ರಕಟಿಸಿರುವ ಚರಿತ್ರೆಗಳನ್ನು, ಅವರ ವಿಚಾರಗಳನ್ನು ಅರಿತವರಿಂದ ಕೇಳಿದ ವಿಷಯಗಳನ್ನು ಆಧಾರಗಳನ್ನಾಗಿ ಇಟ್ಟುಕೊಂಡು ಈ ಕಿರುಪುಸ್ತಕದಲ್ಲಿ ದಾಖಲಿಸಲಾಗಿದೆ.

ಮುಖ್ಯವಾಗಿ ಕರ್ನಾಟಕ ರಾಜ್ಯದ ಮಾಜಿ ವಿಧಾನಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀ ಬಿ. ಜಿ. ಬಣಕಾರರವರು ತಿಳಿಸಿದ, ಚಳುವಳಿಕಾರ ಪರಮಣ್ಣ ಲಿ. ಹರಕಂಗಿ, ದೇವೇಂದ್ರಪ್ಪ ವಿಭೂತಿ, ಸುಬ್ಬಣ್ಣಾಚಾರ್ಯ ಅಕ್ಕಿವಳಿ, ಗುಡ್ಡಪ್ಪ ಹರಿಜನ, ನಾಗಮ್ಮ ಉಂಡಿ, ಮುಂತಾದ ಚಳುವಳಿಕಾರರು ಹಾಗೂ ಹಾವೇರಿ ಜಿಲ್ಲೆಯ ಹಿರಿಯ ಸಂಶೋಧಕರಾದ ಡಾ. ಬೋಜರಾಜ ಪಾಟೀಲ, ಪ್ರೊ. ಲಿಂಗರಾಜ ಕಮ್ಮಾರ ಮೊದಲಾದವರ ಸಹಕಾರದಿಂದ ಈ ಕಿರುಪುಸ್ತಕಕ್ಕೆ ಜೀವ ತುಂಬಲಾಗಿದೆ.

ನಾವು ಇಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಅಂದಿನ ಚಳುವಳಿಕಾರರು ಸ್ವಾತಂತ್ರ್ಯ ಹೋರಾಟದೊಂದಿಗೆ ಅಂದು ಸಮಾಜ ಎದುರಿಸುತ್ತಿದ್ದ ಹಲವು ಮೌಢ್ಯಗಳನ್ನು ತೊಡೆದು ಹಾಕುವಲ್ಲಿ ನಿರ್ವಹಿಸಿದ ಪಾತ್ರವನ್ನು ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ 'ಹೊಸರಿತ್ತಿ' ಈ ಕಿರುಕೃತಿಯಲ್ಲಿ ಆ ಭಾಗದಲ್ಲಿ ಚಳುವಳಿಕಾರರು ನಿರ್ವಹಿಸಿದ ಕಾರ್ಯಗಳೊಂದಿಗೆ ಹಳ್ಳಿಕೇರಿ ಗುದ್ಲೆಪ್ಪನವರು ಚಳುವಳಿಯೊಂದಿಗೆ ಗಾಂಧೀಜಿಯವರ ಗ್ರಾಮೀಣ ಗುರುಕುಲ ಹೇಗಿರಬೇಕು ಎಂಬುದನ್ನು ತಮ್ಮ ಕರ್ಮ ಭೂಮಿ ಹೊಸರಿತ್ತಿಯಲ್ಲಿ ಕಟ್ಟಿ ತೋರಿಸಿರುವುದನ್ನ, ಅದಕ್ಕೆ ಅವರು ಪಟ್ಟ ಶ್ರಮ, ಅವರ ಜೀವಿತ ಅವಧಿಯಲ್ಲಿ

ನೆರವೇರದ ಆ ಗುರುಕುಲ ಹೇಗೆ ಹತ್ತು–ಹಲವು ಸಂಕಷ್ಟಗಳನ್ನು ಎದುರಿಸಿ, ನಂತರದಲ್ಲಿ ಆ ನಾಡಿನ ಬಡ ರೈತರ ಮಕ್ಕಳಿಗೆ ದಾರಿದೀಪವಾಯಿತೆಂಬುದನ್ನು ತಿಳಿಸಿಕೊಡುವುದಾಗಿದೆ.

ಈ ಹೊಸರಿತ್ತಿ ಸುತ್ತಲಿನ ಪ್ರದೇಶದಲ್ಲಿ ತನ್ನ ಚಳುವಳಿಯ ಕೇಂದ್ರ ಮಾಡಿಕೊಂಡು ಮೈಲಾರ ಮಹದೇವಪ್ಪ ತನ್ನದೇ ಆದ ಚಳುವಳಿಕಾರರ ತಂಡವನ್ನು ಕಟ್ಟಿಕೊಂಡು ಹೊಸರಿತ್ತಿ ಹಾಗೂ ಕೊರಡೂರುಗಳ ಆಶ್ರಮಗಳನ್ನು ಕೇಂದ್ರಸ್ಥಾನ ಮಾಡಿಕೊಂಡು ಇಡೀ ಜಿಲ್ಲೆಯ ಸುತ್ತ–ಮುತ್ತ ಸುಮಾರು ೭೫ಕ್ಕೂ ಹೆಚ್ಚು ಕಾರ್ಯಗಳನ್ನು ಸಾಧಿಸಿದ್ದು, ಮತ್ತು ಅವರು ಎದುರಿಸಿದ ಹತ್ತು–ಹಲವು ತೊಂದರೆಗಳನ್ನು ನಿರೂಪಿಸುವುದರೊಂದಿಗೆ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಹೊಸರಿತ್ತಿಯ ಕಂದಾಯ ಕೇಂದ್ರದಲ್ಲಿ ತನ್ನ ಸಹಪಾಠಿಗಳೊಂದಿಗೆ ಹುತಾತ್ಮರಾಗುವ ಮುನ್ನ, ಹುತಾತ್ಮರಾದ ದಿನದ ಭೀಕರ ಘಟನೆ ಮತ್ತು ಮೂರು ಜನ ಹುತಾತ್ಮರಾದ ನಂತರದಲ್ಲಿ ಜಿಲ್ಲೆಯಲ್ಲಿ ನಡೆದ ಘಟನೆಗಳನ್ನೂ ಈ ಕಿರುಪುಸ್ತಕ ತಿಳಿಸುತ್ತದೆ ಎಂಬ ಆಶಾಭಾವ ನನ್ನದು

**– ಡಾ. ಹೇಮಪ್ಪ ಬ. ಕೆಂಚಳ್ಳಿ**

ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಸರಿತ್ತಿ: ಪೀಠಿಕೆ | ೧೫ |
| ಅಧ್ಯಯನದ ಉದ್ದೇಶ | ೧೬ |
| ಹೊಸರಿತ್ತಿಯ ಹೊಸ ಆಶ್ರಮ | ೨೨ |
| ಹಳ್ಳಕೇರಿ ಗುದ್ಲೆಪ್ಪನವರು | ೨೪ |
| ವೈಶಿಷ್ಟ್ಯಪೂರ್ಣ ಗಾಂಧೀ ಗ್ರಾಮೀಣ ಗುರುಕುಲದ ಸಂಸ್ಥಾಪಕರು | ೩೧ |
| ಹೊಸರಿತ್ತಿ ಆಶ್ರಮದ ಚಳುವಳಿಕಾರರಿಂದ ಹತಭಾಗಿನಿಯರ ಮನ ಪರಿವರ್ತಿಸಿದ ಘಟನೆ | ೩೬ |
| ಮೈಲಾರ ಮಹದೇವಪ್ಪ | ೩೮ |
| ಮಹದೇವಪ್ಪನ ನಾಯಕತ್ವದಲ್ಲಿ ಮಾಡಿದ ಪ್ರಮುಖ ಕಾರ್ಯಗಳು | ೪೪ |
| ಕೊನೆಯ ಬಾರಿ ಪತ್ನಿ ಮತ್ತು ಮಗಳನ್ನು ನೋಡಿದ ಮಹದೇವಪ್ಪ | ೫೦ |
| ಹೊಸರಿತ್ತಿ ಕಂದಾಯ ಕೇಂದ್ರದ ಮೇಲೆ ದಾಳಿ ಮಾಡುವ ಮುನ್ನ ಮಹದೇವಪ್ಪ ಮೈಲಾರರ ತಂಡದ ಉಪಾಯ ಹಾಗೂ ಸಂಭ್ರಮ | ೫೨ |
| ಜಿಲ್ಲೆಯ ನೆರೆಯ ತಾಲೂಕುಗಳಿಂದ ಬಂದು ಹೊಸರಿತ್ತಿಯಲ್ಲಿ ಹುತಾತ್ಮರಾದ ಸ್ವಾತಂತ್ರ್ಯವೀರರು | ೫೬ |
| ಮಹದೇವಪ್ಪನವರ ತಂಡದ ಪ್ರಮುಖ ಸದಸ್ಯರು | ೫೯ |

ಮಹದೇವಪ್ಪನವರ ತಂಡ ಕ್ಯಾಂಪು ಮಾಡಿದ ಸ್ಥಳಗಳು ೬೦
ಮಹದೇವಪ್ಪ ಮೈಲಾರ ಭೂಗತಕಾರ್ಯದ ಯೋಜನೆ ಹೇಗಿರುತ್ತಿತ್ತು; ೬೧
ಹೊಸರಿತ್ತಿ ಸಮೀಪದ ಹಾಲಗಿ ಭಾಗದ ಮಹಿಳೆಯರು ಮಾಡಿದ ಸಹಾಯ ೬೨
ಜಮಿನ್ದಾರನ ಸೇವಕ ದುರಗಪ್ಪ ಹರಿಜನನ ಮಾಡಿದ ಸಹಾಯ ೬೩
ಮಹದೇವಪ್ಪ ಮೈಲಾರ ಕಂದಾಯ ಕೇಂದ್ರಗಳಲ್ಲಿ ಲೂಟಿ ಮಾಡುತ್ತಿದ್ದ ಹಣವನ್ನು ಏನು ಮಾಡುತ್ತಿದ್ದ? ೬೫
ಚಳುವಳಿಕಾರ ಪರಮಣ್ಣ ಹರಕಂಗಿಯವರು, ದೇವೇಂದ್ರಪ್ಪ ವಿಭೂತಿ, ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿ ಹಾಗೂ ನಾಗವ್ವ ರಾಮಣ್ಣ ಉಂಡೇರ ಈ ಚಳುವಳಿಕಾರರು: ೬೬
ಪರಮಣ್ಣ ಲಿಂಗನಗೌಡ ಹರಕಂಗಿ ೬೭
ದೇವೇಂದ್ರಪ್ಪ ವಿಭೂತಿ ೭೦
ಗ್ರಂಥಋಣ ೭೯
ಹೊಸರಿತ್ತಿ ಭಾಗದದಲ್ಲಿ ಚಳುವಳಿಯಲ್ಲಿ ಮಹದೇವಪ್ಪ ಮೈಲಾರ ತಂಡದಲ್ಲಿ ಭಾಗಿಗಳಾದ ಹಾಗೂ ವಿವಿಧ ರೀತಿಯಲ್ಲಿ ಸಹಾಯ ಸಲ್ಲಿಸಿದವರ ರಾಷ್ಟ್ರೀಯ ಹೋರಾಟಗಾರರ ಯಾದಿ ೮೪
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೮೫

———

# ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಸರಿತ್ತಿ

**ಪೀಠಿಕೆ:** ಪ್ರಪಂಚದಲ್ಲಿ ಮಾನವನು ಸಂಘ ಜೀವನ ಆರಂಭಿಸಿದ ದಿನದಿಂದಲೂ ಒಂದಿಲ್ಲೊಂದು ಹೋರಾಟ ನಡೆಸುತ್ತಲೇ ಬಂದಿದ್ದಾನೆ. ಹೋರಾಟ ಅವನ ಹಕ್ಕು ಅದರ ಮುಖಾಂತರ ತನಗೆ ಬೇಕಾದುದನ್ನು ಪಡೆದು ಬೇಡವಾದುದನ್ನು ತಿರಸ್ಕರಿಸುತ್ತಾನೆ. ಅಂಥಹ ಹಲವು ಹೋರಾಟಗಳಲ್ಲಿ ಸ್ವಾತಂತ್ರ್ಯ ಹೋರಾಟವೂ ಒಂದು. ಕಾರಣ ಸ್ವಾತಂತ್ರ್ಯವಿಲ್ಲದ ವ್ಯಕ್ತಿ ಅತಂತ್ರನಾಗಿ ಬದುಕಬೇಕಾಗುತ್ತದೆ. ಸ್ವಾತಂತ್ರ್ಯ ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಬಹಳ ಅವಶ್ಯ. ಅಂತಹ ಸ್ವಾತಂತ್ರ್ಯಕ್ಕೆ ಹೋರಾಡುವುದು ಅವನ ಹಕ್ಕಾಗುತ್ತದೆ. ಅದು ದೊರಕದಿದ್ದಾಗ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಮತ್ತು ಆ ಸ್ವಾತ್ರಂತ್ರ್ಯಕ್ಕಾಗಿ ಬಲಿದಾನಕ್ಕೂ ಸಿದ್ಧನಾಗುತ್ತಾನೆ. ಅಂತಹ ಮೂರು ಜನ ಸ್ವಾತಂತ್ರ್ಯ ವೀರರು ಹುತಾತ್ಮರಾಗಿರುವುದು ಹಾವೇರಿ ಜಿಲ್ಲೆಯ ಹೊಸರಿತ್ತಿ ಗ್ರಾಮದಲ್ಲಿ. ಈ ಗ್ರಾಮ ಬರೀ ಬಲಿದಾನಕ್ಕೆ ಮಾತ್ರ ಸಾಕ್ಷಿಯಾಗಿರದೇ ಮತ್ತೊಬ್ಬ ಹೋರಾಟಗಾರ ಚಳುವಳಿಯಲ್ಲಿ ಭಾಗವಹಿಸುತ್ತಾ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅವರು ಹೇಳುತ್ತಿದ್ದ ಮತ್ತು ಅದನ್ನು ಪಾಲಿಸುತ್ತಿದ್ದ 'ಗುರುಕುಲ ಶಿಕ್ಷಣ' ವ್ಯವಸ್ಥೆಯನ್ನು ಸಕಾರಗೊಳಿಸಿದವರು ಇದೇ ಗ್ರಾಮದ ಹಳ್ಳಿಕೇರಿ ಗುದ್ಲೆಪ್ಪನವರು. ಹೀಗೆ ಹತ್ತು–ಹಲವು ಕಾರ್ಯಗಳಿಗೆ ಪುಣ್ಯಭೂಮಿಯಾಗಿ ಇಂದಿಗೂ ತನ್ನತ್ತ ಎಲ್ಲರನ್ನು ಸೆಳೆಯುವಂತಹ ಗ್ರಾಮವಾಗಿ, ತನ್ನ ಹಿಂದಿನ ಎಲ್ಲ ಕಥೆಗಳನ್ನು ಹೇಳುವ ಮೂಕಸಾಕ್ಷಿಯಾಗಿ ನಿಂತಿದೆ. ಐತಿಹಾಸಿಕವಾಗಿಯೂ ಶಾತವಾಹನರ ಆಡಳಿತಕ್ಕೆ ಒಳಪಟ್ಟಿರುವ ಗ್ರಾಮ. ಭಾರತದ ರಾಷ್ಟ್ರೀಯ ಆಂದೋಲನದಲ್ಲಿ ಹಳ್ಳಿಕೇರಿ ಗುದ್ಲೆಪ್ಪನವರಿಂದ ೧೯೨೮ರಲ್ಲಿ ಸ್ಥಾಪಿಸಿ ಹೊಸರಿತ್ತಿ 'ಗಾಂಧೀ ಆಶ್ರಮ' ರಾಜಕೀಯ ಯೋಧರ ಗರಡಿಮನೆಯಾಗಿತ್ತು. ಅಲ್ಲದೇ ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಹುತಾತ್ಮ ಮಹದೇವಪ್ಪ ಮೈಲಾರ, ತಿರುಕಪ್ಪ ಮಡಿವಾಳರ ಹಾಗೂ ವೀರಯ್ಯ ಹಿರೇಮಠ ಇವರು ರಕ್ತ ಸಮರ್ಪಿಸಿದ

ಪವಿತ್ರ ಭೂಮಿ ಈ ಹೊಸರಿತ್ತಿ. ಹಾಗಾಗಿ ಈ ಊರನ್ನೇ ಕೇಂದ್ರವನ್ನಾಗಿಟ್ಟು ಕೊಂಡು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾಷ್ಟ್ರೀಯ ಹೋರಾಟದ ಜ್ವಾಲೆ ಹೇಗೆ ವಿಸ್ತರಿಸಿತ್ತು ಎಂಬುದನ್ನು ಕಿರುಪುಸ್ತಕದಲ್ಲಿ ತಿಳಿಸುವ ಕಾರ್ಯ ಮಾಡಲಾಗಿದೆ.

**ಜಿಲ್ಲೆಯ ಹಿನ್ನೆಲೆ:** ಹಾವೇರಿ ಜಿಲ್ಲೆ ಕರ್ನಾಟಕ ರಾಜ್ಯದ ಮಧ್ಯ ಭಾಗದಲ್ಲಿದ್ದು ಉತ್ತರದ ಬೀದರ ಮತ್ತು ದಕ್ಷಿಣದ ಕೊಳ್ಳೆಗಾಲ ಇವುಗಳು ಸಮಾನಾಂತರ ಅಂತರದಲ್ಲಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೆಬ್ಬಾಗಿಲಿನಂತಿರುವ ಈ ಜಿಲ್ಲೆಯು ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದ ಅನೇಕ ಶಾಸನಗಳು, ಸ್ಮಾರಕಗಳಿಗೆ ಏನೂ ಕೊರತೆಯಿಲ್ಲ. ಅಲ್ಲದೇ ಸಂತ ಶಿಶುನಾಳರ ಶರೀಫರು, ಭಕ್ತಶ್ರೇಷ್ಠ ಕನಕದಾಸರು, ವರಕವಿ ಸರ್ವಜ್ಞ, ಹಾನಗಲ್ಲ ಕುಮಾರಸ್ವಾಮಿಗಳು, ವಾಗೀಶ ಪಂಡಿತಾರಾಧ್ಯರು, ಕಾದಂಬರಿ ಪಿತಾಮಹ ಗಳಗನಾಥರು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ವಿ. ಕೃ. ಗೋಕಾಕರು ಹೀಗೆ ಮುಂತಾದ ಮಹನೀಯರಿಗೆ ಜನ್ಮ ನೀಡಿದ ಈ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲೂ ಅಮೂಲ್ಯವಾದ ಕೊಡುಗೆ ನೀಡಿದ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಚಳುವಳಿಯ ರಕ್ತದ ಕಲೆ ಅಂಟಿರುವುದನ್ನು ಆಧಾರಗಳು ಸಾರಿ ಸಾರಿ ಹೇಳುತ್ತವೆ. ಈ ಜಿಲ್ಲೆಯಲ್ಲಿ ಸುಮಾರು ೬೮೫ಕ್ಕೂ ಹೆಚ್ಚು ಚಳುವಳಿಗಾರರು ಭಾಗವಹಿಸಿದ್ದು ರಾಷ್ಟ್ರೀಯ ಹೋರಾಟದಲ್ಲಿ ಜಿಲ್ಲೆ ನಿರ್ವಹಿಸಿದ ಪಾತ್ರ ಅರ್ಥವಾಗುತ್ತದೆ. ಅಂತಹ ಹಾವೇರಿ ಜಿಲ್ಲೆಯ ಗ್ರಾಮ ಹೊಸರಿತ್ತಿ ಗ್ರಾಮ. ರಾಷ್ಟ್ರೀಯ ಹೋರಾಟದಲ್ಲಿ ಬಲಿದಾನಕ್ಕೆ ಸಾಕ್ಷಿಯಾದ ಈ ಗ್ರಾಮ ಯಾಕೆ ಅಷ್ಟೊಂದು ಮಹತ್ವವನ್ನು ಪಡೆಯಿತು, ಯಾಕೆ ಆ ಚಳುವಳಿಯ ವೀರರು ಅಲ್ಲಿ ತಮ್ಮ ಪ್ರಾಣಗಳನ್ನು ಭಾರತಮಾತೆಗೆ ಅರ್ಪಿಸಿದರು ಎಂಬ ಕುತುಹಲಕಾರಿಯಾದ, ರೋಮಾಂಚನಗೊಳ್ಳುವಂತಹ ಘಟನೆಗೆ ಹೇಗೆ ಸಾಕ್ಷಿಯಾಯಿತು, ಇಲ್ಲಿಯೇ ಏಕೆ ಗಾಂಧೀಜಿಯವರ ಕನಸಿನ ಆದರ್ಶ 'ಗುರುಕುಲ' ಶಿಕ್ಷಣ ವ್ಯವಸ್ಥೆ ತಲೆಯೆತ್ತಿತ್ತು ಎಂಬುದನ್ನು ವಿಷಯದ ಮಿತಿಯಲ್ಲಿ ವಿವರಿಸುತ್ತ ಮತ್ತು ಆ ಘಟನೆಗೆ ಸಾಕ್ಷಿಯಾದ ಛಾಯಾಚಿತ್ರಗಳನ್ನು ಕೊಡುವುದರೊಂದಿಗೆ ಈ ಕಿರುಪುಸ್ತಕಕ್ಕೆ ಮೆರಗು ನೀಡಲು ಪ್ರಯತ್ನಿಸಿದ್ದೇನೆ.



**ಅಧ್ಯಯನದ ಉದ್ದೇಶ :**

- ಈ ಕಿರುಪುಸ್ತಕದಲ್ಲಿ ಹಾವೇರಿ ಜಿಲ್ಲೆ ಹಾಗೂ ತಾಲೂಕಿನ ಹೊಸರಿತ್ತಿ ಎಂಬ ಗ್ರಾಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರ್ವಹಿಸಿದ ಪಾತ್ರ, ಗಾಂಧೀಜಿಯವರು ವಿಧಾಯಕ ಕಾರ್ಯಗಳನ್ನೂ, ವಿಚಾರಗಳನ್ನು ಸ್ವತಃ ಪಾಲಿಸಿ ಅವುಗಳನ್ನು ಸುತ್ತ ಮುತ್ತಲಿನ ಗ್ರಾಮಗಳಿಗೆ ಸ್ವಾತಂತ್ರ್ಯದ ಕಿಚ್ಚು ವ್ಯಾಪಿಸಿದ ಬಗ್ಗೆ ಮಾಹಿತಿ ನೀಡುವುದು.
- ಹೊಸರಿತ್ತಿ ಗ್ರಾಮದಲ್ಲಿ ಮೈಲಾರ ಮಹೇವಪ್ಪ, ಹಳ್ಳಿಕೇರಿ ಗುದ್ಲೆಪ್ಪನವರ ನೇತೃತ್ವದಲ್ಲಿ ಅವರ ಸಂಗಡಿಗರಿಂದ ನಡೆದ ಮಹತ್ತರ ಕಾರ್ಯಗಳನ್ನು ತಿಳಿಸುವುದು.
- ಕಂದಾಯದ ಕೇಂದ್ರ ಹೊಸರಿತ್ತಿಯಲ್ಲಿಯೇ ಚಳುವಳಿಕಾರರು ಏಕೆ? ಹೇಗೆ? ಹುತಾತ್ಮರಾದರು ಎಂಬುದನ್ನು ತಿಳಿಯುವುದು.
- ಹೊಸರಿತ್ತಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಳುವಳಿಕಾರರಿಗೆ ನೀಡಿದ ಆಶ್ರಯವನ್ನು ಪರಿಚಯಿಸುವುದು ಮತ್ತು ಹೊಸರಿತ್ತಿ ಎಂಬ ಈ ಗ್ರಾಮ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳು ಹೇಗೆ ಚಳುವಳಿಯಲ್ಲಿ ಹಾಗೂ ಸ್ವಾತಂತ್ರ್ಯ ಚಳುವಳಿಯೊಂದಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಸಾಧನೆಗೆ ಕಾರಣವಾಯಿತೆನ್ನುವುದನ್ನು ಈ ಕೃತಿಯ ಮೂಲಕ ಕಟ್ಟಿಕೊಡುವುದು.

**ವ್ಯಾಪ್ತಿ:** ಕಿರುಪುಸ್ತಕದ ಉದ್ದೇಶ ರಾಷ್ಟ್ರೀಯ ಹೋರಾಟದಲ್ಲಿ ಗಾಂಧೀಜಿಯವರ ಆಲೋಚನೆಗಳನ್ನು, ಆದೇಶಗಳನ್ನು ಪಾಲಿಸುವ ದೊಡ್ಡ ಕಾಂಗ್ರೆಸ್ ಕಾರ್ಯಕರ್ತರ ಪಡೆ ಇದ್ದು, ಅದರಲ್ಲಿಯೂ ಹೊಸರಿತ್ತಿಗೆ ಅನ್ವಯಿಸಿ ವಿಷಯಗಳನ್ನು ಪರಿಗಣಿಸಿದ್ದರೂ, ವಿಷಯಕ್ಕೆ ಅನುಗುಣವಾಗಿ ಅದಕ್ಕೆ ಸುತ್ತಮುತ್ತಲಿನ ಪ್ರದೇಶ ಹಾಗೂ ವ್ಯಕ್ತಿಗಳ ವಿಷಯ ವಿವರಣೆಗೆ ಗಮನಿಸಲಾಗಿದೆ. ಸಾಮಾನ್ಯವಾಗಿ ಗಾಂಧೀಜಿಯವರ ಗುರುಕುಲ ಆಶ್ರಮವನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಹಳ್ಳಿಕೇರಿ ಗುದ್ಲೆಪ್ಪನವರ ಶ್ರಮ ಸಾರ್ಥಕಗೊಂಡಿದ್ದು, ಅದಕ್ಕೆ ಅವರದೇ ಆದ ರೂಪರೇಷೆಗಳ ವಿವರ ಮತ್ತು ಇದೇ ಹೊಸರಿತ್ತಿ ಮೂರು ಜನ ಸ್ವಾತಂತ್ರ್ಯ ವೀರರು ಸ್ವಾತಂತ್ರ್ಯಕ್ಕಾಗಿ ರಕ್ತ ಹರಿಸಿದ ಘಟನೆಗೆ

ಸಾಕ್ಷಿಯಾಗಿ ನಿಂತ ಬಗ್ಗೆ ಮಾಹಿತಿ ನೀಡಲಿದ್ದು, ಈ ಎರಡು ವಿಷಯಗಳಿಗೆ ಅನ್ವಯಿಸಿ ಊರ ಸುತ್ತಮುತ್ತಲಿನ ವ್ಯಾಪ್ತಿಗೆ ಒಳಪಟ್ಟು ವಿಷಯ ವಿವರಿಸಲಾಗಿರುತ್ತದೆ.

ಹೊಸರಿತ್ತಿಯ ಬಗ್ಗೆ ಗಮನಿಸುವುದಾದರೆ, ಈ ಗ್ರಾಮ ಶ್ರೀ ಗುದ್ದಲೀಶಸ್ವಾಮಿಗಳ, ಶ್ರೀ ಧೀರೇಂದ್ರ ಸ್ವಾಮಿಗಳ ಪವಿತ್ರ ಪುಣ್ಯ ಕ್ಷೇತ್ರವಾಗಿರುವ ಈ ನಾಡು ಬಹುಕಾಲದಿಂದಲೂ ತನ್ನ ಹೆಸರನ್ನು ಉಳಿಸಿಕೊಂಡು ಬಂದಿದೆ. ಈ ಊರು ಸಹಸ್ರಾರು ಭಕ್ತರು ಶ್ರೀ ಧೀರೇಂದ್ರಸ್ವಾಮಿಗಳ ಆರಾಧನೆಗೆ ಪ್ರತಿವರ್ಷ ನಮ್ಮ ನಾಡು ಹಾಗೂ ದೇಶದ ವಿವಿಧ ಭಾಗಗಳಿಂದ ಆಗಮಿಸುತ್ತಾರೆ. ಇದೊಂದು ಉಪಮಂತ್ರಾಲಯವಾಗಿದ್ದು, ಇಲ್ಲಿಗೆ ಆಗಾಗ ಮಂತ್ರಾಲಯ, ಉಡುಪಿ, ಸೋಂದಾ ಮುಂತಾದ ಮಠಗಳ ಯತಿವರ್ಯರು ಆಗಮಿಸುತ್ತಾರೆ. ಹೀಗಾಗಿ ಶ್ರೀ ಧೀರೇಂದ್ರ ಸ್ವಾಮಿಗಳ ಭಕ್ತಾದಿಗಳಿಂದ ಹೊಸರಿತ್ತಿ ನಾಡು ಭಾರತದೆಲ್ಲಡೆ ತನ್ನ ಹೆಸರನ್ನು ಉಳಿಸಿಕೊಂಡು ಬಂದಿದೆ. ಈ ಊರಿನ ಮತ್ತೊಂದು ವಿಶೇಷವೆಂದರೆ, ಬನದಹುಣ್ಣಿಮೆಯಿಂದ ಶಿವರಾತ್ರಿಯವರೆಗೆ ಸತತ ಎರಡು ತಿಂಗಳು ಜರುಗುವ 'ದನದ ಜಾತ್ರೆ'ಯು ಕರ್ನಾಟಕದಲ್ಲಿಯೇ ಒಂದು ವಿಶೇಷವಾದದ್ದು, ಇಲ್ಲಿಗೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮುಂತಾದ ರಾಜ್ಯಗಳ ಕಡೆಯಿಂದ ವಿವಿಧ ಜಾತಿಗಳ ಹೋರಿಗಳು, ಹೋರಿಕರುಗಳು, ಕಸಿಎತ್ತುಗಳು, ಆಕಳು, ಎಮ್ಮೆ, ಕುದುರೆಗಳು ಸಹ ಬಂದು ಸೇರುತ್ತವೆ. ಈ ರೀತಿಯ ದನಗಳ ಜಾತ್ರೆಯಿಂದಲೂ ಈ ಹೊಸರಿತ್ತಿ ತನ್ನ ಹೆಸರನ್ನು ಪ್ರಸರಿಸಿ ಕೊಂಡಿದೆ.

ಇದೇ ನಾಡು ಸ್ವಾತಂತ್ರ್ಯ ಚಳುವಳಿಯಲ್ಲಿಯೂ ದೇಶದ ಗಮನ ಸೆಳೆದಿರುವುದನ್ನು ಮರೆಯುವಂತಿಲ್ಲ. ಹಳ್ಳಿಕೇರಿ ಗುದ್ಲೆಪ್ಪನವರು ಚಳುವಳಿಯೊಂದಿಗೆ ಈ ಊರಲ್ಲಿ ಗಾಂಧೀಜಿಯ ಆದರ್ಶದ 'ಗ್ರಾಮೀಣ ಗುರುಕುಲ'ವನ್ನು ಕಟ್ಟಿ ಈ ನಾಡನ್ನು ಮತ್ತಷ್ಟು ಎತ್ತರಕ್ಕೆ ಹೆಸರು ತಂದುಕೊಟ್ಟರೆ, ಮತ್ತೊಬ್ಬ ಗಾಂಧೀಜಿಯವರ ಪರಮ ಶಿಷ್ಯ, ಹುತಾತ್ಮ ಮೈಲಾರ ಮಹದೇವಪ್ಪ ತನ್ನ ಎರಡು ಜನ ಸಂಗಡಿಗರೊಂದಿಗೆ ಇದೇ ಊರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನ ಅಂದಿನ ಕಂದಾಯ ಕೇಂದ್ರದಲ್ಲಿ ಹುತಾತ್ಮರಾಗಿ ದೇಶಕ್ಕೆ ಹೊಸರಿತ್ತಿಯನ್ನು ಹೊಸ ರೀತಿಯಲ್ಲಿ ಪರಿಚಯಿಸಿ ಕೊಟ್ಟಿದ್ದನ್ನು ನಾಡು ಹಾಗೂ ದೇಶ ಮರೆಯುವಂತಿಲ್ಲ.



ಹಾವೇರಿ ತಾಲೂಕಿನ ಹೊಸರಿತ್ತಿಯು ಅಷ್ಟೊಂದು ದೊಡ್ಡ ಗ್ರಾಮವೇನೂ ಅಲ್ಲ. ಮೂರರಿಂದ ನಾಲ್ಕು ಸಾವಿರ ಜನಸಂಖ್ಯೆಯ ಗ್ರಾಮ. ಇಂದೂ ಒಕ್ಕಲುತನದ ಗ್ರಾಮವಾಗಿ ಪ್ರಸಿದ್ಧಿ ಪಡೆದಿಲ್ಲ. ಆದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಈ ಊರು ವ್ಯಾಪಾರಿ ಗ್ರಾಮವಾಗಿ ಮುಖ್ಯವಾಗಿ ಕೈಗಾರಿಕೆ, ನೇಕಾರಿಕೆಯ ಗ್ರಾಮವಾಗಿ ಪ್ರಸಿದ್ಧಿ ಪಡೆದಿತ್ತು. ಇಲ್ಲಿಯ ಜನಸಂಖ್ಯೆಯಲ್ಲಿ ಪ್ರತಿಶತ ೭೦% ಜನರು ನೇಕಾರಿಕೆ ಉದ್ಯೋಗಿಗಳೇ ಆಗಿದ್ದಾರೆ. ಆಗ ಈ ಊರಿನಲ್ಲಿ ಯಾವ ಓಣಿಯಲ್ಲಿ ಹೋದರೂ 'ಜಂ ಜಟಕ್' ಎಂಬ ಕೈಮಗ್ಗಗಳ ನೇಯ್ಗೆಯ ಧ್ವನಿಯ ಝೇಂಕಾರ ಕೇಳಿಬರುತ್ತಿತ್ತು. ಇಲ್ಲಿಯ ಖಾದಿ ಉತ್ಪಾದನೆಯು ಕರ್ನಾಟಕದಲ್ಲಿಯೇ ಪ್ರಸಿದ್ಧಿ ಪಡೆದಿತ್ತು. ಧಾರವಾಡ ಜಿಲ್ಲೆಯ 'ಉಪ್ಪಿನ ಬೆಟಗೇರಿ', ಆಂಧ್ರಪ್ರದೇಶ 'ಗದ್ವಾಲ'ಗಳ ಖಾದಿಗಳಿಗಿಂತ ಪ್ರಸಿದ್ಧಿ ಪಡೆದಿತ್ತು. ಆದರೆ, ದುರ್ದೈವದ ಸಂಗತಿಯೆಂದರೆ, ಇಂದು ಈ ಊರಲ್ಲಿ ಒಂದಾದರೂ ಕೈಮಗ್ಗಗಳ ಧ್ವನಿ ಕೇಳಿಬರುತ್ತಿಲ್ಲ. ಇಲ್ಲಿಯ ಎಲ್ಲ ನೇಕಾರ ಬಂಧುಗಳು ಈ ಊರನ್ನು ಬಿಟ್ಟು ಬೇರೆ ಬೇರೆ ಶಹರಗಳಿಗೆ ತಮ್ಮ ಉದ್ಯೋಗಾರ್ಥವಾಗಿ ಹೋಗಿಬಿಟ್ಟಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಈ ಹೊಸರಿತ್ತಿ ನಾಡಿನಿಂದಲೇ ಖಾದಿಯ ಬಟ್ಟೆಗಳಲ್ಲದೆ ಇತರೆ ನೂಲಿನ ಬಟ್ಟೆಗಳೂ, ಸೀರೆ, ಕುಪ್ಪಸ, ಧೋತರ, ರುಮಾಲು, ಪಟಗಾ ಮುಂತಾದವು ಮಾರಾಟಕ್ಕೆ ಹೊರಹೋಗುತ್ತಿದ್ದವು. ಬಹು ಮಟ್ಟಿಗೆ ೨೦ನೇ ಶತಮಾನದ ಆದಿ, ಮಧ್ಯಭಾಗದವರೆಗೆ "ಹೊಸರಿತ್ತಿ ಗಾಂಧೀ ಆಶ್ರಮ" ಮತ್ತು "ಕೊರಡೂರು ಗ್ರಾಮ ಸೇವಾಶ್ರಮ"ಗಳ ಕಾರ್ಯಕರ್ತರ ಕರ್ತೃತ್ವ ಶಕ್ತಿಯಿಂದ ಉತ್ಪಾದಿಸಲ್ಪಟ್ಟ ಖಾದಿಯು ಕರ್ನಾಟಕದಲ್ಲಿಯೇ ಪ್ರಸಿದ್ಧಿ ಪಡೆದಿತ್ತು.

ಹೊಸರಿತ್ತಿಗೆ ನೈಸರ್ಗಿಕ ಸಂಪತ್ತಿನ ಕೊರತೆ ಕಾಡುತ್ತದೆ. ಏಕೆಂದರೆ, ಈ ಊರಿನ ಜನತೆಗೆ ಬಹುಕಡಿಮೆ ಜಮೀನುಗಳು. ಕೇವಲ ದಕ್ಷಿಣಕ್ಕೆ ಎರಡು ಕಿ.ಮೀ.ವರೆಗೆ ಮಾತ್ರ ಈ ಊರ ಜಮೀನು ಇರುತ್ತವೆ. ಹೀಗಾಗಿ ವ್ಯಾಪಾರ ವಾಣಿಜ್ಯದಲ್ಲಿ ಮುಂದುವರೆದಿದ್ದಾರೆ. ದೊಡ್ಡ ದೊಡ್ಡ ಶಹರಗಳಿಗೆ ಸ್ಪರ್ಧೆ ಮಾಡಿ ಸರಕು ತಂದು ಸುತ್ತಲಿನ ಹಳ್ಳಿಯ ಗ್ರಾಹಕರಿಗೆ ಅಲ್ಪ ಲಾಭದ ಮೇಲೆ ಸರಕು ಮಾರುತ್ತ ವ್ಯಾಪಾರ ಹೆಚ್ಚಿಸಿಕೊಂಡು ತಮ್ಮೂರನ್ನು ವ್ಯಾಪಾರಿ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ ಎಂಬುದು ಹೊಸರಿತ್ತಿಯ ಸಮೀಪದ ನೆಗಳೂರು ಗ್ರಾಮದ ಚಳುವಳಿಕಾರ ೯೨ ವರ್ಷದ ಪರಮಣ್ಣ ಹರಕಂಗಿ ಹೇಳುತ್ತಾರೆ.

ಹೊಸರಿತ್ತಿ ಆಶ್ರಮದ ಬಗ್ಗೆ ಅಂದಿನ ಚಳುವಳಿಕಾರ ಪರಮಣ್ಣ ಹರಕಂಗಿಯವರು ಹೇಳುವಂತೆ 'ಆ ಆಶ್ರಮದ ನಂಟು ನಾನು ೧೪–೧೫ ವರ್ಷದವನಿದ್ದಾಗ ಅಂದರೆ ೧೯೪೦–೪೨ ಸಾಲಿನಲ್ಲಿ ಆಗಾಗ ಹೋಗಿ ಬರುವ ಪರಿಪಾಠವಿತ್ತು. ಅದು ನಮ್ಮ ತಾಯಿ, ಅಜ್ಜಿಯವರು ಎಲೆರಾಟಿಯ ಮೇಲೆ ಕೂತು(ರಾಟಿ, ಕದಿರು, ಹಾಸಿನಹರಿ, ರಾತ್ಯಾಳ, ಹಳ್ವಿಲಾಳಿ, ಇವು ನೇಕಾರಿಕೆಗಳ ನೂಲುಗಾರಿಕೆಯ ಉಪಕರಣಗಳು)ಹಾಸಿನ ಹರಿಯ ಮೇಲೆ ಪಟ್ಟಿ ಮಾಡಿ ಕೊಡುತ್ತಿದ್ದರು. ನಾನು ಇನ್ನೂ ಕೆಲ ಗೆಳೆಯರು ಅವನ್ನು ಆಶ್ರಮಕ್ಕೆ ಕೊಟ್ಟು ಹಣ ಪಡೆದು ಅಲ್ಲಿಯೇ ಹಂಜಿ ಖರೀದಿ ಮಾಡಿಕೊಂಡು ಸಾಮಾನ್ಯವಾಗಿ ಶನಿವಾರ ಹೊಸರಿತ್ತಿಯ ಸಂತೆ ಇರುವುದರಿಂದ ಅಂದು ನಮ್ಮ ಶಾಲೆ ಅರ್ಧದಿನ ಶಾಲೆ ಇರುತ್ತಿದ್ದರಿಂದ ನಮ್ಮನ್ನು ಮಧ್ಯಾಹ್ನ ಕಳಿಸುತ್ತಿದ್ದರು. ಒಂದು ವೇಳೆ ಹೊಸರಿತ್ತಿ ಆಶ್ರಮದಲ್ಲಿ ಹಂಜಿ ಸಿಗದಿದ್ದರೆ ಕೊರಡೂರಿಗೆ ಹೋಗಿ ತರುತ್ತಿದ್ದೆವು. ಹೀಗೆ ಆಶ್ರಮಗಳ, ಆಶ್ರಮವಾಸಿಗಳ ಪರಿಚಯ ಉಂಟಾಗಿ ನನಗೆ ಆಶ್ರಮದ ಕಾರ್ಯಗಳು ಹೇಗೆ ನಡೆಯುತ್ತಿದ್ದವೆಂಬ ಸಂಪೂರ್ಣ ಪರಿಚಯವಾಗುತ್ತ ಬಂದಿತು. ಮೊದಲು ಹೊಸರಿತ್ತಿ ಆಶ್ರಮವನ್ನು ತೆಂಗಿನ ಗರಿ ಬಿದಿರುಗಳಿಂದ ಮಾಡಿದ್ದಾಗಿ ರಮಾನಂದರು(ಮೈಲಾರ ಮಹದೇವಪ್ಪನ ತಂಡದ ಸದಸ್ಯರು)ತಿಳಿಸಿದ್ದರು. ಅದಕ್ಕೆ 'ಗಾಂಧೀ ಕುಟೀರ'ಎಂದು ಕರೆಯುತ್ತಿದ್ದರು.

ನಾನು ಪ್ರತ್ಯಕ್ಷ ಕಂಡು ಸಂಪರ್ಕಕ್ಕೆ ಒಳಗಾದ ಹೊಸರಿತ್ತಿ ಗ್ರಾಮದ ಗಾಂಧೀ ಆಶ್ರಮವು ಊರಲ್ಲಿ ಚೆಕ್ಕಿಯವರ ಮನೆಯ ಬಲಕ್ಕೆ, ಗೋಣಿ ಮಹಲಿಂಗಪ್ಪನವರ ಮನೆಯ ಎದುರುಗಡೆ ಪಶ್ಚಿಮಕ್ಕೆ ಬಲಕ್ಕೆ ಚಿಕ್ಕ ಮನೆಯಲ್ಲಿತ್ತು. ಅಲ್ಲಿಯೇ ಲೆಕ್ಕ ಪತ್ರಗಳ ಆಫೀಸು, ಬಲಗಡೆ ಕಟ್ಟೆಯ ಮೇಲೆ ಔಷಧಾಲಯವಿತ್ತು, ಮುಲಾಮುಗಳನ್ನು ಕೊಡುತ್ತಿದ್ದರಲ್ಲದೆ, ಗಾಯ, ಕುರುಹುಗಳಾದರೆ ಅವರೆ ಡ್ರೆಸ್ಸಿಂಗ್ ಮಾಡುತ್ತಿದ್ದರು. ಮುಖ್ಯ ಬಾಗಿಲು ದಾಟುತ್ತಲೆ ಉದ್ದವಾದ ಪಡಸಾಲೆ ಇದ್ದು, ಅಲ್ಲಿ ನಾಲ್ಕರಿಂದ ಐದು ಜನ ಕುಳಿತು ಬಿದರಿನ ಉಪಕರಣಗಳಾದ ರಾಟ್ಯಾಳ ಹಲ್ಪಿಗಳ ಮೇಲೆ ನೂಲು ತೋಡುತ್ತಿದ್ದರು. ಅಲ್ಲದೆ ಕಂಡಿಕಿ ಸುತ್ತಿ ನೇಯುವವರಿಗೆ ಕೊಡುತ್ತಿದ್ದರು. ಪಡಸಾಲೆಯ ಎತ್ತರದ ಗೋಡೆಯಲ್ಲಿ ದಕ್ಷಿಣಕ್ಕೆ ಮುಖ ಮಾಡಿದ ಒಂದು ಕೋಣೆಯ ಬಾಗಿಲು ಇದ್ದು, ಅಲ್ಲಿ ಖಾದಿ ಉತ್ಪಾದನೆಗೆ ಬೇಕಾದ ಹತ್ತಿ ಅರಳಿ, ನೂಲು, ಕಟ್ಟಿಗೆಯ ಸಾಮಾನು, ಹಂಚಿ ಮಣಿ, ರಾಟಿ,



ಮಗ್ಗದ ಸಾಮಾನು ಇಟ್ಟಿರುತ್ತಿದ್ದರು. ಪಡಸಾಲೆಯ ದಕ್ಷಿಣಕ್ಕೆ ಎದುರುಬದರಾಗಿ ನಾಲ್ಕಾರು ಕೈಮಗ್ಗಗಳು ಇದ್ದವು. ಅಲ್ಲಿಯೇ ಅರಿವೆ, ರುಮಾಲು, ಪಟಗಾ, ಕರವಸ್ತ್ರ, ಟಾವೆಲು, ಖಾದಿ ಸೀರೆ, ಧೋತರ ಮುಂತಾದವನ್ನು ನೇಯುತ್ತಿದ್ದರು. ಆ ಮನೆಯ ಹಿಂದೆ ಪೂರ್ವಕ್ಕೆ ಹಿತ್ತಲವಿತ್ತು. ಅದು ವಿಸ್ತಾರವಾಗಿದ್ದು ಸುತ್ತಲೂ ಹಿತ್ತಲಗೋಡೆ ಎತ್ತರವಾಗಿತ್ತು. ಅದರ ದಕ್ಷಿಣದ ಗೋಡೆಗೆ ಹೊಂದಿ ಬಿದರಿನಿಂದ ಮಾಡಿದ ಕೋಣೆಗಳಿದ್ದವು. ಅವುಗಳಲ್ಲಿ ಆಶ್ರಮದ ಕಾರ್ಯಕರ್ತರು ಕೌಟುಂಬಿಕ ಜೀವನ ನಡೆಸುತ್ತಿದ್ದರು. ಆ ಹಿತ್ತಲಿನ ವಿಸ್ತಾರ ಬಯಲಿನಲ್ಲಿಯೇ ಬೆಳಗಿನ ಮತ್ತು ಸಾಯಂಕಾಲದ ಸಾಮೂಹಿಕ ಪ್ರಾರ್ಥನೆ ಜರುಗುತ್ತಿತ್ತು.

ಈ ಹೊಸರಿತ್ತಿ ಆಶ್ರಮದ ಮತ್ತೊಂದು ವಿಶೇಷವೆಂದರೆ, ಪಡಸಾಲೆಯ ಮೇಲಿನ ಮಾಳಗೆಯ ಮಧ್ಯದಲ್ಲಿ ಒಂದು ಚೌಕಾದ ಬೆಳಕಿಂಡಿ ಇತ್ತು. ಅದಕ್ಕೆ ಮೇಲುಗಡೆ ಮಾಳಗಿಯೇ ಮೇಲೆ ಒಂದು ದೊಡ್ಡ ಗಂಟೆ ಇತ್ತು. ಅದರ ನಾಲಿಗೆಗೆ ಹಗ್ಗ ಕಟ್ಟಿ ಬೆಳಕಿಂಡಿಯಿಂದ ಮನೆಯೊಳಗೆ ತಂದು ಅದನ್ನು ಒಂದು ಕಂಬಕ್ಕೆ ಕಟ್ಟಿರುತ್ತಿದ್ದರು. ಹಗ್ಗದ ಸಹಾಯದಿಂದ ಗಂಟೆ, ಗಂಟೆಗೊಮ್ಮೆ ವೇಳೆ ಸೂಚಿಸುತ್ತಿತ್ತು. ಈ ಆಶ್ರಮ ನನಗೆ ಬಹಳ ದಿನದಿಂದ ಪರಿಚಯವಾಗುತ್ತ ಬಂದಿತು. ಈ ಆಶ್ರಮ ಗುದ್ಲೆಪ್ಪನವರ ಹಿರಿತನದಲ್ಲಿ ನಡೆಯುತ್ತಿದ್ದರೂ ನಾನು ಅವರನ್ನು ಈ ಆಶ್ರಮದಲ್ಲಿ ಕಂಡದ್ದು ಬಹು ವಿರಳ, ಯಾಕೆಂದರೆ ಅವರು ಹೆಚ್ಚಾಗಿ ಆಶ್ರಮದ ಏಳಿಗೆಗಾಗಿ ಜನರ ಸಂಘಟನೆಗಾಗಿ ಸುತ್ತಲಿನ ಗ್ರಾಮಗಳ ಏಳಿಗೆಗಾಗಿ ಸಂಚಾರದಲ್ಲಿಯೇ ಇರುತ್ತಿದ್ದರು. ಆ ಆಶ್ರಮದಲ್ಲಿ ಮಾಗಡಿ ವೆಂಕಟೇಶಣ್ಣ, ಪವಾರ ಮಾಸ್ತರರು, ಡಾ.ರಾಚನಾಯ್ಕರರು ಅವರ ಪತ್ನಿ ಹಾಗೂ ಬಸಪ್ಪನವರು ಅವರ ಪತ್ನಿ ಹೀಗೆ ಅನೇಕ ಕೆಲಸಗಾರರು ಇರುತ್ತಿದ್ದರು. ಮತ್ತೊಂದು ವಿಶೇಷವೆಂದರೆ ಮೈಲಾರ ಮಹದೇವಪ್ಪ ಸಹ ಇದೇ ಆಶ್ರಮದಲ್ಲಿ ಬಹಳಕಾಲ ಇದ್ದವರು, ನಂತರದಲ್ಲಿ ಕೊರಡೂರು ಭಾಗದಲ್ಲಿಯ ಗ್ರಾಮಗಳ ಸಂಘಟನೆಗಾಗಿ ಅವರ ನೇತೃತ್ವದಲ್ಲಿಯೇ ಕೊರಡೂರು ಆಶ್ರಮವನ್ನು ಆರಂಭಿಸಿದರು' ಈ ಎಲ್ಲ ವಿವರಗಳನ್ನು ನೀಡುವ ನೆಗಳೂರಿನ ಚಳುವಳಿಕಾರ ಪರಮಣ್ಣ ಹರಕಂಗಿಯವರು ಮೈಲಾರ ಮಹದೇವಪ್ಪನ ತಂಡದಲ್ಲಿ ಗುರುತಿಸಿಕೊಂಡವರು. ಆದರೆ ಇವರು ತುಂಬಾ ಚಿಕ್ಕವರು, ಚಿಕ್ಕ ಪುಟ್ಟ ಕೆಲಸಗಳನ್ನು ಮಾಡುತ್ತಾ ನಂತರ ಮಹದೇವಪ್ಪನ ಸ್ನೇಹ ಸಂಪಾದಿಸಿ ಅವರ ತಂಡಕ್ಕೆ ಸೇರಿ ಹಲವು ಕಾರ್ಯಗಳನ್ನು ಮಾಡಿದವರು. ಇವರು ಇತ್ತೀಚಿಗೆ

೨೦೧೯ರಲ್ಲಿ ನಮ್ಮನ್ನಗಲಿದರು. ಅವರು ನೂರುವರ್ಷ ದಾಟಿದರೂ ನಮ್ಮನ್ನು ಗುರುತಿಸಿ, ಏನಾದರೂ ಹೇಳುವುದನ್ನು ಬಿಟ್ಟಿದ್ದರೆ, ನೆನಪಿಸಿಕೊಂಡು ಪುನಃ ತಮಗೆ ತಿಳಿದ, ತಾವು ಅನುಭವಿಸಿದ, ಕೇಳಿದ ಹಲವು ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದ ಅಪಟ್ಟ ಸ್ನೇಹಜೀವಿ, ಸ್ವಾತಂತ್ರ್ಯಯೋಧರಿವರು.

**ಹೊಸರಿತ್ತಿಯ ಹೊಸ ಆಶ್ರಮ :** ಹೊಸ ಆಶ್ರಮಕ್ಕೆ ಸಂಬಂಧಿಸಿದಂತೆ ಪರಮಣ್ಣ ಹರಕಂಗಿಯವರು ಹೇಳುವಂತೆ, ಹೊಸರಿತ್ತಿಯ ಊರ ಹೊರಗೆ ದಕ್ಷಿಣದಲ್ಲಿಯ ಹೊಲವೊಂದರಲ್ಲಿ ಕಟ್ಟಲ್ಪಟ್ಟಿದೆ. ಒಂದು ಅಂತಸ್ತಿನ ಕಟ್ಟಡವಾಗಿತ್ತು. ಈ ಹೊಸ ಆಶ್ರಮ ವ್ಯವಸ್ಥಿತವಾಗಿತ್ತು. ಮೇಲ್ಭಾವಣಿಯಲ್ಲಿ ಖಾದಿ ಉತ್ಪಾದನೆಗೆ ಬೇಕಾದ ಸಾಕಷ್ಟು ಸಲಕರಣೆಗಳನ್ನು ಇಟ್ಟಿದ್ದರು ಮತ್ತು ಸ್ವದೇಶಿ ಕಾಗದಗಳನ್ನು ತಯಾರಿಸುವ ಸಲಕರಣೆಗಳು ಇದ್ದವು. ಅವುಗಳನ್ನು ರಮಾನಂದರು ತಯಾರಿಸುತ್ತಿದ್ದರು. ಅವರು ಈ ಕೈಗಾರಿಕೆಯನ್ನು ಕಲ್ಕತೆಗೆ ಹೋಗಿ ಕಲಿತು ಬಂದಿದ್ದರೆಂಬುದು ನಂತರ ನಮಗೆ ತಿಳಿಯಿತು. ಅವರು ನಮಗೆ ಕಾಗದಗಳನ್ನು ಹೇಗೆ ತಯಾರಿಸುತ್ತಾರೆ, ಅದಕ್ಕೆ ಉಪಯೋಗಿಸುವ ಕಚ್ಚಾಸಾಮಾನು, ಕೊಳೆ ಹಾಕುವ ರೀತಿ ಮುಂತಾದವುಗಳನ್ನು ತಿಳಿಸಿದ್ದು ಇಂದಿಗೂ ನೆನಪಿಸಿದೆ.

ಆಶ್ರಮದ ಒಳಗಡೆ ದೊಡ್ಡ ಹಾಲು, ಅಲ್ಲಿ ೮ ರಿಂದ ೧೦ ಕೈಮಗ್ಗಗಳ ಮೇಲೆ ಖಾದಿ ಬಟ್ಟೆಗಳನ್ನು ತಯಾರಿಸುತ್ತಿದ್ದುದನ್ನು ಕಂಡೆವು ಮತ್ತು ಅಲ್ಲಿಯೇ ರಾಟ್ಯಾಳ, ಹಲ್ದಿ, ಚರಕ, ಎಲೆರಾಟಿಗಳ ಮೇಲೆ ನೂಲು ತೋಡುವ ಕಂಡಕಿ ತಯಾರಿಸಿ ಕೊಡುವ ಕೆಲಸಗಳು ನಡೆದಿದ್ದವು. ಈ ಆಶ್ರಮಕ್ಕೂ ಹಿತ್ತಲ ಬಾಗಿಲಿದ್ದು ಅಲ್ಲಿ ಶೌಚಾಲಯ, ತಿಪ್ಪೆಗಳಿದ್ದವು. ಈ ಆಶ್ರಮದಲ್ಲಿ ತಯಾರಿಸಿದ ನೂಲಿಗೆ ಬಣ್ಣ ಹಾಕುವ ಕೆಲಸವೂ ಇತ್ತು. ಆಶ್ರಮದ ಮುಂದುಗಡೆ ಬಯಲಿನಲ್ಲಿ ಉಂಕಿ ಮಾಡುತ್ತಿದ್ದರು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಒಂದು ಸೇದುವ ಬಾವಿಯೂ ಇತ್ತು. ಆಶ್ರಮದ ಹೊರಗೆ ರಸ್ತೆಗೆ ಹೊಂದಿಕೊಂಡು ಅಡುಗೆ ಮನೆ ಕಟ್ಟಿದ್ದರು. ಅಲ್ಲಿ ಆಶ್ರಮವಾಸಿಗಳಿಗೆ ಊಟದ ವ್ಯವಸ್ಥೆ ಇತ್ತು. ಆಶ್ರಮದ ಉತ್ತರಕ್ಕೆ ಧ್ವಜದ ಕಟ್ಟೆಯಿತ್ತು. ಎಲೆರಾಟಿಯ ಚಿನ್ಹೆ ಇದ್ದ ಧ್ವಜವನ್ನು ಆಶ್ರಮವಾಸಿಗಳು ಏರಿಸಿದ ಮೇಲೆ 'ವಂದೇ ಮಾತರಂ' ಮತ್ತು 'ವಿಜಯಿ ವಿಶ್ವತಿರಂಗಾಪ್ಯಾರಾ ಝಂಡಾ ಉಂಚಾ ರಹೆ ಹಮಾರಾ' ಗೀತೆಯನ್ನು ಧ್ವಜ ಅವರೋಹಣ ಕಾಲಕ್ಕೆ 'ರಾಷ್ಟ್ರಗನನಕಿ ದಿವ್ಯ ಜ್ಯೋತಿ', 'ರಾಷ್ಟ್ರೀಯ ಪತಾಕಿ ನಮೋ ನಮೋ' ಗೀತೆಯನ್ನು



ಹಾಡಿ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಿ ಧ್ವಜವನ್ನು ಕೆಳಗೆ ಇಳಿಸುತ್ತಿದ್ದರು, ಇದು ಅವರ ನಿತ್ಯದ ಕಾರ್ಯವಾಗಿತ್ತು.

೧೯೪೨ರ ಚಲೇಜಾವ್ ಚಳುವಳಿಯ ನಂತರ ಮತ್ತು ಸ್ವಾತಂತ್ರ್ಯ ಪಡೆದ ನಂತರ ಅಲ್ಲಿಯ ಆಶ್ರಮವಾಸಿಗಳು ಬೇರೆ ಬೇರೆ ಕಡೆಗಳಿಗೆ ಹೊರಟು ಹೋದರು. ಆಶ್ರಮವು ಅನಾಥವಾಯಿತು. ಮಾನ್ಯ ಗುದ್ಲೆಪ್ಪನವರು ಹುಬ್ಬಳ್ಳಿಯಲ್ಲಿದ್ದು ರಾಜಕೀಯದ ಕಡೆಗೆ ತಮ್ಮ ಗಮನಹರಿಸಿ ಬಿಟ್ಟರು. ಹೀಗಾಗಿ ಆಶ್ರಮವು ಶಿಥಿಲವಾಗಿ ಬಿದ್ದುಹೋಗ ಹತ್ತಿತಲ್ಲದೆ ಅಲ್ಲಿದ್ದ ಸಾಮಾನುಗಳೆಲ್ಲವನ್ನು ಸಿಕ್ಕ ಸಿಕ್ಕವರೆಲ್ಲ ದೋಚಿಕೊಂಡು ಹೋಗಿಬಿಟ್ಟರು. ಮುಂದೆ ಕೆಲವು ವರ್ಷಗಳಲ್ಲಿ ಆಶ್ರಮದ ಕಟ್ಟಡವನ್ನು ನಾಶ ಮಾಡಿ ಆ ಸ್ಥಳದಲ್ಲಿ ಊರ ಗ್ರಾಮಪಂಚಾಯಿತಿಯ ಕಟ್ಟಡವನ್ನು ಸ್ಥಾಪಿಸಿದರು. ವಿಶಾದಕರವೆಂದರೆ ಒಂದು ಕಾಲದಲ್ಲಿ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಚಳುವಳಿಕಾರರಿಗೆ ಆಶ್ರಯವಾಗಿದ್ದ ಆಶ್ರಮದ ಕುರುಹು ಇಲ್ಲದಾಗಿದ್ದು ನಮ್ಮ ವ್ಯವಸ್ಥೆಯ ಸಂಕೇತವಲ್ಲದೇ ಇನ್ನೇನು ಎಂದು ಪ್ರಶ್ನೆ ಮಾಡುತ್ತಾರೆ, ಗಾಂಧೀ ಆಶ್ರಮವು ಹೊಸರಿತ್ತಿಯಲ್ಲಿ ಇತ್ತಂತೆ, ಎಲ್ಲಿದೆ ಎಂದು ಯಾರಾದರೂ ಕೇಳಿದರೆ ಏನನ್ನು ತೋರಿಸುವುದು ಎಂದು ಮರು ಪ್ರಶ್ನೆ ಮಾಡುತ್ತಾರೆ ಪರಮಣ್ಣ ಹರಕಂಗಿಯವರು. ಅವರಿಗೆ ಉತ್ತರ ಕೊಡುವವರು ಯಾರು? ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ.

ಹೊಸರಿತ್ತಿ ಗಾಂಧೀಜಿಯವರ ಕನಸಿನ ಶಿಕ್ಷಣ ಮತ್ತು ಸ್ವಾತಂತ್ರ್ಯ ಹೋರಾಟ ಹೇಗಿರಬೇಕು ಎಂಬ ಮಹಾತ್ಮರ ಆದರ್ಶಗಳನ್ನು ಪಾಲಿಸಿದ ಪವಿತ್ರ ಸ್ಥಳ. ಹಳ್ಳಿಕೇರಿ ಗುದ್ಲೆಪ್ಪ ಗಾಂಧೀಜಿಯವರ ಆಶಯದಂತೆ ಶಿಕ್ಷಣ ಪದ್ಧತಿಗೆ ಆದ್ಯತೆ ನೀಡಿ ಅದಕ್ಕೆ ಹಗಲಿರುಳು ಶ್ರಮಿಸಿದರೆ, ಮತ್ತೊಬ್ಬ ಗಾಂಧೀಜಿಯ ಭಕ್ತ ಮಹದೇವಪ್ಪ ಮೈಲಾರ ಗಾಂಧೀಜಿಯವರು ಯಾವ ಯಾವ ಚಳುವಳಿಗಳನ್ನು ಮಾಡಲು ಆದೇಶಿಸುತ್ತಾರೆಂದು ಕಾದು ಅವುಗಳನ್ನು ಪಾಲಿಸಲು ತಂಡ ಕಟ್ಟಿಕೊಂಡು ಕಾತುರನಾಗಿರುತ್ತಿದ್ದ, ಇವರಿಬ್ಬರೂ ಗಾಂಧೀಜಿಯವರ ಕನಸುಗಳನ್ನು ನನಸು ಮಾಡಿದವರು. ಒಬ್ಬ ಹಳ್ಳಿಕೇರಿ ಗುದ್ಲೆಪ್ಪ ಅಂದು ಇಡೀ ಭಾರತವನ್ನೇ ತಿರುಗಿ ಗಾಂಧೀಜಿಯವರ ಕನಸಿನ ಗುರುಕುಲ ಶಿಕ್ಷಣ ವ್ಯವಸ್ಥೆಯನ್ನು ಹೊಸರಿತ್ತಿಯಲ್ಲಿ ಸ್ಥಾಪಿಸಲು ಶ್ರಮಿಸಿದರೆ, ಅದು ಅವರ ಸಾವಿನ ನಂತರ, ಆ ಕಾರ್ಯ ಹೊಸರಿತ್ತಿಯಲ್ಲಿ ಗುರುಕುಲ ಪ್ರಾರಂಭವಾಗಿ ಇಂದಿಗೂ ಅದು ತನ್ನ

ವೈಭವವನ್ನು ಮುಂದುವರೆಸಿಕೊಂಡು ಬರುತ್ತಿದೆ. ಮತ್ತೊಬ್ಬ ಗಾಂಧೀಜಿಯ ಪರಮಭಕ್ತ ಮೈಲಾರ ಮಹದೇವಪ್ಪ ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ತನ್ನ ಸಹಚರರೊಡನೆ ಹುತಾತ್ಮನಾಗಿರುವುದಕ್ಕೆ ಇದೇ ಹೊಸರಿತ್ತಿ ಸಾಕ್ಷಿಯಾಗಿ ನಿಂತಿದೆ.

## ಹಳ್ಳಿಕೇರಿ ಗುದ್ಲೆಪ್ಪನವರು

**ಜೀವನ ಮತ್ತು ಬಾಲ್ಯದ ಬಗ್ಗೆ:** ಹೇಳಿಕೊಳ್ಳುವಂತಹ ಶ್ರೀಮಂತಿಕೆಯಿಲ್ಲದ ಒಂದು ಸಾಮಾನ್ಯ ರೈತ ವ್ಯಾಪಾರಿ ಕುಟುಂಬದಲ್ಲಿ ಹಳ್ಳಿಕೇರಿ ಗುದ್ಲೆಪ್ಪ ಜೂನ್ ೬, ೧೯೦೬ ರಂದು ಹಾವೇರಿ ತಾಲ್ಲೂಕಿನ ಹೊಸರಿತ್ತಿ ಗ್ರಾಮದಲ್ಲಿ ವೀರಪ್ಪ–ವೀರಮ್ಮ ದಂಪತಿಗಳ ನಾಲ್ಕುಜನ ಪುತ್ರರಲ್ಲಿ ಕೊನೆಯವರಾಗಿ ಜನಿಸಿದರು. ಸಣ್ಣ ವಯಸ್ಸಿನಲ್ಲಿ ಇವರು ಭಾರಿ ಕುಶಾಗ್ರಮತಿ ಬಹು ದೊಡ್ಡ ಎತ್ತರವನ್ನು ಹೊಂದಿದವರಾಗಿದ್ದರು.

ಹೈಸ್ಕೂಲ್ ಶಿಕ್ಷಣಕ್ಕೆ ಧಾರವಾಡಕ್ಕೆ ಹೋದಾಗ, ಅವರ ಗಣಿತದ ಜ್ಞಾನ ತಿಳಿದು ದಿವಾನ್ ಬಹದೂರ್ ಶಾಂತವೀರಪ್ಪ ಮೆಣಸಿನಕಾಯಿ ಈ ಹುಡುಗನನ್ನು ಗಣಿತದಲ್ಲಿ ಇನ್ನೂ ಪ್ರೌಢಮೆ ಗಳಿಸಲು ಇಂಗ್ಲೆಂಡಿಗೆ ಕಳಿಸಲು ಸಿದ್ಧವೆಂದು ಹೇಳಿಕೊಂಡಿದ್ದು ಹಳ್ಳಿಕೇರಿ ಗುದ್ಲೆಪ್ಪನವರ ಗಣಿತಶಾಸ್ತ್ರದಲ್ಲಿಯ ಜ್ಞಾನ ಪರಿಚಯವಾಗುತ್ತದೆ. ನಂತರದಲ್ಲಿ ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಅವರು ರಾಷ್ಟ್ರನಾಯಕರಾಗಿ ಬೆಳದದ್ದು ವಿಶೇಷ.

೧೯೨೪ರಲ್ಲಿ ಬೆಳಗಾವಿಯಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ, ದೇಶದ ಎಲ್ಲ ಹಿರಿಯ ಮಹನೀಯರನ್ನು ಕಂಡು ಅವರಿಂದ ಶಿಸ್ತು, ಸಂಘಟನಾ ಶಕ್ತಿ, ಇನ್ನೊಬ್ಬರಲ್ಲಿ ವಿಶ್ವಾಸ ಮೂಡಿಸುವ ಗುಣಧರ್ಮ ಈ ಗುಣಗಳು ಇವರಲ್ಲಿ ಪ್ರಕಟಗೊಂಡವು. ಈ ಯುವಕ ಇನ್ನೂಳಿದ ಯುವಕರಂತೆ ಅಲ್ಲ, ಇತರರಿಗಿಂತ ಬೇರೆ ಎನ್ನುವುದನ್ನು ಹಳ್ಳಿಕೇರಿ ಗುದ್ಲೆಪ್ಪ ತೋರಿಸಿಕೊಟ್ಟರು. ಆಗ ತಾನೇ ಕಾಲೇಜು ಕಟ್ಟೆ ಹತ್ತಿದ್ದ ಬಿಸಿ ರಕ್ತದ ಹಳ್ಳಿಕೇರಿ ಗುದ್ಲೆಪ್ಪನವರ ನರನಾಡಿಗಳಲ್ಲಿ ರಾಷ್ಟ್ರಾಭಿಮಾನದ ಕಿಚ್ಚು ಹತ್ತಿಕೊಂಡಿತ್ತು. ಶಾಲೆ ಸಾಕು ಸೆರೆಮನೆ ಬೇಕು ಎಂದು ಶಾಲೆಗೆ ಶರಣು ಹೇಳಿ ಬ್ರಿಟಿಷರ ಸಂಕೋಲೆಯಿಂದ ಭಾರತವನ್ನು ಬಿಡುಗಡೆಗೊಳಿಸುವ ಪಣ ತೊಡುತ್ತಾರೆ. ೧೯೨೪ರ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರನ್ನು



ಹತ್ತಿರದಿಂದ ಕಂಡಿದ್ದು, ಅವರ ಮಾತುಗಳನ್ನು ಕೇಳಿದ ಮೇಲೆ ಗಾಂಧೀಜಿಯವರ ಪರಮ ಭಕ್ತರಾದರು, ಆಗ ಇವರ ವಯಸ್ಸು ೧೮. ೧೯೩೦ರಲ್ಲಿ ಕರಾಚಿಯಲ್ಲಿ ನಡೆದ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಗುದ್ಲೆಪ್ಪನವರು ಸಮಕಾಲೀನ ಕಾಂಗ್ರೆಸ್ ನಾಯಕರ ಹತ್ತಿರದ ಸಂಪರ್ಕ ಪಡೆದರು. ಸ್ನೇಹಜೀವಿಯಾಗಿರುವುದರಿಂದಲೇ ತಮ್ಮ ೩೨ನೇ ವಯಸ್ಸಿನಲ್ಲಿ ಕರ್ನಾಟಕ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಉತ್ತಮ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ಹಳ್ಳಿಕೇರಿಯವರು ಉತ್ಕಟ ಸಾಹಿತ್ಯ ಪ್ರೇಮಿಯಾಗಿ ರವೀಂದ್ರನಾಥ ಠಾಕೂರರ, ವಿವೇಕಾನಂದರ, ಟಾಲ್‌ಸ್ಟ್ಯಾಯರಂತಹವರ ಗ್ರಂಥಗಳನ್ನೂ, ಮ್ಯಾಝಿನಿ, ಗ್ಯಾರಿಬಾಲ್ಡಿ, ಕಮಲಾ ಪಾಶಾ, ಅಬ್ರಾಹಂ ಲಿಂಕನ್, ಲೇನಿನ್ ಮುಂತಾದವರ ಜೀವನ ಚರಿತ್ರೆಗಳನ್ನೂ, ಅರವಿಂದರ ಸಾಹಿತ್ಯವನ್ನು ಓದಿಕೊಂಡಿದ್ದರು.

೧೯೨೦ ರಿಂದ ೩೦ರ ಆಸುಪಾಸಿನ ದಿನಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಾವು ತಾರಕಕ್ಕೇರಿದ ಕಾಲ. ಬ್ರಿಟಿಷರ ಭಯ. ಗಾಂಧೀ ಟೊಪ್ಪಿಗೆ ಹಾಕಲು ಎಂಟದೆ ಭಂಟನೇ ಬೇಕಾಗಿತ್ತು. ಜನ ಜಬರದಸ್ತ ಜುಬ್ಬಾ ಪೈಜಾಮ, ಕಚ್ಚೆ ಪಂಜೆ ಹಾಕಲು ಉಸಿರು ಬಿಗಿ ಹಿಡಿದುಕೊಳ್ಳಬೇಕಾದ ಭಯಾನಕ ಪರಿಸ್ಥಿತಿ. ಸೆರೆಮನೆ ವಾಸಕ್ಕೆ ಸಜ್ಜಾಗಿ ಕಾಂಗ್ರೆಸ್ ಸೇರಬೇಕಾಗಿದ್ದಿತು. ಮನೆ ಮಠ ಬಿಟ್ಟು, ಹೊಲ ಮನೆಗಳಿಗೆ ಶರಣು ಹೇಳಿ ಹೊಟ್ಟೆಗೆ ಊಟವಿಲ್ಲದೇ ಕಾಡು, ಮೇಡು, ಗುಡ್ಡ, ಬೆಟ್ಟ ಅಲೆದಾಡಲು ಗಟ್ಟಿ ಇದ್ದವರು ಮಾತ್ರ ಕಾಂಗ್ರೆಸ್ ಕೀ ಜೈ ಅನ್ನುವ ಪರಿಸ್ಥಿತಿ. ಇಂತಹ ಸಮಯದಲ್ಲಿಯೇ ರಾಷ್ಟ್ರೀಯ ಸೇವೆಗೆ ಅಡಿಯಿಡಲು ನಿರ್ಧರಿಸಿದವರು ಗುದ್ಲೆಪ್ಪ ಹಳ್ಳಿಕೇರಿಯವರು. ಕಾರಣ ತಮ್ಮ ಜೀವನದಲ್ಲಿ ಗಾಂಧೀಜಿಯವರ ವಿಚಾರ ಹಾಗೂ ಜೀವನ ಪದ್ಧತಿಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದರು. ತರುಣರನ್ನೆಲ್ಲಾ ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದರು. ಮನೆ ಮನೆಗೆ ಹೋಗಿ ಖಾದಿ ಪ್ರಚಾರ ಮತ್ತು ಮಾರಾಟ ಮಾಡುತ್ತಿದ್ದರು. ಮೈ ಚರ್ಮಕ್ಕಿಂತ ಖಾದಿಯೇ ಇವರನ್ನು ಹೆಚ್ಚು ಅಂಟಿಕೊಂಡಿತ್ತು.

ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳ ಬಗೆಗೆ ಬಹಳಷ್ಟು ಆಕರ್ಷಿತರಾಗಿದ್ದ ಹಳ್ಳಿಕೇರಿಯವರು ಹೊಸರಿತ್ತಿಯಲ್ಲಿ ಮಹದೇವಪ್ಪ ಮೈಲಾರರನ್ನು ಕೂಡಿಕೊಂಡು ಆಶ್ರಮವನ್ನು ತೆರೆದರು. ಇದರಿಂದ ಇಡೀ

ಭಾರತದ ಗ್ರಾಮಗಳನ್ನು ತಿರುಗುವಂತೆ ಮಾಡಿದ್ದು ಇತಿಹಾಸ. ಆ ಆಶ್ರಮದಿಂದ ಗಾಂಧೀಜಿಯವರ ತತ್ವ ಹಾಗೂ ಜೀವನವನ್ನು ಹಳ್ಳಿಗಾಡಿನ ಪ್ರದೇಶಕ್ಕೆ ಜನಪ್ರಿಯಗೊಳಿಸಿದರು. ಈ ಆಶ್ರಮದ ಸ್ಥಾಪನೆಯ ಕಥೆಯು ರೋಮಾಂಚನಗೊಳಿಸುವಂತಿದೆ, ಇಲ್ಲಿ ಖಾದೀ, ಗ್ರಾಮೋದ್ಯೋಗ, ಗ್ರಾಮನೈರ್ಮಲ್ಯ, ಪಾನನಿರೋಧ, ಅಸ್ಪೃಷ್ಯತಾ ನಿವಾರಣೆ, ವಯಸ್ಕರ ಶಿಕ್ಷಣ, ಸಾಕ್ಷರತೆಯ ಬೆಳವಣಿಗೆ, ಪ್ರಾಥಮಿಕ ಚಿಕಿತ್ಸೆ ಮುಂತಾದ ಎಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಇದಕ್ಕೆಲ್ಲಾ ಏನು ಬಂಡವಾಳ, ಏನು ಬಜಟ್ ಎಂದು ಯಾರು ಕೇಳುವಂತಿರಲಿಲ್ಲ, ಅದಕ್ಕೆಲ್ಲಾ ಹಳ್ಳಿಕೇರಿಯವರೇ ಬಂಡವಾಳ.

**'ಭಾರತೀಯ ತರುಣ ಸಂಘ':** ೧೯೨೭ರಲ್ಲಿ ಲೋಕಮಾನ್ಯ ತಿಲಕ, ಹರ್ಡೇಕರ ಮಂಜಪ್ಪ, ಆಲೂರು ವೆಂಕಟರಾವ್, ರಂಗನಾಥ ದಿವಾಕರ, ಗಂಗಾಧರರಾವ್ ದೇಶಪಾಂಡೆ, ಕಾರ್ನಾಡ ಸದಾಶಿವರಾಯರು, ಮುದವೀಡು ಕೃಷ್ಣರಾಯರು, ಕೌಜಲಗಿ ಶ್ರೀನಿವಾಸರಾವ್ ಮೊದಲಾದ ಹಿರಿಯ–ಕಿರಿಯರೊಡಗೂಡಿ ಧಾರವಾಡದಲ್ಲಿ 'ಭಾರತೀಯ ತರುಣ ಸಂಘ'ವನ್ನು ಸ್ಥಾಪಿಸಿದರು. ತನ್ಮೂಲಕ ಸ್ವಾತಂತ್ರ್ಯಸೇನಾನಿಗಳನ್ನು ತಯಾರಿಸಲಾರಂಭಿಸಿದರು. ಹೊಸರಿತ್ತಿಯಲ್ಲಿ ಗಾಂಧೀ ಆಶ್ರಮ ಕಟ್ಟಲು ಕಾರಣ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿ ಹಾಕಿಕೊಂಡ ಎಲ್ಲ ಕಾರ್ಯಕ್ರಮಗಳನ್ನು ಹೊಸರಿತ್ತಿಯ ಗಾಂಧೀ ಆಶ್ರಮದಲ್ಲಿ ಗುದ್ಲೆಪ್ಪನವರು ಅಳವಡಿಸಿಕೊಂಡರು. ಗಾಂಧೀ ವಾಚನಾಲಯದ ಮೂಲಕ, ಜನತೆಯಲ್ಲಿ ಅಕ್ಷರ ಜ್ಞಾನದ ಮೂಲಕ ಸಾಮಾಜಿಕ ಹಾಗೂ ಸಾಮೂಹಿಕ ಪ್ರಜ್ಞೆ ಬೆಳಸಿದರು. ಗಾಂಧೀ ಚಿಕಿತ್ಸಾಲಯದ ಮೂಲಕ ಬಡ ರೋಗಿಗಳ ಆರೈಕೆ ಆರಂಭಿಸಿದರು. ಇವೆಲ್ಲ ಕಾರ್ಯಗಳನ್ನು ಗುದ್ಲೆಪ್ಪನವರು ಆರಂಭಿಸಿದಾಗ ಅವರ ೨೪ ರಿಂದ ೨೫ ವಯಸ್ಸು. ಎಂಬುದನ್ನು ಗುದ್ಲೆಪ್ಪನವರನ್ನು ಹತ್ತಿರದಿಂದ ಕಂಡ ಹಿರಿಯರು ಮತ್ತು ಆತ್ಮೀಯರೂ ಆದ ಬಿ. ಎಸ್. ಯಾವಗಲ್ ಅಭಿಪ್ರಾಯಪಡುತ್ತಾರೆ.

೧೯೨೭ರಲ್ಲಿ ಹಳ್ಳಿಕೇರಿಯವರ ಜೀವನದಲ್ಲಿ, ಕರ್ನಾಟಕದ ರಾಜಕೀಯದಲ್ಲಿ ಒಂದು ಮಹತ್ವದ ವರ್ಷ, ಸ್ವಾತಂತ್ರ್ಯದ ಆಂದೋಲನಕ್ಕಾಗಿ ಜನರನ್ನು ಜಾಗೃತಗೊಳಿಸುವ ಕಾರ್ಯ ಆಗ ದೇಶದ ತುಂಬೆಲ್ಲ ಆರಂಭಗೊಂಡಿತ್ತು. ಬ್ರಿಟಿಷರ ಉದ್ದೇಶದ ರಾಜಕೀಯ ಸುಧಾರಣೆಗಳನ್ನು ತರಬೇಕೆಂದು ಜನಾಭಿಪ್ರಾಯ ಸೆಳೆಯಲು ಭಾರತಕ್ಕೆ ಬಂದಿದ್ದ ಸೈಮನ್ ಆಯೋಗವನ್ನು



ಕಾಂಗ್ರೆಸ್ ಬಹಿಷ್ಕರಿಸಿತ್ತು. ಆಗ ಸ್ವಾಭಾವಿಕವಾಗಿಯೇ ಹಳ್ಳಿಕೇರಿಯವರು ಶಾಲೆ–ಕಾಲೇಜುಗಳ ತರುಣರನ್ನು ಸಂಘಟಿಸಿ, ಧಾರವಾಡದಲ್ಲಿ ಸೈಮನ್ ಆಯೋಗದ ವಿರುದ್ಧ ಗೋ–ಬ್ಯಾಕ್–"ಸೈಮನ್‌ರೇ ತಿರುಗಿ ಹೋಗಿ" ಎಂದು ಪ್ರತಿಭಟನೆ ಮಾಡಿದರು.

ಹಾವೇರಿ ಜನಪ್ರಿಯ ನಾಯಕನನ್ನು ಕಾಂಗ್ರೆಸ್‌ಗೆ ಸೇರುವಂತೆ ಮಾಡಿದ್ದು; ಬ್ರಾಹ್ಮಣೇತರ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ಹಾವೇರಿಯ ಹೊಸಮನಿ ಸಿದ್ದಪ್ಪನವರನ್ನು ಕಾಂಗ್ರೆಸ್ ಸೇರಲು ಮನವೊಲಿಸಲು ಯಶಸ್ವಿಯಾದ ಹಳ್ಳಿಕೇರಿಯವರು ಹಾವೇರಿಯಲ್ಲಿ ಸಮ್ಮೇಳನವೊಂದನ್ನು ಆಯೋಜಿಸಿ ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಎಲ್ಲ ಜಾತಿಯವರು ಕಾಂಗ್ರೆಸ್‌ಗೆ ಸೇರುವಂತೆ ಮಾಡಿದ್ದು. ಇಲ್ಲಿಯವರೆಗೆ ಕಾಂಗ್ರೆಸ್ ಎಂದರೆ ಬ್ರಾಹ್ಮಣ ಜಾತಿಯವರದು ಎಂಬ ನಿಂದನೆಯನ್ನು ತೊಡೆದು ಹಾಕಿ, ಎಲ್ಲರಿಗೂ ಕಾಂಗ್ರೆಸ್ ಸೇರಿದ್ದು, ಅದರ ಅಡಿಯಲ್ಲಿ ನಾವೆಲ್ಲ ಗಾಂಧೀಜಿಯವರ ನೇತೃತ್ವದಲ್ಲಿ ಭಾರತವನ್ನು ಆಂಗ್ಲರಿಂದ ಮುಕ್ತವಾಗಿಸಬೇಕೆಂದು ಗುದ್ಲೆಪ್ಪನವರು ಅದೇ ಸಮ್ಮೇಳನದಲ್ಲಿ ಕರೆ ನೀಡಿದ್ದು ಹಾಗೂ ಹೊಸಮನಿ ಸಿದ್ದಪ್ಪ ಆ ಸಮ್ಮೇಳನದಲ್ಲಿ ಭಾಗವಹಿಸಿದ್ದು ಹಾವೇರಿ ಭಾಗದಲ್ಲಿ ಚಳುವಳಿ ತೀವ್ರಸ್ವರೂಪ ಪಡೆಯಲು ಕಾರಣವಾಗಿರುವುದನ್ನು ಜಿಲ್ಲೆಯ ಚಳುವಳಿಗಾರರು ಅಭಿಪ್ರಾಯಪಡುತ್ತಾರೆ.

೧೯೩೦ರ ದಶಕದಲ್ಲಿ – ಗುದ್ಲೆಪ್ಪ ಹಳ್ಳಿಕೇರಿಯವರು ೧೯೩೦ರ ದಶಕದಲ್ಲಿ ಎಲ್ಲ ಸತ್ಯಾಗ್ರಹ ಚಳುವಳಿಯಲ್ಲಿ ಅಂದರೆ, ೧೯೩೦ರ ಉಪ್ಪಿನ ಸತ್ಯಾಗ್ರಹ, ಈಚಲ ಗಿಡ ಕಡಿಯುವ ಚಳುವಳಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿ, ೧೯೩೧–೩೨ರ ಕರ ನಿರಾಕರಣ ಚಳುವಳಿ ಮತ್ತು ಕಾಯ್ದೆಭಂಗ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂರು ಸಾರಿ ಬಂಧನ–ಶಿಕ್ಷೆಗೊಳಗಾಗಿ ಎರಡು ವರ್ಷಗಳ ಮೇಲ್ಪಟ್ಟು ಕಾರಾಗೃಹವಾಸವನ್ನು ಅನುಭವಿಸಿದರು.

ಉಪ್ಪಿನ ಸತ್ಯಾಗ್ರಹದ ಅಂಗವಾಗಿ ಮಹಾತ್ಮಾ ಗಾಂಧೀಯವರು ದಂಡಿಯಾತ್ರೆ ಕೈಗೊಂಡಾಗ ಅದರಲ್ಲಿ ಕರ್ನಾಟಕದ ಏಕಮೇವ ಪ್ರತಿನಿಧಿಯಾಗಿ ಭಾಗವಹಿಸಿದ್ದ ಮಹದೇವಪ್ಪ ಮೈಲಾರರನ್ನು ಹುರುದುಂಬಿಸಿದ್ದಲ್ಲದೇ ಗಾಂಧೀಜಿಯವರ ದರ್ಶನ ಪಡೆದು ಗುಜರಾತಿನ ವಿದ್ಯಾಪೀಠದಲ್ಲಿ ಒಂದು

ತಿಂಗಳ ಕಾಲವಿದ್ದು ಸತ್ಯಾಗ್ರಹದ ತತ್ವ ಮತ್ತು ಕಾರ್ಯಚರಣೆ ಬಗ್ಗೆ ತರಬೇತಿ ಪಡೆದುಕೊಂಡರು. ಕರ್ನಾಟಕಕ್ಕೆ ಹಿಂದಿರುಗಿ ಅಂಕೋಲಾ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾದರು. ನಂತರ ೧೯೩೦ ರ ಜುಲೈ ತಿಂಗಳಲ್ಲಿ ಈಚಲಗಿಡಗಳನ್ನು ಕಡಿಯುವ ಚಳುವಳಿಯಲ್ಲಿ ಭಾಗಿಯಾಗಿ ಬಂಧನಕ್ಕೊಳಗಾಗಿ ೬ ತಿಂಗಳ ಜೈಲು ಶಿಕ್ಷೆ ಅನುಭವಿಸಿದರು. ಬಂಧನದಿಂದ ಬಿಡುಗಡೆಯಾದ ನಂತರ ವಿದೇಶಿ ವಸ್ತುಗಳ ಬಹಿಷ್ಕಾರಾಂದೋಲನದಲ್ಲಿ ಭಾಗಿಯಾಗಿ ಮತ್ತೆ ಬಂಧನಕ್ಕೊಳಗಾಗಿ ೩ ತಿಂಗಳ ಕಾಲ ಸೆರೆಮನೆಗೆ ಕಳಿಸಲ್ಪಟ್ಟರು. ಇಲ್ಲಿಯೂ ಬಂಧನದಿಂದ ಬಿಡುಗಡೆಯಾಗಿ ಹಿರೆಕೇರೂರು ಮತ್ತು ಸಿರ್ಸಿ–ಸಿದ್ಧಾಪುರಗಳಲ್ಲಿಯ ಕರನಿರಾಕರಣೆಯ ಚಳುವಳಿಗಳಲ್ಲಿ ಪಾಲ್ಗೊಂಡರು.

೧೯೪೨ರ ಚಲೇಜಾವ್ ಚಳುವಳಿಯಲ್ಲಿ ಅವರಿಗೆ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಆಗಲಿಲ್ಲ. ರಾಷ್ಟ್ರ ಧುರೀಣರು ಬಂಧನಕ್ಕೊಳಗಾದ ದಿನವೇ, ಚಲೇಜಾವ್ ಚಳುವಳಿಯ ಘೋಷಣೆಯಾದ ದಿನ (೯/೮/೧೯೪೨) ಇವರೂ ಬಂಧನಕ್ಕೊಳಗಾದರು. "ಮಾಡು ಇಲ್ಲವೇ ಮಡಿ" ಎಂಬ ಘೋಷಣೆಯನ್ನು ತನಗೆ ಕೃತಿಗೆ ತರಲಿಕ್ಕಾಗಲಿಲ್ಲವಲ್ಲಾ ಎಂದು ಅವರು ಜೈಲಿನಲ್ಲಿ ವ್ಯಥೆಪಟ್ಟರು. ಆದರೆ ಜೈಲಿನ ಒಳಗೆ ಇದ್ದುಕೊಂಡೆ ಅಂತಿಮ ಸಂಗ್ರಾಮದಲ್ಲಿ ಧುಮುಕಲು, ತರುಣರನ್ನು ಹುರಿದುಂಬಿಸಲು ಧನಸಹಾಯ ಮಾಡುತ್ತಿದ್ದರು, ಅದು ತಮ್ಮ ಕಾವಲಿಗಿದ್ದ ಪೊಲೀಸ್ ಸಿಬ್ಬಂದಿಯಿಂದಲೇ ಆ ಕಾರ್ಯ ಮಾಡುತ್ತಿದ್ದರು.

೧೯೪೨ರ ಚಲೇಜಾವ್ ಚಳುವಳಿಯಲ್ಲಿ ಹೊಸರಿತ್ತಿ ನಾಡು ಪ್ರಶಂಸನೀಯವಾದ ಕಾರ್ಯ ಮಾಡಿತು. ಮೈಲಾರ ಮಹದೇವಪ್ಪನಂತಹವರೂ ಬಲಿದಾನ ಮಾಡಬೇಕಾಗಿಯೂ ಬಂದಿತು. ಗುದ್ಲೆಪ್ಪನವರೂ ಸಹ ಈ ಚಳುವಳಿಯಲ್ಲಿ ಸೆರೆಹಿಡಿಯಲ್ಪಟ್ಟು ಶಿಕ್ಷೆ ಅನುಭವಿಸಿದರು. ಜೈಲಿನಲ್ಲಿದ್ದ ಗುದ್ಲೆಪ್ಪನವರು ಅನೇಕ ಪುಸ್ತಕಗಳನ್ನು ತಿರುವಿಹಾಕಿ ತಮ್ಮ ಜ್ಞಾನ ದಿಗಂತದ ಕ್ಷಿತಿಜವನ್ನು ವಿಸ್ತರಿಸಿಕೊಂಡು ರಷ್ಯಾದ ಕ್ರಾಂತಿ ಮತ್ತು ಲೆನಿನ್ ಮೊದಲಾದವರ ತತ್ವಗಳನ್ನು ತಿಳಿಯಲು ಆತುರತೆಯನ್ನು ತೋರಿದರು. ಇದೇ ರೀತಿ ಟಾಲ್‌ಸ್ಟಾಯ್, ರಸ್ಕಿನ್, ಗಾಂಧೀಜಿ ಮೊದಲಾದವರ ಪುಸ್ತಕಗಳನ್ನು ಓದಿದರು. ಹೀಗೆ ಓದುವುದರಿಂದ ಒಳ್ಳೆಯ ಅಭ್ಯಾಸಶೀಲರಾಗಿದ್ದು ಕಾಲೇಜಿನಲ್ಲಿ ಪಡೆಯ ಬಹುದಾಗಿದ್ದುದಕ್ಕಿಂತ ಹೆಚ್ಚಿನ ಜ್ಞಾನವನ್ನು ಜೈಲಿನಲ್ಲಿ ಪಡೆದರು. ಹಾಗೆಯೇ



ಅವರೊಬ್ಬ ಲೇಖಕರೂ ಆಗಿದ್ದರೂ ಎಂಬುದನ್ನು ಸ್ವಾತಂತ್ರ್ಯ ಹೋರಾಟದ ಆಯಾ ಕ್ಷಣಗಳನ್ನು ನಾಡಿನ ಕನ್ನಡಿಗರಿಗೆ ತಿಳಿಸುವ ಮೊದಲ ಧ್ವನಿಯಾದ 'ಸಂಯುಕ್ತ ಕರ್ನಾಟಕ'ಕ್ಕೆ ಮೇಲಿನಿಂದ ಮೇಲೆ ಬರೆದು ಕಳಿಸುತ್ತಿದ್ದು, ಅವರ ಅನೇಕ ಲೇಖನಗಳನ್ನು ಸಂಯುಕ್ತ ಕರ್ನಾಟಕ ದಿನಪತ್ರಿಕೆ ಅಂದು ಪ್ರಕಟಿಸಿ ಓದುಗರಿಗೆ ಕ್ರಾಂತಿಕಾರಕ ವಿಚಾರಗಳನ್ನು ಮತ್ತು ಪ್ರತಿಪಾದನೆಗಳನ್ನು ಪ್ರಕಟಿಸಿ, ಸ್ವಾತಂತ್ರ್ಯಹೋರಾಟಕ್ಕೆ ಸ್ಫೂರ್ತಿಯನ್ನು ಪ್ರೇರಣೆಯನ್ನು ತುಂಬುವ ಕಾರ್ಯವನ್ನು ಆ ಪತ್ರಿಕೆ ಮಾಡಿದ್ದನ್ನು ಸಹ ಅಂದಿನ ಚಳುವಳಿಕಾರರಾದ ನೆಗಳೂರಿನ ಪರಮಣ್ಣ ಹರಕಂಗಿ ಮತ್ತು ದೇವೇಂದ್ರಪ್ಪ ವಿಭೂತಿ ನೆನಪಿಸಿಕೊಳ್ಳುತ್ತಾರೆ.

೧೯೪೦ರಲ್ಲಿ ಚಳುವಳಿಗಳು ತೀವ್ರತೆಯನ್ನು ಪಡೆದಾಗ ಅದರ ನಾಯಕತ್ವವನ್ನು ವಹಿಸಿಕೊಂಡು ಅಗತ್ಯವಾದ ಎಲ್ಲ ಸಂಘಟನೆ, ಸಹಪಾಠಿಗಳ ಪ್ರೇರಣೆ, ನಿರ್ದೇಶನ ಎಲ್ಲ ವ್ಯವಸ್ಥೆ ಮಾಡಿದರು. ಆದರೆ ಅದೇ ದಿನ ಇವರನ್ನು ಬಂಧಿಸಲಾಯಿತು. ಅವರ ಬಿಡುಗಡೆಯಾಗಿದ್ದು ೧೯೪೪ರ ಕೊನೆಯಲ್ಲಿ. ಹೀಗೆ ದೇಶದ ಸಾತಂತ್ರ್ಯ ಸಂಗ್ರಾಮದಲ್ಲಿ ಹಳ್ಳಿಕೇರಿ ಗುದ್ಲೆಪ್ಪನವರ ಪಾತ್ರ ಅತ್ಯಂತ ಪ್ರಭಾವಶಾಲಿಯಾಗಿತ್ತು.

ಹಳ್ಳಿಕೇರಿ ಗುದ್ಲೆಪ್ಪನವರು ಕಳೆದ ಶತಮಾನದ ೩೦ ಮತ್ತು ೪೦ನೇ ದಶಕಗಳ ಎಲ್ಲ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಭಾಗಿಯಾಗಿ ಐದು ಸಲ ಬಂಧನಕ್ಕೊಳಗಾಗಿ, ಐದು ವರ್ಷ ಮೇಲ್ಪಟ್ಟು(ಸುಮಾರು ೭೦ ತಿಂಗಳು) ಜೈಲುವಾಸ ಅನುಭವಿಸಿದರು ಮತ್ತು ಒಂದು ವರ್ಷ ಕಾಲ ಭೂಗತರಾಗಿ ಜನಜಾಗೃತಿ ಉಂಟುಮಾಡಿದ ಗಣ್ಯ ಸ್ವಾತಂತ್ರ್ಯಯೋಧರಾಗಿದ್ದಾರೆ. ಇವರು ಹಾವೇರಿ ಉಪಜೈಲು, ಧಾರವಾಡ, ಬೆಳಗಾವಿ(ಹಿಂಡಲಗಾ), ಮತ್ತು ಪುಣೆ(ಯರವಾಡಾ) ಜೈಲುಗಳಲ್ಲಿ ತಮ್ಮ ಶಿಕ್ಷೆಗಳನ್ನು ಅನುಭವಿಸಿದ್ದಾರೆ. ಅವರು ಜೈಲುಗಳಲ್ಲಿ ಇದ್ದಾಗಲೂ ಸತ್ಯಾಗ್ರಹಿಗಳ ಸೌಲಭ್ಯಕ್ಕಾಗಿ ಮತ್ತು ಜೈಲಾಧಿಕಾರಿಗಳ ದುರಾಡಳಿತದ ವಿರುದ್ಧ ಸತ್ಯಾಗ್ರಹ–ಉಪವಾಸ ನಡೆಸಿದ್ದೂ ಉಂಟು.

**ಹಳ್ಳಿಕೇರಿ ಮನೆತನ :** ಸ್ವಾತಂತ್ರ್ಯಹೋರಾಟದ ಅಸಹಕಾರ ಚಳುವಳಿ, ಸತ್ಯಾಗ್ರಹ ಹೊಸರಿತ್ತಿಯ ನಾಡಿನಲ್ಲಿ ಸುತ್ತಲೂ ಇದ್ದ ಎಲ್ಲ ಹಳ್ಳಿಯ ಜನರನ್ನು ಭಾಗವಹಿಸುವಂತೆ ಮಾಡಲಿಕ್ಕೆ ಹಳ್ಳಿಕೇರಿಯವರ ಮುಂದಾಳತ್ವವೇ ಕಾರಣವಾಯಿತು. ತಮ್ಮ ಇಡೀ ಮನೆತನವನ್ನೇ ಸ್ವಾತಂತ್ರ್ಯಹೋರಾಟಕ್ಕೆ

ಮುಡುಪಾಗಿಟ್ಟಂತೆ ಭಾಗವಹಿಸಿದ್ದರು. ಒಂದು ಮನೆತನದ ಹೆಣ್ಣುಮಕ್ಕಳು ಚಳುವಳಿಯಲ್ಲಿ ಭಾಗವಹಿಸಿ ಕಷ್ಟ ನಷ್ಟಗಳನ್ನು ಲೆಕ್ಕಿಸದೇ ಹೋರಾಡಿದ್ದು ಒಂದೇ ಒಂದು ಮನೆತನವೆಂದರೆ ಅದು ಹೊಸರಿತ್ತಿಯ ಹಳ್ಳಿಕೇರಿಯವರ ಮನೆತನ. ಈ ಮನೆತನದಲ್ಲಿದ್ದ ಎಲ್ಲ ಜನರು ಧರಿಸುತ್ತಿದ್ದ ವಿದೇಶಿ ರೇಶ್ಮಿ ಜರತಾರಿ ಉಡುಪುಗಳನ್ನು ಸುಟ್ಟುಹಾಕಿ ಎಲ್ಲರೂ ಗಾಂಧೀಜಿಯವರ ಖಾದೀ ಉಡುಪುಗಳನ್ನು ಧರಿಸಲಿಕ್ಕೆ ಪ್ರಾರಂಭಿಸಿದರು. ಮನೆಯಲ್ಲಿಯ ಪ್ರತಿಯೊಬ್ಬರೂ ನೂಲುವ ನೇಯುವ ಕಾರ್ಯ ಮಾಡುತ್ತಿದ್ದರು. ಅಲ್ಲದೇ ಹೊಸರಿತ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಖಾದೀ ಉಡುಪಿನ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಈ ಹಳ್ಳಿಕೇರಿ ಮನೆತನ ಮಾಡಿದ್ದು ವಿಶೇಷ.

ಸ್ವಾತಂತ್ರ್ಯಹೋರಾಟದಲ್ಲಿ ಈ ಕುಟುಂಬದ ಎಲ್ಲ ಸದಸ್ಯರೂ ದೇಶಸೇವೆ ಮಾಡಿದ್ದುಂಟು. ಆಗಿನ ಕಾಲದಲ್ಲಿದ್ದ ಬ್ರಿಟಿಷ್ ಸರಕಾರದ ಅಧಿಕಾರಿಗಳಿಗೆ ಅವರ ಸುಳಿವು ನೀಡದಿದ್ದರೆ, ಅವರ ಅಣ್ಣ, ತಮ್ಮಂದಿರು ಅವರ ಮಕ್ಕಳು ಹಾಗೂ ಅವರ ಸಂಬಂಧಿಗಳೆನ್ನಲ್ಲ ಕಷ್ಟಕ್ಕೀಡುಮಾಡುತ್ತಿದ್ದರು. ಆಸ್ತಿ ಕಳೆದುಕೊಂಡರು. ಕೆಲವರು ಜೈಲುವಾಸ ಅನುಭವಿಸಿದರು. ಗುದ್ಲೆಪ್ಪನವರ ಮದುವೆ ಗಾಂಧೀಜಿಯವರ ಜನ್ಮದಿನದಂದು, ಅಕ್ಟೋಬರ್ ೨ ಅವರ ಧರ್ಮಪತ್ನಿ ಶ್ರೀಮತಿ ಗಂಗಮ್ಮನವರು ಖಾದಿಧಾರಿ, ಅವರೂ ವರ್ಧಾ ಗಾಂಧೀ ಆಶ್ರಮದಲ್ಲಿದ್ದು ಸೇವೆ ಮಾಡಿದ್ದಾರೆ. ಅವರಿಗೆ ನಾಲ್ಕುಜನ ಪುತ್ರರು ಮೂರು ಜನ ಪುತ್ರಿಯರು ಹಾಗೂ ಮೊಮ್ಮಕ್ಕಳು ಇವರೆಲ್ಲರೂ ಅಂದು ಇದ್ದ ಮನೆಯ ಹೆಸರು **"ಗಾಂಧೀಕುಟೀರ"** ಈ ಮನೆತನದ ಮತ್ತೊಂದು ವಿಶೇಷವೆಂದರೆ ಚಿಕ್ಕ ಮಕ್ಕಳನ್ನು ಹೊರತು ಪಡಿಸಿದರೆ ಈ ಮನೆಯವರೆಲ್ಲರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದವರೆ, ಮತ್ತು ಜೈಲುವಾಸ ಅನುಭವಿಸಿದವರೆ.

**ಶಿಕ್ಷಣ ಪ್ರೇಮಿ:** ಗ್ರಾಮೀಣ ಪ್ರದೇಶದ ಶಿಕ್ಷಣ ಲಾಭ ದೊರಕಿಸಬೇಕೆಂಬುದು ಗುದ್ಲೆಪ್ಪನವರ ಇಚ್ಛೆಯಾಗಿತ್ತು. ೧೯೨೪ರಷ್ಟು ಹಿಂದೆಯೇ ಹೊಸರಿತ್ತಿಯಲ್ಲಿ ಮಾಧ್ಯಮಿಕ ಶಾಲೆ ಆರಂಭವಾಗುವುದಕ್ಕೆ ಕಾರಣರಾದರು. ಹಾವೇರಿ ಭಾಗದಲ್ಲಿ ಉನ್ನತ ಶಿಕ್ಷಣದ ಸೌಕರ್ಯವಿರದ ೬೦ರ ದಶಕದಲ್ಲಿ ಕಲಾ ಹಾಗೂ ವಿಜ್ಞಾನ ಕಾಲೇಜು ಆರಂಭಿಸಲು ಶ್ರಮಿಸಿದರು. ೧೯೬೩ರಲ್ಲಿ ಕೇವಲ ೩ ರಿಂದ ೪ ತಿಂಗಳಲ್ಲಿ ಸಾರ್ವಜನಿಕರಿಂದ ೬ ಲಕ್ಷ ರೂ ಸಂಗ್ರಹಿಸಿ ಕೆ.ಎಲ್.ಇ ಸಂಸ್ಥೆಗೆ



ನೀಡಿ ಕಾಲೇಜು ಆರಂಭವಾಗುವಂತೆ ಮಾಡಿದವರು ಹಳ್ಳಿಕೇರಿ ಗುದ್ಲೆಪ್ಪ. ಈಗಲೂ ಈ ಮಹಾವಿದ್ಯಾಲಯದಲ್ಲಿ ಇವರ ಹೆಸರನ್ನೇ ಆ ಮಹಾವಿದ್ಯಾಲಯಕ್ಕೆ ಇಡಲಾಗಿದೆ ಹಾಗೂ ಇವರ ಸ್ಮರಣಾರ್ಥ ಈ ಕಾಲೇಜಿನ ಮುಂದೆ ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರ ಪ್ರತಿಮೆಯನ್ನು ನಾಡಿನ ಹಿರಿಯ ರಾಜಕಾರಣಿ ಎಸ್. ನಿಜಲಿಂಗಪ್ಪನವರು ಅನಾವರಣಗೊಳಿಸಿದ್ದಾರೆ.

## ವೈಶಿಷ್ಟ್ಯ ಪೂರ್ಣ ಗಾಂಧೀ ಗ್ರಾಮೀಣ ಗುರುಕುಲದ ಸಂಸ್ಥಾಪಕರು

ಗ್ರಾಮೀಣ ಮಕ್ಕಳಲ್ಲಿ ಪ್ರತಿಭೆಗೆ ಪ್ರೋತ್ಸಾಹವಾದ ಮತ್ತು ಶೈಕ್ಷಣಿಕ ಮುನ್ನಡೆಗೆ **'ಶಾಂತಿನಿಕೇತನ'** ಮಾದರಿಯ ವಿದ್ಯಾ ಸಂಸ್ಥೆ ಸ್ಥಾಪನೆಯ ಅವರ ಅಭಿಪ್ರಾಯದ ಪ್ರತೀಕವೇ ಹೊಸರಿತ್ತಿಯ **'ಗಾಂಧೀ ಗ್ರಾಮೀಣ ಗುರುಕುಲ'**ವಾಗಿದೆ. ಈ ಸಂಸ್ಥೆಯ ಗುರಿ ಹಾಗೂ ಕಾರ್ಯಸಾಧನೆಯ ಅವರ ಕಲ್ಪನೆಯನ್ನು ಅವರ ಮಾತಿನಲ್ಲಿಯೇ ತಿಳಿಯುವುದಾದರೆ "ನಮಗೆ ಬೇಕಾಗಿರೋ ಶಿಕ್ಷಣಾನ ಬ್ಯಾರೆ ಆಗಬೇಕು. ಗುಜರಾತ ವಿದ್ಯಾಪೀಠ, ರಾಮಕೃಷ್ಣ ಆಶ್ರಮದ ಶಿಸ್ತು ಮತ್ತು ವಿಧಾಯಕತನ ಇದ್ದು ನಮ್ಮದೊಂದು ವಿದ್ಯಾಲಯ ಮಾದರೀನೇ ಬ್ಯಾರೇ ಇರಬೇಕು. ಅದರೊಳಗೆ ಒಕ್ಕಲುತನ, ಹೈನುಗಾರಿಕೆ, ಬಡಿಗತನ, ಕಮ್ಮಾರಿಕೆಯಲ್ಲದೆ ಸಾಹಿತ್ಯ, ಸಂಗೀತ, ಚಿತ್ರಕಲಾ, ಗೃಹವಿಜ್ಞಾನದೊಂದಿಗೆ ನೂಲುವುದು, ಬಟ್ಟೆ ನೇಯುವುದು, ಡ್ರಾಯಿಂಗ್, ಡಿಜೈನಿಂಗ್ ಇರಬೇಕು. ಅದರೊಳಗೆ ಬರೋ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಯಾವುದಕ್ಕೂ ಹೊರಹೋಗುವಂತಿಲ್ಲ. ಹನ್ನೊಂದು ವರ್ಷ ಶಿಕ್ಷಣ ಪಡೆದ ಒಬ್ಬ ವಿದ್ಯಾರ್ಥಿ ಹೊರಗೆ ಬಂದಾ ಅಂದ್ರೆ ಸ್ವತಂತ್ರವಾಗಿ ಬದುಕುವುದಕ್ಕೆ, ವಿಚಾರಿಸುವುದಕ್ಕೆ ಮತ್ತು ಇಡೀ ರಾಷ್ಟ್ರದ ವಿಕಾಸಕ್ಕೂ ಒಂದಲ್ಲ ಒಂದು ರೀತಿ ನೆರವು ಆಗೋದಕ್ಕೆ ಸಿದ್ಧ ಆಗಿರಬೇಕು." ಎಂಬ ಹಳ್ಳಿಕೇರಿಯವರ ಹೇಳಿಕೆ ಅವರು ಆ ಗುರುಕುಲದ ಬಗ್ಗೆ ಮುಂದಾಲೋಚನೆ ಇಟ್ಟುಕೊಂಡು ಕಟ್ಟುವುದಕ್ಕೆ ಸಿದ್ಧವಾಗಿರಬೇಕು ಎಂಬುದು ಅರ್ಥವಾಗುತ್ತದೆ. ಅವರು ಇರುವಾಗ ಯೋಜನೆ ರೂಪಗೊಂಡಿರಲಿಲ್ಲ. ಅವರು ವೆಲ್ಲೂರು ಆಸ್ಪತ್ರೆಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆಯುತ್ತಿರುವಾಗ ಆಗಿನ ರಾಜ್ಯಪಾಲರಾದ ಶ್ರೀ ಧರ್ಮವೀರ ಅವರಿಗೆ ಪತ್ರ ಬರೆದು ತಮ್ಮ ಗುರುಕುಲದ ಕನಸನ್ನು ನನಸು ಮಾಡಲು ಕೋರಿದರು. ಅವರ ಪತ್ರಕ್ಕೆ ಪ್ರತಿಯಾಗಿ ಶ್ರೀ ಧರ್ಮವೀರರು "ಈ ನಿಮ್ಮ ಆಸೆ ಈಡೇರಿಸಲಾಗುವುದು" ಎಂದು ಪತ್ರ ಬರೆದರು. ಇದಕ್ಕೆ ಅಂದಿನ

ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು 'ಇದು ಸರಕಾರದ ಒಪ್ಪಿಗೆ' ಎಂದು ತಕ್ಷಣಕ್ಕೆ ನಾಲ್ಕ ಲಕ್ಷ ಹಣವನ್ನು ಬಿಡುಗಡೆಮಾಡಿದರು. ಇದರ ಪ್ರತಿಫಲವೇ 'ಇಡೀ ಕರ್ನಾಟಕದಲ್ಲಿ ಏಕಮೇವ ಆದರ್ಶ ಸಂಸ್ಥೆ'ಯಾಗಿ ನಿಂತಿದೆ. ಪ್ರತಿಭಾವಂತ ಗ್ರಾಮೀಣ ಕೃಷಿಕ ಮಕ್ಕಳಿಗೆ ಮಾತ್ರ ಪ್ರವೇಶಾವಕಾಶದ ಈ ಸಂಸ್ಥೆ ವೈಶಿಷ್ಟ್ಯಪೂರ್ಣ ರೀತಿಯಲ್ಲಿ ಕಾರ್ಯನಿರ್ವಹಿಸುವುದುನ್ನು ಇಲ್ಲಿಗೆ ಭೇಟಿ ನೀಡಿ ಪರಿಚಯಿಸಿಕೊಳ್ಳ ಬಹದು.

ಗುದ್ಲೆಪ್ಪನವರ ಆಸೆ ನೆರವೇರಿದ್ದು ಅವರು ಕಾಲವಾದ ನಂತರ: ವಿದ್ಯಾಪಕ್ಷಪಾತಿಗಳಾದ ಶ್ರೀ ಹಳ್ಳಿಕೇರಿಯವರು ದೇಶದ ವಿವಿಧ ಭಾಗಗಳಲ್ಲಿಯ ಪ್ರಸಿದ್ಧ ವಸತಿ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ಕೊಟ್ಟು, ಶಿಕ್ಷಣತಜ್ಞರನ್ನು ಕಂಡು ಗ್ರಾಮೀಣ ಮಕ್ಕಳಿಗೆ ಉಪಯುಕ್ತವಾದ ಸ್ವಾವಲಂಭನೆಯ ಶಿಕ್ಷಣದ ಬಗ್ಗೆ ಅಗತ್ಯ ವಿವರಗಳನ್ನು ಸಂಗ್ರಹಿಸಿದರು. ವರ್ಧಾ ಆಶ್ರಮದಲ್ಲಿ ಜೀವನ ಶಿಕ್ಷಣ ತರಬೇತಿ ಪಡೆದ ಶಿಕ್ಷಣತಜ್ಞ ಶ್ರೀ ಮ. ಗು. ಹಂದ್ರಾಳರವರು ಗುರುಕುಲದ ವಿಶೇಷ ಯೋಜನೆಯನ್ನು ರೂಪಿಸಿ ರಾಜ್ಯ ಸರಕಾರಕ್ಕೆ ಸಲ್ಲಿಸಿದರು. ಆದರೆ ದುರದೃಷ್ಟವಶಾತ್ ಸರಕಾರದ ಹಸಿರು ನಿಶಾನೆ ಗುರುಕುಲಕ್ಕೆ ದೊರೆಯುವಷ್ಟರಲ್ಲಿಯೇ ಹಳ್ಳಿಕೇರಿ ಗುದ್ಲೆಪ್ಪನವರು ಇಹಲೋಕಯಾತ್ರೆ ಮುಗಿಸಿದರು. ಆದರೆ ಅವರ ಆಸೆ ನೆರವೇರಿಸಬೇಕೆಂಬ ಅವರ ಅಭಿಮಾನಿಗಳ ಸತತ ಪ್ರಯತ್ನದ ಫಲವಾಗಿ ೧೯೮೪ ಅಕ್ಟೋಬರ್ ೨ ರಂದು ಮಹಾತ್ಮಾ ಗಾಂಧೀಜಿ ಜಯಂತಿಯಂದು ಹೊಸರಿತ್ತಿಯಲ್ಲಿ ಗಾಂಧೀ ಗ್ರಾಮೀಣ ಗುರುಕುಲ ಪ್ರಾರಂಭವಾಯಿತು. ಈ ಶಾಲೆ ಇರುವುದು ಕರ್ನಾಟಕದಲ್ಲಿ ಇದೊಂದೆ. ವಿಶಾಲವಾದ ೩೨ ಎಕರೆ ವಿಸ್ತೀರ್ಣದಲ್ಲಿ ಈ ಗುರುಕುಲ ಪರಿಸರಿಸಿಕೊಂಡಿದೆ.

ಗುರುಕುಲ ಶಿಕ್ಷಣವು ನಮ್ಮ ಮಕ್ಕಳಲ್ಲಿ ನಾವು ಭಾರತೀಯರೆಂದು ಹೇಳಿಕೊಳ್ಳುವ ಧೈರ್ಯ, ಸ್ಥೈರ್ಯ, ಮನೋವೃತ್ತಿ ನೀಡುವಲ್ಲಿ ತರಬೇತಿ ನೀಡುವ ಸಂಸ್ಥೆಯಾಗಿದೆ. ಗಾಂಧೀಜಿಯವರ ಆದರ್ಶಗಳನ್ನು ಪ್ರತಿಬಿಂಬಿಸುವ ಚಟುವಟಿಕೆಗಳ ಕೇಂದ್ರವಾಗಬೇಕೆಂದು ಗ್ರಾಮೀಣ ಗುರುಕುಲದ ಮೂಲ ಧ್ಯೇಯ. ಆರ್ಥಿಕವಾಗಿ ಹಿಂದುಳಿದಿರುವ ಗ್ರಾಮೀಣ ಕೃಷಿಕರ ಮಕ್ಕಳಿಗೆ ಈ ಶಾಲೆ ಪ್ರಥಮ ಪ್ರಾಶಸ್ತ್ಯ ನೀಡುತ್ತದೆ. ಇಲ್ಲಿ ಲಿಖಿತ ಪರೀಕ್ಷೆಯಲ್ಲಿ ಕನ್ನಡ, ಸಾಮಾಜಿಕ ಅಭ್ಯಾಸ, ಗಣಿತ, ವಿಜ್ಞಾನ ಪ್ರಶ್ನೆಗಳು ೪ನೇ ವರ್ಗದ ಅಭ್ಯಾಸ ಪತ್ರಿಕೆಯವು



ಇರುತ್ತವೆ. ಪ್ರತಿ ವಿಷಯಕ್ಕೆ ೨೫ ಗುಣಗಳು, ೩೦ ನಿಮಿಷ ಕಾಲಾವಧಿ ಇರುತ್ತದೆ. ಹಾಗೂ ಮೌಖಿಕ ಪರೀಕ್ಷೆಗಳ ಮೂಲಕ ೫ನೇ ತರಗತಿಗೆ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾಗಿರಬೇಕು. ಪ್ರತಿ ತರಗತಿಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ೪೦, ಶಿಕ್ಷಣದ ಮಾಧ್ಯಮ ಕನ್ನಡ. ಭಾರತೀಯರಾಗಿ ಬದುಕಿ ದೇಶದ ಆಂತರಿಕ ಕಲಹಗಳನ್ನು ಕಿತ್ತೆಸೆಯುವ ವೈಜ್ಞಾನಿಕ ಪ್ರಗತಿಪರ ಮಾರ್ಗ ಹೊಂದುವ ಶಿಕ್ಷಣ ನೀಡುವ ಸಂಸ್ಥೆ ಇದು. ಬಡ ಕುಟುಂಬದಲ್ಲಿ ಬೆಳೆದು ಶಿಕ್ಷಣ ಮುಂದುವರೆಸಲು ಆರ್ಥಿಕವಾಗಿ ಹಿಂದುಳಿದ ನಿಸ್ಸಹಾಯಕ ಸ್ಥಿತಿಯಲ್ಲಿರುವ ಗ್ರಾಮಾಂತರ ಬಾಲಕರಿಗೆ ಆಶಾದಾಯಕ ಸಂಸ್ಥೆ ಇದು.

ಈ ಗುರುಕುಲದ ಶಿಕ್ಷಣ ಪ್ರಾಥಮಿಕ ೫ನೇ ವರ್ಗದಿಂದ ೧೦ನೇ ತರಗತಿಯವರಿಗೂ (ಇತ್ತೀಚಿಗೆ ಇಲ್ಲಿ ಪದವಿ ಪೂರ್ವ ಹಾಗೂ ಪದವಿ ಶಿಕ್ಷಣವನ್ನು ನೀಡಲಾಗುತ್ತದೆ) ಕರ್ನಾಟಕ ರಾಜ್ಯ ಅಭ್ಯಾಸ ಪತ್ರಿಕೆಯಂತೆ ಕಲಿಸಲಾಗುತ್ತದೆ. ಆದರೆ ಈ ಸಾಮಾನ್ಯ ಶಿಕ್ಷಣದೊಂದಿಗೆ ಉದ್ಯೋಗ ತರಬೇತಿ ನೀಡಲಾಗುತ್ತದೆ. ಅಂದರೆ ಉದ್ಯೋಗ ತರಬೇತಿ ಪಡೆದು ಸ್ವಾಲಂಭಿಯಾಗುವಂತಹ ಉದ್ಯೋಗಗಾಳಾದ ಕೈತೋಟ, ಕೃಷಿ, ನೂಲುವುದು, ನೇಯುವುದು, ರೇಷ್ಮೆ ವ್ಯವಸಾಯ, ಆಧುನಿಕ ಕೃಷಿ ಸಾಧನೆಗಳ ಜ್ಞಾನ ನೀಡಲಾಗುವುದು, ದೈಹಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ವಿಕಾಸವನ್ನು ಸಾಧಿಸುವುದು, ನಾಗರಿಕ ಪ್ರಜ್ಞೆ ಮೂಡಿಸುವುದು, ಸ್ವದೇಶಾಭಿಮಾನ, ಸ್ವಾವಲಂಬನೆ, ಸಾದಾ ಜೀವನ ಇವುಗಳನ್ನು ಈ ಗುರುಕುಲದಲ್ಲಿ ವಿದ್ಯಾರ್ಥಿಗಳಲ್ಲಿ ಮೂಡಿ ಬರುವುದರ ಕಡೆಗೆ ಇಲ್ಲಿ ವಿಶೇಷ ಗಮನ ನೀಡಲಾಗುತ್ತದೆ. ಸುಸಜ್ಜಿತ ಶಾಲಾ ಕಟ್ಟಡ, ವಿದ್ಯಾರ್ಥಿಗಳ ವಸತಿ ಗೃಹ, ವಿಶಾಲ ಆಟದ ಮೈದಾನ, ಸುತ್ತಲು ಕಣ್ಣಿಗೆ ಮುದ ನೀಡುವ ಹೂದೋಟ, ನಯನಮನೋಹರವಾದ ಪರಿಶುದ್ಧ ಪರಿಸರದಲ್ಲಿ ನಿರ್ಮಾಣಗೊಂಡಿದೆ. ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರ ಮತ್ತು ಊಟ ಮುಂತಾದವು ಉಚಿತ.

ಇಲ್ಲಿನ ವಿದ್ಯಾರ್ಥಿಗಳ ದೈನಂದಿನ ಕಾರ್ಯಕ್ರಮ ಬೆಳಗಿನ ೫ ಗಂಟೆಯಿಂದ ಪ್ರಾರಂಭವಾಗಿ ರಾತ್ರಿ ೧೦ ಗಂಟೆಗೆ ಮುಗಿಯುತ್ತದೆ. ಎಲ್ಲಾ ಕಾರ್ಯಕ್ರಮಗಳು ಶಿಕ್ಷಕರ ಹಾಗೂ ಮುಖ್ಯೋಪಾಧ್ಯಾಯರ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ. ಈ ದೈನಂದಿನ ಕಾರ್ಯಗಳು ಸಾಮೂಹಿಕ ಹಾಗೂ ಸಾಂಘಿಕವಾಗಿರುವುವು.

ಅಲ್ಲದೆ ವಸತಿ ಗೃಹಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪಾಲಿನ ಕಾರ್ಯಗಳನ್ನು ನೆರವೇರಿಸಿಕೊಳ್ಳುವುದು, ಪ್ರತಿ ನಿತ್ಯ ವಸತಿಗೃಹ, ಕಕ್ಕಸು, ಸ್ನಾನಗೃಹ ಸ್ವಚ್ಛತೆಯ ಕೆಲಸವನ್ನು ಪರ್ಯಾಯ ಕ್ರಮದಲ್ಲಿ ವಿದ್ಯಾರ್ಥಿಗಳೇ ನಿರ್ವಹಿಸುವುದು. ಇಲ್ಲಿ ಶ್ರೀಮಂತ ಬಡವ ಎಂಬ ಭೇದ–ಭಾವವಿಲ್ಲದೇ ಎಲ್ಲರೂ ಸಹೋದರರಂತೆ ಸಹಬಾಳ್ವೆ, ಸಹ ಜೀವನ ನಡೆಸುವರು.

ಈ ಗುರುಕುಲವು ಸ್ಥಾಪಿತವಾಗಿ ದಶಕಗಳನ್ನು ಪೂರೈಸಿದ್ದು ಗಾಂಧೀಜಿಯವರ ಆದರ್ಶಗಳನ್ನು, ಅವರ ವಿಚಾರಗಳನ್ನು, ಸಂದೇಶಗಳನ್ನು ಇಲ್ಲಿಯ ಮಕ್ಕಳಲ್ಲಿ ಬಿತ್ತುವಲ್ಲಿ ಸಂಸ್ಥೆ ಯಶಸ್ವಿನತ್ತ ಸಾಗುತ್ತಿರುವುದು ಸಂಸ್ಥಾಪಕ ಹಳ್ಳಿಕೇರಿ ಗುದ್ಲೆಪ್ಪನವರ ಗಾಂಧೀಜಿಯ ವಿಚಾರಧಾರೆಗಳು ಫಲನೀಡುತ್ತವೆ ಮತ್ತು ಅವರ ವಿಚಾರಧಾರೆಗಳನ್ನು ಪ್ರಸಾರಗೊಳಿಸಲು ಹಾಗೂ ಅವರು ಸೂಚಿಸಿದ್ದ ವಿಧಾಯಕ ಕಾರ್ಯಗಳ ಉದ್ದೇಶ ಪೂರ್ಣಗೊಂಡಿರುವುದನ್ನು ನಾವು ಕಾಣಬಹದು.

ಹಳ್ಳಿಕೇರಿಯವರ ಗಾಂಧೀ ಗ್ರಾಮೀಣ ಗುರುಕುಲದ ಕನಸನ್ನು ನನಸು ಮಾಡಿದವರು : ಅರವತ್ತು ವರ್ಷ ತುಂಬಿದ ಹಳ್ಳಿಕೇರಿ ಗುದ್ಲೆಪ್ಪನವರ ಷಷ್ಟ್ಯಬ್ಧಿ ಸಮಾರಂಭಕ್ಕಾಗಿ ಆಗಿನ ಶಿಕ್ಷಣ ಸಚಿವ ಶ್ರೀ ಎಸ್. ಆರ್. ಕಂಠಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿ ನಿಧಿ ಸಂಗ್ರಹಿಸಲಾಯಿತು. ಆ ಸಮಾರಂಭ ಮುಗಿದ ಮೇಲೆ ಸುಮಾರು ಒಂದುವರೆ ಲಕ್ಷ ರೂಪಾಯಿ ಉಳಿಯಿತು. ಆ ಹಣವನ್ನು ನಾಡ ಶಿಕ್ಷಣ ಸಮಿತಿ, ಹೊಸರಿತ್ತಿ, ಈ ಸಂಸ್ಥೆಗೆ ವರ್ಗಾಯಿಸಬೇಕು, ಅದರಿಂದ ಗಾಂಧೀ ಗ್ರಾಮೀಣ ಗುರುಕುಲ ಸ್ಥಾಪನೆಯಾಗಬೇಕು ಎಂದು ಸಂಕಲ್ಪಿಸಿದರು. ಗುದ್ಲೆಪ್ಪನವರು ಗಾಂಧೀಜಿಯವರ ಆದರ್ಶಗಳ ಕನಸಿನ ಗುರುಕುಲದ ಹೊಣೆಗಾರಿಕೆಯನ್ನು ಎಂ. ಜಿ. ಹಂದ್ರಾಳರವರಿಗೆ ವಹಿಸಿದರು. ಹಂದ್ರಾಳರು ದೇಶದ ನಾನಾ ಕಡೆಗಳಲ್ಲಿ ಸುತ್ತಾಡಿ ವಸತಿಯುತ ಶಾಲೆಗಳನ್ನು ಗಮನಿಸಿ ಯೋಜನೆಯನ್ನು ರೂಪಿಸಿದರು. ಅದೇ ಹೊಸರಿತ್ತಿಯ **"ಗಾಂಧೀ ಗ್ರಾಮೀಣ ಗುರುಕುಲ"**ಯೋಜನೆ ಇದನ್ನು ಗುದ್ಲೆಪ್ಪನವರು ಮೆಚ್ಚಿಕೊಂಡಿದ್ದರು.

ಆದರೆ, ಹಳ್ಳಿಕೇರಿ ಗುದ್ಲೆಪ್ಪನವರು ಇರುವಾಗಲೇ ಆ ಗುರುಕುಲ ಯೋಜನೆ ಸಿದ್ಧವಾಗಲಿಲ್ಲ. ಗುದ್ಲೆಪ್ಪನವರ ನಂತರ ಅವರ ಕನಸಿನ ಯೋಜನೆಗಳಿಗೆ ಸರಕಾರದ ಅಧಿಕಾರಿಗಳು ಮೌನವಹಿಸಿದರು. ಅನೇಕ ಅಡೆ–ತಡೆಗಳು ಉಂಟಾದವು.



ಹೀಗೆ ೧೪ ವರ್ಷಗಳು ಉರುಳಿದವು. ಆದರೆ ಗುದ್ಲೆಪ್ಪನವರ ಹಿರಿಯ ಪುತ್ರ ಡಾ. ದೀನಬಂಧು ಮಾತ್ರ ಹತಾಶರಾಗದೇ ಅವರ ಪ್ರಯತ್ನ ಮಾಡುತ್ತಲೆ ಇದ್ದರು. ಕೊನೆಗೂ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾದ ಮೇಲೆ ನಿಯೋಗವೊಂದು ಹೋಗಿ ಹಳ್ಳಿಕೇರಿಯವರ ಗಾಂಧೀಜಿಯವರ ಆದರ್ಶದ ಶಿಕ್ಷಣ ವ್ಯವಸ್ಥೆ ಅದನ್ನು ಮಡಲೇಬೇಕೆಂಬ ಗುದ್ಲೆಪ್ಪನವರ ಕನಸಿನ ಈ ಸಂಸ್ಥೆಗೆ ಸರಕಾರ ಮುಂಜುರಾತಿ ನೀಡಬೇಕೆಂದು ಕೇಳಿಕೊಳ್ಳಲಾಯಿತು. ಈ ಹಿಂದೆ ರಾಮಕೃಷ್ಣ ಹೆಗಡೆ ಹಣಕಾಸಿನ ಮಂತ್ರಿಗಳಾಗಿದ್ದಾಗಲೂ ಕೇಳಿಕೊಳ್ಳಲಾಗಿತ್ತು. ಈಗ ಅವರೇ **ಶಿಕ್ಷಣ ಸಂಸ್ಥೆಗೆ ಮನ್ನಣೆ** ನೀಡಿದರು. ಅಲ್ಲಿಗೆ ಹಳ್ಳಿಕೇರಿ ಗುದ್ಲೆಪ್ಪನವರು ಗಾಂಧೀಜಿಯವರ ಆದರ್ಶದ ಶಿಕ್ಷಣ ವ್ಯವಸ್ಥೆಯ ಕನಸನ್ನು ನನಸಾಗಿಸಲು ಪ್ರಯತ್ನಿಸಿದ ಕನಸು ನನಸಾಗಲು ಇಷ್ಟೊಂದು ಕಷ್ಟಪಡಬೇಕಾಯಿತು ಈ ಎಲ್ಲ ಸಂಕಷ್ಟಗಳನ್ನು ಅನುಭವಿಸಿದ ಎಂ. ಜಿ. ಹಂದ್ರಾಳರನ್ನು ನೆನಪಿಸಿಕೊಂಡಿರುವುದು ನಿಜಕ್ಕೂ ದುಃಖಕರವಾದ ಸನ್ನಿವೇಶವೇ ಸರಿ.

ಹೊಸರಿತ್ತಿ ಆಶ್ರಮ ಹಾವೇರಿ ಜಿಲ್ಲೆಯ ಮತ್ತೊಂದು ಪ್ರಮುಖ ಆಶ್ರಮ ಹೊಸರಿತ್ತಿ ಆಶ್ರಮ ೧೯೩೪ ರಲ್ಲಿ ೨೦ ರಿಂದ ೩೦ ಜನ ತರುಣರು ಸೇರಿಕೊಂಡು ಹೊಸರಿತ್ತಿ ಗಾಂಧೀ ಆಶ್ರಮವನ್ನು ಸ್ಥಾಪಿಸಿಕೊಂಡು ಖಾದಿ ಗ್ರಾಮೋದ್ಯೋಗದ ಕೆಲಸ ಮಾಡುತ್ತ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಿಧಾಯಕ ಕಾರ್ಯಗಳನ್ನು ಮಾಡಿದ್ದರು. ಆಶ್ರಮಕ್ಕೆ ಗುದ್ಲೆಪ್ಪ ಹಳ್ಳಿಕೇರಿ ಅಧ್ಯಕ್ಷರಾಗಿದ್ದು, ವೆಂಕಟೇಶ ಮಾಗಡಿ ಕಾರ್ಯದರ್ಶಿಗಳಾಗಿದ್ದರು. ಸೂತ್ತಲಿನ ಗ್ರಾಮಗಳನ್ನು ಕೇಂದ್ರೀಕರಿಸಿ ಸಫಾಯಿ, ನೂಲುವುದು, ಹಂಜಿ ಹೊಡೆಯುವುದು ಮತ್ತು ಸೇವಾ ದಳದ ಸಂಘಟನೆ ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಸ್ವತಃ ಮಹದೇವಪ್ಪ ಅರಳಿ ಹೊಡೆಯುವುದನ್ನು, ನೂಲುವುದನ್ನು ಕಲಿತು ಬಂದಿದ್ದರು. ಹೀಗೆ ಹಾವೇರಿ, ಗುತ್ತಲ, ಹಾಲಗಿ, ಅಗಡಿ, ನೆಗಳೂರು, ಹೊಸರಿತ್ತಿ ಮುಂತಾದ ಗ್ರಾಮಗಳಲ್ಲಿ ಆಶ್ರಮದ ಮೂಲಕ ರಾಷ್ಟ್ರೀಯ ಜಾಗೃತಿ ಕಾರ್ಯ ಆರಂಭವಾಯಿತು.

ಹೊಸರಿತ್ತಿ, ಕೊರಡೂರು, ಶಿರಮಾಪುರ, ಯಲಗಚ್ಚು ಮುಂತಾದ ನಾಲ್ಕರಿಂದ ಐದು ಗ್ರಾಮಗಳಲ್ಲಿ ಖಾದಿ ಕಾರ್ಯ ಮಾಡಲಾಗುತ್ತಿತ್ತು. ಸುಮಾರು ೨೦೦ ಕುಟುಂಬಗಳು ಖಾದಿ ಗ್ರಾಮೋದ್ಯೋಗವನ್ನೇ ಆಧರಿಸಿ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದವು. ಕೇವಲ ೧೦೦ ರಿಂದ ೧೫೦ ಜನ ಸದಸ್ಯರಿದ್ದ ಈ

ಆಶ್ರಮ ಸದಸ್ಯರುಗಳೆಂದರೆ ಆ ಭಾಗದಲ್ಲಿ ಗೌರವವಿರುವಂತಹ ವಾತಾವರಣ ನಿರ್ಮಾಣವಾಗಿತ್ತು ಎಂಬ ಆ ಭಾಗದ ಚಳುವಳಿಗಾರರ ಹೇಳಿಕೆಗಳು ಸಾಕ್ಷಿಯಾಗಿವೆ. ಹಳ್ಳಿಕೇರಿ ಗುದ್ಲೆಪ್ಪ ಮಹದೇವಪ್ಪ ಮೈಲಾರ ಸೇರಿ **'ಗಾಂಧೀ ಆಶ್ರಮ'** ಸ್ಥಾಪಿಸಿ ಹೊಸರಿತ್ತಿಯ ಸುತ್ತಮುತ್ತಲಿನ ಹಳ್ಳಿಗಳ ಜನತೆಗೆ ಅದರಲ್ಲಿಯೂ ಮಹಿಳೆಯರಲ್ಲಿ ಸ್ವದೇಶಿ ಆಂದೋಲನದ ಮೂಲಕ ನೂಲುವುದು, ನೇಯುವುದರಿಂದ ಸ್ವಾವಲಂಬಿ ಜೀವನ ನಡೆಸಲು ಕಾರಣಕರ್ತರಾದವರು. ಹೊಸರಿತ್ತಿಯಲ್ಲಿ ಆಶ್ರಮ ಕಟ್ಟಿದ ಮೇಲೆ ಅಲ್ಲಿ ನೂಲುವ, ಖಾದಿಯನ್ನು ಪ್ರಚಾರ ಮಾಡುವುದರಲ್ಲಿ ಹಳ್ಳಿಕೇರಿಯವರಿಗೆ ಎಲ್ಲಿಲ್ಲದ ಸಂತೋಷ, ಖಾದಿ ಬಟ್ಟೆಗಳನ್ನು ಹಳ್ಳಿಕೇರಿಯವರು ಧಾರವಾಡದ ಪ್ರೊಫೆಸರುಗಳ ಮನೆ ಮನೆಗಳಿಗೆ ಹೋಗಿ ಅವರ ಮನವೊಲಿಸಿ, ಅವರು ಖಾದಿಧಾರಿಗಳಾಗುವಂತೆ ಮಾಡಿ ಯಶಸ್ವಿಯಾಗುತ್ತಿದ್ದರು ಎಂಬುದನ್ನು ಚಳುವಳಿಕಾರ ವೆಂಕಟೇಶ ಮಾಗಡಿ ಉಲ್ಲೇಖಿಸುತ್ತಾರೆ.

ಹೊಸರಿತ್ತಿ ಆಶ್ರಮದ ಪ್ರಭಾವದಿಂದ ಗುತ್ತಲದ ದತ್ತಾತ್ರೇಯ ವೆಂಕಟೇಶ ನಾಡಗೇರ ತಮ್ಮ ಊರಿನಲ್ಲಿ "ಗ್ರಾಮ ಸಂಘಟನಾ ಮಂಡಲ" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ವಿವಿಧ ರಾಷ್ಟ್ರೀಯ ಕಾರ್ಯಗಳನ್ನು ಮಾಡುತ್ತಿದ್ದರು. ಇವರ ಕಾರ್ಯಕ್ಕೆ ಹಣಮಂತ ನರಸಿಂಹ ಕರ್ಪೂರರು ತಮ್ಮ ಮನೆಯನ್ನೇ ಬಿಟ್ಟುಕೊಟ್ಟಿದ್ದರು. ಈ ಸಂಘಟನೆಯ ವಿವಿಧ ಚಟುವಟಿಕೆಗಳಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ಜಾಗೃತಿ ಕಾರ್ಯ ಹಾಗೂ ರಾಷ್ಟ್ರೀಯ ಭಾವನೆ ಬೆಳೆಯಿತು. ಹೀಗೆ ಹೊಸರಿತ್ತಿಯ ಆಶ್ರಮ ಸುತ್ತಮುತ್ತಲಿನ ಗ್ರಾಮಗಳಿಗೆ ಆಶ್ರಮ ಕಟ್ಟಲು ಹಾಗೂ ಅದರಿಂದ ಆ ಭಾಗದಲ್ಲಿಯೂ ಚಳುವಳಿ ಪ್ರಸಾರ, ಶೈಕ್ಷಣಿಕ ಕಾರ್ಯಗಳು, ವಿಧಾಯಕ ಹಾಗೂ ಸಾಮಾಜಿಕ ಕಾರ್ಯಗಳು ಪ್ರಾರಂಭವಾಗಲು ಹೊಸರಿತ್ತಿ ಆಶ್ರಮ ಪ್ರಭಾವ ಬೀರಿದ್ದು ವಿಶೇಷ.

## ಹೊಸರಿತ್ತಿ ಆಶ್ರಮದ ಚಳುವಳಿಕಾರರಿಂದ ಹತಭಾಗಿನಿಯರ ಮನ ಪರಿವರ್ತಿಸಿದ ಘಟನೆ

ಹೊಸರಿತ್ತಿಯ ಗುದ್ದಿಸ್ವಾಮಿಯ ಜಾತ್ರೆಯ ಸಂದರ್ಭದಲ್ಲಿ ಆಶ್ರಮವಾಸಿಗಳು ಅಥವಾ ಚಳುವಳಿಗಾರರು ಒಂದು ಅನಿಷ್ಟ ವ್ಯವಸ್ಥೆಯನ್ನು ಕಂಡರು. ಜಾತ್ರೆ ನಡೆಯುವ ಸ್ಥಳದಿಂದ ಸ್ವಲ್ಪ ದೂರದಲ್ಲಿ ಸುಮಾರು ೪೦ ಚಿಕ್ಕ ಚಿಕ್ಕ ಗುಡಿಸಲುಗಳಿದ್ದು, ಅಲ್ಲಿಯ ಮಂದಬೆಳಕಿನಲ್ಲಿ ಮುರುಕು ಹೊರಸುಗಳ ಮೇಲೆ ಸ್ತ್ರೀತ್ವವನ್ನೇ ಮಾರಿಕೊಳ್ಳುವ ಹೃದಯವಿದ್ರಾವಕ ಕಾರ್ಯ ನಡೆದಿತ್ತು. ಎಳೆಯ ವಯಸ್ಸಿನ ಮಹಿಳೆಯರು ಹೊಟ್ಟೆಪಾಡಿಗಾಗಿ ಕಾಸಿನ ಲೆಕ್ಕದಿಂದ ಮೈ ಮಾರಾಟ ನಡೆಸುತ್ತಿರುವುದು ಮತ್ತು ಜಾತ್ರೆಗೆ ಬಂದ ಎಳೆಯ ಹುಡುಗರೂ ಈ ಕಾರ್ಯದಿಂದ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವುದನ್ನು ಸ್ವಯಂಸೇವಕರಾಗಿ ಹೋಗಿದ್ದ ೨೦ ಜನ ಚಳುವಳಿಗಾರರು ಗಮನಿಸಿದರು. ಇದಕ್ಕೆ ಪರಿಹಾರ ಕಂಡುಕೊಳ್ಳಲು ಚಳುವಳಿಗಾರರು ಹಳ್ಳಿಕೇರಿ ಗುದ್ಲೆಪ್ಪನವರ ಅನುಮತಿ ಪಡೆದು, ಗುಡಿಸಲುಗಳ ಮುಂದೆ ಆ ಉದ್ಯೋಗವನ್ನು ನಿಲ್ಲಿಸಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸಿದರು. ಸ್ವಯಂಸೇವಕರು ಈ ರೀತಿ ಧರಣಿ ಕುಳಿತುಕೊಂಡಿದ್ದಕ್ಕೆ ಗುಡಿಸಲುಗಳ ಹುಡುಗಿಯರು ಅಶ್ಲೀಲವಾಗಿ ಬೈದರು. ಚಳುವಳಿಗಾರರು ಆ ಹುಡುಗಿಯರಿಗೆ ಮಾತ್ರ ಏನೂ ಮಾತನಾಡಲಿಲ್ಲ. ಆದರೆ, ಗುಡಿಸಲುಗಳ ಮುಂದೆ ಚಳುವಳಿಗಾರರು ಕುಳಿತಿದ್ದರಿಂದ ತರುಣ ಗಿರಾಕಿಗಳು ಅತ್ತ ಸುಳಿಯಲಿಲ್ಲ. ಚಳುವಳಿಗಾರರು ಒಳ್ಳೆಯದೇನೋ ಸಾಧಿಸಿದ ಉತ್ಸಾಹದಿಂದ ಆಶ್ರಮಕ್ಕೆ ಮರಳಿದರು.



ಸ್ವಲ್ಪ ಸಮಯದಲ್ಲಿ ಆ ೪೦ ಹತಭಾಗಿನಿ ಹುಡುಗಿಯರು ಅಳುತ್ತ, ಎದೆ ಎದೆ ಬಡಿದುಕೊಳ್ಳುತ್ತ ಆಶ್ರಮದ ಮುಂದೆ ಬಂದು ಧರಣಿ ಸತ್ಯಾಗ್ರಹ ನಡೆಸಿದರು. ಕಾರಣ ಚಳುವಳಿಗಾರರು ಅವರ ಗುಡಿಸಲುಗಳ ಮುಂದೆ ಧರಣಿ ನಡೆಸಿದ್ದಕ್ಕೆ, ಯಾವ ಗಿರಾಕಿಗಳು ಬಾರದಿರುವುದರಿಂದ ತಮಗೆ ಊಟವಿಲ್ಲದ ಹಸಿವಿನ ಸಂಕಷ್ಟವನ್ನು ಹೇಳಿದರು. ಅವರ ಹಸಿವಿನ ಸಂಕಷ್ಟವನ್ನು ನೀಗಿಸಲು ಚಳುವಳಿಗಾರರು ಕೂಡಲೇ ಜಾತ್ರೆಯಲ್ಲಿ ಬುತ್ತಿ–ರೊಟ್ಟಿ, ಪಲ್ಲೆಯನ್ನು ಭಿಕ್ಷೆ ಬೇಡಿಕೊಂಡು ಬಂದು ಅವರ ಹಸಿವು ನೀಗಿಸಿದಾಗ ಸ್ವಯಂಸೇವಕರಿಗಾದ ಸಂತೋಷ ಹೇಳತೀರದು. ಅವರೆಲ್ಲರ ಊಟವಾದ ಮೇಲೆ ಚಳುವಳಿಯ ನಾಯಕರು ನಿಮಗೆ ಇಂದು ಊಟ ನೀಡಿದ್ದೇವೆ, ನಾಳೆ? ಅದಕ್ಕೆ ಪರಿಹಾರವಿದೆ ನೀವು ಎಲ್ಲರೂ ಒಪ್ಪುವುದಾದರೆ, ನೀವು ರಾಟಿಯ ಉದ್ಯೋಗದಿಂದ ಸಮಾಜದಲ್ಲಿ ಗೌರವಯುತರಾಗಿ ಬದುಕಬಹುದು ಎಂಬ ವಿಚಾರಗಳನ್ನು ತಿಳಿಸಿದರು, ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಲಾಯಿತು. ಅಂದಿನ ಆ ಘಟನೆಯನ್ನು ಇಂದಿಗೂ ನೆನಪಿಸಿಕೊಂಡು ನೋವು ಮತ್ತು ಹೆಮ್ಮೆಯಿಂದ ಪರಮಣ್ಣ ಹರಕಂಗಿ ಹಾಗೂ ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿ ಎಂಬ ಸ್ವಾತಂತ್ರ್ಯ ವೀರರು ನೆನಪಿಸಿಕೊಳ್ಳುತ್ತಾರೆ.

ಈ ಘಟನೆಯಿಂದ ಸ್ವಾತಂತ್ರ್ಯಹೋರಾಟಗಾರರು ರಾಷ್ಟ್ರೀಯ ಹೋರಾಟದೊಂದಿಗೆ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಮಾಡಿದ ಪ್ರಯತ್ನವಮಾತ್ರವಲ್ಲ ಅದರಲ್ಲಿ ಅವರು ಹಠವಾದಿಗಳಾಗಿ ಅದನ್ನು ಸಾಧಿಸಲು ಹೋರಾಡಿದ್ದನ್ನು, ಸಾಮಾಜಿಕವಾಗಿ ಅವರ ಕಾಳಜಿಯನ್ನು ಅರಿಯಬಹುದಾಗಿದೆ.

ಇದೇ ರೀತಿ ಇದೇ ಹೊಸರಿತ್ತಿ ಆಶ್ರಮದಿಂದ ತನ್ನ ವಿದಾಯಕ ಕಾರ್ಯಗಳನ್ನು ಆರಂಭಿಸಿದ ಮತ್ತೊಬ್ಬ ಚಳುವಳಿಯ ನಾಯಕ ಮೈಲಾರ ಮಹದೇವಪ್ಪನವರ ಕಾರ್ಯಗಳನ್ನು ಈ ಕೆಳಗೆ ವಿವರಿಸಲಾಗಿದೆ.

## ಮೈಲಾರ ಮಹದೇವಪ್ಪ :

**ಕಾಂತನ ಕಳಕೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ ।**

**ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ ಮಹಾದೇವಪ್ಪ ಮೈಲಾರ ।**

**ಕರುನಾಡಿನ ಕಲಿ ವೀರಕೇಸರಿ ನೆನಪಿಲೆನ್ನುತ ನಿರಂತರ ।**

ಸಮ್ಮದ್ ಸಾಹೇಬ ಬೆಳ್ಳೂಡಿಯ ಈ ಲಾವಣಿ ಸ್ವಾತಂತ್ರ್ಯಾಂದೋಲನದಲ್ಲಿ ಕರ್ನಾಟಕದ ಮನೆ ಮನೆಗಳ ಮಾತಾಗಿ, ಮೈಲಾರ ಮಹದೇವಪ್ಪನ ಬಲಿದಾನದ ಕಥೆ, ಅಸಂಖ್ಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಾಗಿತ್ತು. ಮಹದೇವಪ್ಪ ಮನೆ, ಕುಟುಂಬ, ಊರು–ಕೇರಿ ಎಲ್ಲ ತೊರೆದು ತಮ್ಮ ಹದಿಹರೆಯದಲ್ಲೇ ಶಾಲೆಗೆ ಶರಣು ಹೊಡೆದು ಅಪ್ರತಿಮ ಹೋರಾಟ ನಡೆಸಿ, ಕೊನೆಗೆ ಬ್ರಿಟಿಷರ ಗುಂಡಿಗೆ ಆಹುತಿಯಾದರು. ಅಂತೆಯೇ, ಅವರು ಭಾರತ ಸ್ವಾತಂತ್ರ್ಯಾಂದೋಲನಕ್ಕೆ ಕರ್ನಾಟಕ ನೀಡಿದ ಮಹಾನ್ ಕೊಡುಗೆಗಳಲ್ಲಿ ಅಗ್ರಗಣ್ಯರು. **'ಮಾಡು ಇಲ್ಲವೇ ಮಡಿ'** ಎಂಬ ಮಹಾತ್ಮರ ಕರೆಯನ್ನು ಅಕ್ಷರಶಃ ಪಾಲಿಸಿದ ಅದಮ್ಯ ಚೇತನ, ಗಾಂಧೀಜಿಯ ಆತ್ಮೀಯ ಶಿಷ್ಯ. ಮೈಲಾರ ಮಹದೇವಪ್ಪ ಈಗಿನ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ ರೈತ ಕುಟುಂಬದಲ್ಲಿ ಜೂನ್ ೮, ೧೯೧೧ರಂದು ಜನಿಸಿದರು. ತಂದೆ ಮಾರ್ತಾಂಡಪ್ಪ, ತಾಯಿ ಬಸಮ್ಮ ರಾಷ್ಟ್ರೀಯ ಚಳುವಳಿಯಲ್ಲಿ ಸೆರೆಮನೆ ವಾಸ ಅನುಭವಿಸಿದವರು. ಹೀಗಾಗಿ ಮಹದೇವಪ್ಪನಿಗೆ ದೇಶಭಕ್ತಿ ರಕ್ತಗತವಾಗಿಯೇ ಬಂದಿತೆನ್ನಬಹುದು.



ಪ್ರಾಥಮಿಕ ಶಿಕ್ಷಣ ಸ್ವಗ್ರಾಮ ಮೋಟೆಬೆನ್ನೂರಿನಲ್ಲೇ ಆಯಿತು. ಆಗ ಹಿರಿಯ ದೇಶಭಕ್ತರೊಬ್ಬರ ಭಾಷಣ ಕೇಳಿ ತನ್ನ ತಲೆ ಮೇಲಿನ ವಿದೇಶಿ ಟೊಪ್ಪಿಗೆ ತೆಗೆದು ನೆಲಕ್ಕೆಸೆದವನು ಈ ಮಹದೇವಪ್ಪ. ಇದು ಅವನ ಸ್ವಾತಂತ್ರ್ಯ ಸಮರದ ಮೊದಲ ಹೆಜ್ಜೆ.

ಹಂಸಬಾವಿ ಶಾಲೆ ಮತ್ತು ಪ್ರೇರಣೆ: ಮುಂದಿನ ವ್ಯಾಸಾಂಗಕ್ಕಾಗಿ ಶಿಕ್ಷಣಕ್ಕೆ ಹೆಸರಾಗಿದ್ದ ಹಂಸಬಾವಿಯ ಶಾಲೆಗೆ ದಾಖಲಾದ. ಅಲ್ಲಿ ಹಿರಿಯ ಸ್ವಾತಂತ್ರ್ಯ ಸೇನಾನಿಗಳಾದ ಕೆ. ಎಫ್. ಪಾಟೀಲ್ ಹಾಗೂ ಟಿ. ಆರ್. ನೆಶ್ವಿ ಅವರ ಶಿಷ್ಯತ್ವ ದೊರೆತದ್ದು ಒಂದು ಸುಯೋಗ. ಹಂಸಬಾವಿ ಸ್ಕೂಲಿನಲ್ಲಿ ಮಹದೇವಪ್ಪ ವಿದ್ಯಾರ್ಥಿ ಸಂಘಟನೆಯ ನೇತೃತ್ವ ವಹಿಸಿ **'ಸೈಮನ್ ತಿರುಗಿ ಹೋಗಿರಿ'** ಮೆರವಣಿಗೆಯನ್ನು ಯಶಸ್ವಿಗೊಳಿಸಿದ. ಸ್ಕೂಲಿನಲ್ಲಿ ಗಜಾನನೋತ್ಸವ ಕಾರ್ಯಕ್ರಮದಲ್ಲಿ **ದಿವಾಕರ ರಂಗರಾಯರ** ಭಾಷಣವು ವಿದ್ಯಾರ್ಥಿಗಳಲ್ಲಿ ನವಸ್ಫೂರ್ತಿಯನ್ನು ತುಂಬಿತು. ಅಲ್ಲಿ ನೆರೆದಿದ್ದವರಲ್ಲಿ ಹಿರೇಕೆರೂರಿನ ಸಿದ್ಧಲಿಂಗಯ್ಯ ಸ್ವಾಮಿ ಎಂಬ ತರುಣ ಕಾವಿಯ ಪರದೇಶಿ ಬಟ್ಟೆಯನ್ನು ಸಭೆಯಲ್ಲಿಯೇ ಸುಟ್ಟು ಖಾದಿಧಾರಿಗಳಾದರು. ಈ ಹಿಂದೆಯೇ ಮಹದೇವಪ್ಪ ಖಾದಿಧಾರಿಯಾದ್ದು ಈಗ ಅಪ್ಪಟ ಖಾದಿಯೊಂದಿಗೆ ಅಪ್ಪಟ್ಟ ದೇಶಭಕ್ತನಾದನು.

ಮಹದೇವಪ್ಪ ಮೈಲಾರ ಗಾಂಧೀಜಿಯ **'ಯಂಗ್ ಇಂಡಿಯಾ'** ಪತ್ರಿಕೆಯನ್ನು ಓದುತ್ತಾ ಸತ್ಯಾಗ್ರಹದ ಬಗ್ಗೆ ಸಾಕಷ್ಟು ತಿಳಿದಿದ್ದ 'ಯಂಗ್ ಇಂಡಿಯಾ'ದಲ್ಲಿ ಖಾದಿ ಬಗ್ಗೆ ಗಾಂಧೀಜಿ ಬರೆದ ಹೊಟ್ಟೆಗಿಲ್ಲದಿದ್ದವರಿಗೆ ಖಾದಿಯೇ ಜೀವನ ಮಾರ್ಗವನ್ನು ಕಲ್ಪಿಸುತ್ತದೆ, ಕೆಲಸವಿಲ್ಲದೆ ತಮ್ಮ ತಮ್ಮಲ್ಲಿಯೇ ಜಗಳ ಮಾಡಿಕೊಳ್ಳುತ್ತಿದ್ದ ಜನರನ್ನು ಉದ್ಯೋಗಶೀಲರನ್ನಾಗಿ ಮಾಡುತ್ತದೆ. ಅಂತೆಯೇ ಖಾದಿಗೊಂದು ವ್ಯಕ್ತಿತ್ವವೂ ಇದೆ. ಎಲ್ಲ ಕಾಲದಲ್ಲಿಯೂ ನಾವು ಖಾದಿಯನ್ನು ಉಪಯೋಗಿಸಬೇಕು(ಯಂಗ್ ಇಂಡಿಯಾ ಏಪ್ರಿಲ್ ೨೮, ೧೯೨೦). ಮಹದೇವಪ್ಪ ಗಾಂಧೀಜಿ ಆಗಿನ ಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರಿಂದ ಶಿಕ್ಷಣಕ್ಕೆ ಶರಣು ಹೊಡೆದನು. ಮನೆಗೂ ಬಾರದೆ, ಖಾದಿ ಪ್ರಚಾರ ಮತ್ತು ಮಾರಾಟದ ಕಾರ್ಯಕ್ಕೆ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡನು.

ಮಹದೇವಪ್ಪನ ಈ ಕಾರ್ಯ ಮನೆಯವರಿಗೆ ಸರಿಕಾಣಲಿಲ್ಲ. ಮಹದೇವಪ್ಪ ಮನೆಗೆ ಬಂದಾಗ ದೊಡ್ಡಪ್ಪ ಗುಡ್ಡಪ್ಪನವರು ಮಹದೇವಪ್ಪನನ್ನು ಕರೆದುಕೊಂಡು ವ್ಯಾಪಾರ ಕಲಿಸಬೇಕೆಂದು ದಾವಣಗೆರೆಗೆ ಕರೆದೊಯ್ದು ವರ್ತಕರೊಬ್ಬರ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಸಿದರು. ಆದರೆ ತಾಯ್ನಾಡಿಗಾಗಿ ನಡುಕಟ್ಟಿ ನಿಂತಿದ್ದ ಮಹದೇವಪ್ಪ ಯಾರಿಗೂ ತಿಳಿಸದೆ ದಾವಣಗೆರೆಯಿಂದ ಧಾರವಾಡಕ್ಕೆ ಹೋದನು(೧೯೨೯). ಅಲ್ಲಿಯ **ಭಾರತೀಯ ತರುಣ ಸಂಘದ** ಸದಸ್ಯರು ಮಹದೇವಪ್ಪನನ್ನು ಆದರದಿಂದ ಸಂಘದಲ್ಲಿ ಸೇರ್ಪಡೆ ಮಾಡಿಕೊಂಡರು. ಅಲ್ಲಿ ಎನ್. ಬಿ. ಹಿರೇಮಠ, ಜಿ. ವಿ. ಹಳ್ಳಿಕೇರಿ, ವ್ಹಿ. ಟಿ. ಮಾಗಡಿ ಮುಂತಾದ ೨೦ಕ್ಕೂ ಹೆಚ್ಚು ಕಾರ್ಯಕರ್ತರಿದ್ದರು. ಅವರನ್ನು ಸೇರಿದ ಮಹದೇವಪ್ಪನಿಗೆ ಬುರ್ಲಿ ಬಿಂದು ಮಾಧವರಾವ್, ದ. ಪ. ಕರಮರಕರ್, ರಂಗನಾಥ ದಿವಾಕರ ಮುಂತಾದ ನಾಯಕರ ಆತ್ಮೀಯ ಒಡನಾಟ ಸಿಕ್ಕಿತ್ತು. ಆದರೂ ಮಹದೇವಪ್ಪ ಮನೆಯವರ ಕಣ್ಣು ತಪ್ಪಿಸಲೆಂದು ಕೌಜಲಗಿ ಹನುಮಂತರಾಯರ ನೇತೃತ್ವದ ಬಾಗಲಕೋಟೆಯ ಬಳಿಯಿರುವ **ಕಲಾದಗಿ ಕೇಂದ್ರ**ದಲ್ಲಿ ನೇಯ್ಗೆಯ ಕಲೆಯನ್ನು ಕಲಿಯಲು ತೆರಳಿದನು. ಹೀಗಿರುವಾಗ ಮಹದೇವಪ್ಪನ ಹೋರಾಟದಲ್ಲಿ ಮಹತ್ತರವಾದ ತಿರುವಿಗೆ ಕಾರಣವಾದ ಘಟನೆಯನ್ನು ಮನು ಬಳಿಗಾರ್ ಉಲ್ಲೇಖಿಸಿರುತ್ತಾರೆ.

'೧೯೩೦ರ ಉಪ್ಪಿನ ಸತ್ಯಾಗ್ರಹಕ್ಕೆ ಭಾಗವಹಿಸಲು ಕರ್ನಾಟಕದಿಂದ ಒಬ್ಬ ವೀರನನ್ನು ಆಯ್ಕೆಮಾಡಿ ಕಳುಹಿಸಿ' ಎಂಬ ಸಾಬರಮತಿ ಆಶ್ರಮದಲ್ಲಿ ಗಾಂಧೀ ನೇತೃತ್ವದಲ್ಲಿಯ ಕಾಂಗ್ರೆಸ್ ವರಿಷ್ಠ ಮಂಡಳಿಯಿಂದ ರಂಗನಾಥ ದಿವಾಕರಿಗೆ ಸಂದೇಶ ಬಂದಿತು. ಅಂಥ ಧೈರ್ಯವುಳ್ಳ ಮತ್ತು ಅರ್ಹವ್ಯಕ್ತಿ ಮೈಲಾರ ಮಹದೇವಪ್ಪ ಎಂದು ಕಾರ್ಯಕರ್ತರು ಹೆಸರನ್ನು ಸೂಚಿಸಿದಾಗ, ದಿವಾಕರರು ಕಾರ್ಯಕರ್ತರ ಆಸೆಯಂತೆ ಕರ್ನಾಟಕದ ಏಕೈಕ ಪ್ರತಿನಿಧಿಯನ್ನಾಗಿ ಸಾಬರಮತಿ ಆಶ್ರಮಕ್ಕೆ ಮಹದೇವಪ್ಪನನ್ನು ಕಳುಹಿಸಿಕೊಟ್ಟರು. ಗಾಂಧೀಜಿ ಆಯ್ಕೆ ಮಾಡಿದ ೭೮ ಜನ ದಂಡಿಯಾತ್ರೆ ವೀರ ಸತ್ಯಾಗ್ರಹಿಗಳಲ್ಲಿ ಎಲ್ಲರಿಗಿಂತ ಚಿಕ್ಕವರಾಗಿ ಮಹದೇವಪ್ಪ ಕರ್ನಾಟಕದ ಕೀರ್ತಿಗೆ ಕಳಶಪ್ರಾಯರಾದರು. ಈ ಸತ್ಯಾಗ್ರಹದಲ್ಲಿ ಮಹದೇವಪ್ಪನಿಗೆ ಆರು ತಿಂಗಳ ಶಿಕ್ಷೆಯಾಗಿ ಸೆರೆಮನೆ ಸೇರಿದ ಮೇಲೆ ಮನೆಯವರಿಗೆ ಪತ್ರ ಬರೆದು ವಿಷಯ ತಿಳಿಸುವವರೆಗೂ ಮನೆಯವರಿಗೆ ಮಗ ಎಲ್ಲಿದ್ದಾನೆ ಎಂಬ ಸುಳಿವು ತಿಳಿದಿರಲಿಲ್ಲ.



**ಹೊಸರಿತ್ತಿ ಹಾಗೂ ಕೊರಡೂರು ಗ್ರಾಮ ಸೇವಾಶ್ರಮ ೧೯೩೭:** ಮಹದೇವಪ್ಪ ಗಾಂಧೀಜಿಯೊಂದಿಗೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾದ ವಿಷಯ ತಿಳಿದು ಮನೆಯವರು ತುಂಬ ಸಂತೋಷಪಟ್ಟರು. ಗಾಂಧಿ–ಇರ್ವಿನ್ ಒಪ್ಪಂದದ ನಂತರದಲ್ಲಿ ಗಾಂಧೀಜಿ ಎರಡನೆಯ ದುಂಡು ಮೇಜಿನ ಪರಿಷತ್ತಿಗೆ ಲಂಡನ್‌ಗೆ ಹೊರಟ ಸಮಯದಲ್ಲಿ 'ನೀನು ಕರ್ನಾಟಕದಲ್ಲಿದ್ದು ವಿಧಾಯಕ ಕಾರ್ಯವನ್ನು ಕೈಗೊಳ್ಳಬೇಕು ಎಂದು ಮಹದೇವಪ್ಪನಿಗೆ ಗಾಂಧೀಜಿ ಆದೇಶಿಸಿದ್ದರು'. ಅವರ ಆದೇಶದಂತೆ ಹೊಸರಿತ್ತಿಯ ಆಶ್ರಮದಲ್ಲಿ ಸೇರಿ ವಿಧಾಯಕ ಕಾರ್ಯದಲ್ಲಿ ತೊಡಗಿದನು. ಕೆಲ ತಿಂಗಳ ತರುವಾಯ ಹೊಸರಿತ್ತಿ ಬಳಿ ಕೊರಡೂರಲ್ಲಿ ಕಲಕೋಟಿ ಬಂಧುಗಳ ಆಶೆಯಂತೆ ಆಶ್ರಮವನ್ನು ಸ್ಥಾಪಿಸಿ, ತನ್ನ ಪತ್ನಿಯನ್ನು ಕರೆಸಿಕೊಂಡು ವಿಧಾಯಕ ಕಾರ್ಯ ಆರಂಭಿಸಿದನು. ಆಶ್ರಮದ ಮೂಲಕ ಸುತ್ತಲಿನ ಗ್ರಾಮಗಳ ಜನತೆಗೆ ಚಳುವಳಿಯೊಂದಿಗೆ ಸಾಮಾಜಿಕ ಕಾರ್ಯಗಳಿಗೂ ಆದ್ಯತೆ ನೀಡಿರುವುದು ವಿಶೇಷ.

ಮಹದೇವಪ್ಪ ಮತ್ತು ಸಿದ್ದಮ್ಮ ದಂಪತಿ ಆಶ್ರಮದ ಭಾರ ಹೊತ್ತು ಖಾದಿ, ಸಾಕ್ಷರತೆ, ವ್ಯಾಯಾಮ, ಗ್ರಾಮ ಕೈಗಾರಿಕೆ, ಔಷಧೋಪಚಾರ ಮತ್ತು ಪ್ರಚಾರ – ಹೀಗೆ ಆರು ಧ್ಯೇಯಗಳನ್ನಿಟ್ಟುಕೊಂಡು ಕಾರ್ಯ ಮಾಡುತ್ತಿದರು. ಮಹದೇವಪ್ಪ ಆಶ್ರಮಕ್ಕೆ ಸೇರಿದ ಸ್ವಲ್ಪ ಜಮೀನಿನಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದ. ಸ್ವತಃ ತಾನೇ ನೇಗಿಲು ಹೊಡೆಯುತ್ತಿದ್ದ. ದಿನಕಳೆದಂತೆ ತನ್ನ ಕಾರ್ಯಚಟುವಟಿಕೆಗಳಿಂದ ಆ ಭಾಗದ ಜನ ಮಹೇವಪ್ಪನ ಬಗ್ಗೆ ಹಾಡು ಕಟ್ಟಿ ಹಾಡತೊಡಗಿದರು. ಇದೇ ಮುಂದೆ ಭೂಗತ ಕಾರ್ಯಕ್ಕೆ ಅನೂಕೂಲವಾದ ವಾತಾವರಣ ನಿರ್ಮಾಣವಾಯಿತು.

**ಮಹದೇವಪ್ಪನವರಿಗೆ ನೋಟಿಸು:** ರಾಷ್ಟ್ರೀಯ ರಾಜಕಾರಣದಲ್ಲಿ ಗಾಂಧೀಜಿ ಹಾಗೂ ಸುಭಾಸ್‌ಚಂದ್ರ ಭೋಸ್‌ರ ಮಧ್ಯ ಭಿನ್ನಾಭಿಪ್ರಾಯ ಬಂದು ಸುಭಾಸ್‌ರು ಕಾಂಗ್ರೆಸ್ ತ್ಯಜಿಸಿ **ಫಾರ್ವರ್ಡ್ ಬ್ಲಾಕ್ ಪಕ್ಷ** ಕಟ್ಟಿದ್ದರು. ಪಕ್ಷದ ಸಂಘಟನೆಗಾಗಿ ಕರ್ನಾಟಕ ಪ್ರವಾಸದಲ್ಲಿ ಹಾವೇರಿಗೆ ಬಂದಾಗ, ಹೊಸಮನಿ ಸಿದ್ದಪ್ಪನ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಹದೇವಪ್ಪ ಮೈಲಾರ ಭಾಗಿಯಾಗಿದ್ದಕ್ಕೆ 'ಕಾಂಗ್ರೆಸ್ಸಿನಿಂದ ಸಿಡಿದು ನಿಂತಿರುವ ಸುಭಾಸ್‌ಚಂದ್ರ ಭೋಸರಿಗೆ ರಾಷ್ಟ್ರವ್ಯಾಪಿ ಕಾಂಗ್ರೆಸ್ಸಿಗರು ಯಾವುದೇ ರೀತಿಯಿಂದ ಸಹಕರಿಸಬಾರದೆಂದು ಕರಪತ್ರ

ಹೊರಡಿಸಿದರೂ, ನೀವು ಅವರನ್ನು ಸನ್ಮಾನಿಸುವ ಕಾರ್ಯಕ್ರಮಕ್ಕೆ ಹೋಗಿದ್ದೀರಿ. ಇದಕ್ಕೋಸ್ಕರ ನಿಮ್ಮ ಮೇಲೆ ಶಿಸ್ತಿನ ಕ್ರಮವನ್ನೇಕೆ ಕೈಕೊಳ್ಳಬಾರದು? ಎಂದು ನೋಟೀಸ್ ನೀಡಿದರು. ಇದಕ್ಕೆ ಮಹದೇವಪ್ಪ "ಸ್ವಾತಂತ್ರ್ಯದ ಅಪ್ರತಿಮ ಹೋರಾಟಗಾರರನ್ನು, ವೀರಾಗ್ರಣಿ ದೇಶ ಭಕ್ತರನ್ನು ಗೌರವಿಸಲು, ಸನ್ಮಾನಿಸಲು ಪಕ್ಷದ ಅನುಮತಿ ಪಡೆಯಬೇಕಾದ ಅವಶ್ಯಕತೆ ಇಲ್ಲ. ಊರಿಗೆ ಬಂದ ಸ್ವಾತಂತ್ರ್ಯ ವೀರರನ್ನು ಸನ್ಮಾನಿಸುವುದು ಪಕ್ಷದ ಉಲ್ಲಂಘನೆ ಆಗಲಾರದು. ಈ ಭಾವನೆಯನ್ನು ಕಾಂಗ್ರೆಸ್ಸು ಕಳೆದುಕೊಳ್ಳಬಾರದು. ಸಂಕುಚಿತ ಭಾವನೆ ಇರಿಸಿಕೊಂಡರೆ ಕಾಂಗ್ರೆಸ್ಸು ದುರ್ಬಲಗೊಳ್ಳುತ್ತದೆ" ಎಂದು ಮಹದೇವಪ್ಪ ತಮ್ಮ ಎದೆಗಾರಿಕೆ ಹಾಗೂ ರಾಷ್ಟ್ರಪ್ರೇಮವನ್ನು ಕಾಂಗ್ರೆಸ್ಸಿಗೆ ತೋರಿಸಿಕೊಟ್ಟರು. ಕಾಂಗ್ರೆಸ್ ಕೂಡ ಈ ವಿಷಯವನ್ನು ಅಷ್ಟಕ್ಕೆ ಬಿಟ್ಟ ವಿವರವನ್ನು ಮತ್ತು ಮಹದೇವಪ್ಪನಿಗೆ ಇಷ್ಟವಿಲ್ಲದಿದ್ದರೂ ತಾಲೂಕು ಕಾಂಗ್ರೆಸ್ ನಾಯಕರ ಒತ್ತಾಯಕ್ಕೆ ೧೯೪೦ರಲ್ಲಿ ಹಾವೇರಿ ತಾಲೂಕು ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ನೇಮಿಸಿದ ಬಗ್ಗೆ ಮಹದೇವಪ್ಪನ ಸ್ನೇಹಿತ ಮತ್ತು ಚಳುವಳಿಗಾರ ದೇವೇಂದ್ರಪ್ಪ ವಿಭೂತಿ ಹೇಳಿಕೆಯಿಂದ ತಿಳಿದುಬರುತ್ತದೆ. ಇಲ್ಲಿ ಮಹದೇವಪ್ಪ ಪಕ್ಷಕ್ಕಿಂತ ದೇಶ, ವ್ಯಕ್ತಿಯ ವ್ಯಕ್ತಿತ್ವಕ್ಕೆ ಕೊಟ್ಟ ಆದ್ಯತೆ ಕಾಣುತ್ತದೆ.

೧೯೪೨ರ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಘೋಷಣೆ–ಇದು ಭಾರತೀಯ ಸ್ವಾತಂತ್ರ್ಯ ಚಳುವಳಿಯ ಮಹತ್ತರವಾದ ಮತ್ತು ಕೊನೆಯ ಪರಿಣಾಮಕಾರಿ ಅಸ್ತ್ರ. ಹಾಗಾಗಿ ಕರ್ನಾಟಕ ಪ್ರಾಂತೀಯ ಕಮಿಟಿಯು ಅಧಿಕೃತವಾಗಿ ಕಾರ್ಯಕ್ರಮಗಳನ್ನು ಸಿದ್ಧಪಡಿಸಿತು. ತಾರು, ದೂರವಾಣಿ ತಂತಿಗಳನ್ನು ಕತ್ತರಿಸುವುದು ಮತ್ತು ಕಂಬಗಳನ್ನು ಉರುಳಿಸುವುದು, ಸೇಂದಿ, ಸರಾಯಿ ಅಂಗಡಿಗಳನ್ನು ಧ್ವಂಸಗೊಳಿಸುವುದು, ಪೊಲೀಸರ ಸಮವಸ್ತ್ರ ಹಾಗೂ ಬಂದೂಕುಗಳನ್ನು ಕಸಿದುಕೊಳ್ಳುವುದು ಇವೇ ಮೊದಲಾದ ಕಾರ್ಯಗಳಾಗಿದ್ದವು. ಒಟ್ಟಿನಲ್ಲಿ ಸರಕಾರಿ ಯಂತ್ರ ಕುಸಿಯುವಂತೆ ಏನೆಲ್ಲ ಮಾಡಲು ಸಾಧ್ಯವೋ ಅದನ್ನು ಮಾಡಬೇಕಿತ್ತು. ಆದರೆ ಈ ಕಾರ್ಯಕ್ರಮಗಳನ್ನು ಮಾಡುವಾಗ ಯಾರ ಜೀವಕ್ಕೂ, ಖಾಸಗಿ ಆಸ್ತಿಗೂ ಹಾನಿ ಮಾಡಬಾರದು, ಆಯುಧಗಳನ್ನು ಬಳಸಬಾರದು, ತಮ್ಮ ಪ್ರಾಣ ಕೊಡಬಹುದೇ ವಿನಃ ಇತರರನ್ನು ಹಿಂಸಿಸಬಾರದು ಎಂದು ಪ್ರಾಂತಿಯ ಕಾಂಗ್ರೆಸ್ ತನ್ನ ಕಾರ್ಯ ಪಟ್ಟಿಯನ್ನು ಬಿಡುಗಡೆ ಮಾಡಿತು.

ಅಹಿಂಸಾ ಮಹಾಯುದ್ಧಕ್ಕೆ ಸಜ್ಜಾದ ಮಹದೇವಪ್ಪ ಗಾಂಧೀಜಿಯ 'ಮಾಡು ಇಲ್ಲವೇ ಮಡಿ' ಆದೇಶವನ್ನು ಪಾಲಿಸಲು ಮಹದೇವಪ್ಪ ಮೈಲಾರ



ನಿರ್ಧರಿಸಿದರು. ವಿಳಂಬ ಮಾಡದೇ ಆಗಸ್ಟ್ ೩೦ ರಂದು ಬುರ್ಲಿ ಬಿಂದುಮಾಧವರನ್ನು ಕಂಡು ಚಳುವಳಿಯ ರೂಪುರೇಷೆ ಕುರಿತು ಚರ್ಚೆ ಮಾಡಿದರು. ಆಶ್ರಮದ ಉಸ್ತುವಾರಿಯನ್ನು ಪತ್ನಿ ಸಿದ್ದಮ್ಮಳಿಗೆ ವಹಿಸಿ ಮಹದೇವಪ್ಪ ಭೂಗತನಾಗಿ ಚಳುವಳಿಗೆ ಧುಮುಕಲು ನಿರ್ಧರಿಸಿದರು.

ಹಾವೇರಿ ಜಿಲ್ಲೆಯಲ್ಲಿ ಗಾಂಧೀಜಿಯ **'ಮಾಡು ಇಲ್ಲವೇ ಮಡಿ'** ಸಂದೇಶವನ್ನು ಪಾಲಿಸಿದ ಹಾಗೂ ಆಂಗ್ಲ ಸರಕಾರದ ನಿದ್ದೆಗೆಡಿಸಿದ್ದ ಮೈಲಾರ ಮಹದೇವಪ್ಪ ಹಾಗೂ ಅವರ ತಂಡ ಮಾಡಿದ ವಿವಿಧ ಕಾರ್ಯಗಳು ಮಹತ್ವ ಪಡೆದಿವೆ. ಮಹದೇವಪ್ಪ ಭೂಗತನಾಗಿದ್ದುಕೊಂಡು ಹಾವೇರಿಯ ಸುತ್ತಮುತ್ತಲಿನ ಭಾಗಗಳಲ್ಲಿ ಯಶಸ್ವಿಯಾಗಿ ನಡೆಯುವ ಚಳುವಳಿಗೆ ನಾಯಕತ್ವವಹಿಸಿ ಹೊಸರಿತ್ತಿ ಹಾಗೂ ಕೊರಡೂರನಲ್ಲಿಯ ಆಶ್ರಮಗಳ ಮೂಲಕ ಕೊಗನೂರು, ಶಿಗ್ಗಿ, ಹಾವೇರಿ, ಕಲ್ಲೇದೇವರು, ನೆಗಳೂರು, ಜಂಗಮನಕೊಪ್ಪ, ಬೆಳವಡಿ, ಅಗಡಿ, ಹೀಗೆ ಹತ್ತಾರು ಊರುಗಳಿಂದ ಸುಮಾರು ೫೦ ರಿಂದ ೬೦ ಯುವಕರ ತಂಡ ಕಟ್ಟಿಕೊಂಡು, ಅದರಲ್ಲಿ ೨೫ರಿಂದ ೩೦ ಜನರೊಂದಿಗೆ ಭೂಗತನಾಗಿ ಕಾರ್ಯ ಮಾಡುತ್ತಿದ್ದನು. ಈ ತಂಡ ಹಳ್ಳಿ ಹಳ್ಳಿಗಳಿಗೆ ಹೋಗಿ ಬ್ರಿಟಿಷರ ದಬ್ಬಾಳಿಕೆಯ ಬಗ್ಗೆ ಜನತೆಗೆ ತಿಳಿಸಿ, ಸರಕಾರಿ ಕಟ್ಟಡ, ದಫ್ತರಗಳನ್ನು ದಹಿಸುತ್ತಿತ್ತು. ಮಹದೇವಪ್ಪ ಮೈಲಾರರ ತಂಡ ಹೊಸರಿತ್ತಿ, ಕೊರಡೂರು ಆಶ್ರಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಮ್ಮ ವಿದಾಯಕ ಕಾರ್ಯಗಳನ್ನು ಮಾಡಿದ್ದಾರೆ.

ಇವರ ಮುಖ್ಯಕಾರ್ಯಗಳೆಂದರೆ ರೇಲ್ವೆ ನಿಲ್ದಾಣ ಹಾಗೂ ಸ್ಟೇಷನ್ ರಿಕಾರ್ಡ್‌ಗಳನ್ನು ಸುಡುವುದು, ತಾರು ತಂತಿಗಳನ್ನು ಕತ್ತರಿಸುವುದು, ತಾರು ಕಂಬಗಳನ್ನು ಕೀಳುವುದು, ಟಪಾಲು ದೋಚುವುದು, ರೇಲ್ವೆ ಹಳಿಗಳನ್ನು ಕೀಳುವುದು, ಪೊಲೀಸ್ ಚೌಕಿ, ಹಳ್ಳಿಗಳ ಚಾವಡಿ ಸುಡುವುದು, ದಫ್ತರಗಳನ್ನು ಸುಡುವುದು, ಪೊಲೀಸರ ಆಯುಧಗಳನ್ನು ಕಸಿದುಕೊಳ್ಳುವುದು, ವಸೂಲಿ ಮಾಡಿದ ಕಂದಾಯವನ್ನು ದೋಚುವುದು, ರೈತರಿಗೆ ಕಂದಾಯವನ್ನು ಸರಕಾರಕ್ಕೆ ಕೊಡಬೇಡಿರೆಂದು ಮನವರಿಕೆ ಮಾಡಿಕೊಡುವುದು. ಹೀಗಾಗಿಯೇ ಗ್ರಾಮಗಳಲ್ಲಿಯ ಜನತೆಯ ಬೆಂಬಲದಿಂದಾಗಿ ಮಹದೇವಪ್ಪ ತಂಡ ಸುಲಭವಾಗಿ ಪೊಲೀಸರಿಗೆ ಸಿಗುತ್ತಿರಲಿಲ್ಲ ಎಂಬುದನ್ನು ತಂಡದ ಸದಸ್ಯರಾದ ದೇವೇಂದ್ರಪ್ಪ ವಿಭೂತಿ ಹಾಗೂ ಪರಮಣ್ಣ ಹರಕಂಗಿ ತಿಳಿಸುತ್ತಾರೆ.

## ಮಹದೇವಪ್ಪನ ನಾಯಕತ್ವದಲ್ಲಿ ಮಾಡಿದ ಪ್ರಮುಖ ಕಾರ್ಯಗಳು

* ಸವಣೂರು ರೇಲ್ವೆ ಸ್ಟೇಷನ್‌ನಿಂದ ಪ್ರತಿದಿನ ಟಪಾಲು ಸವಣೂರಿಗೆ ಹೋಗುತ್ತಿತ್ತು. ಅದನ್ನು ದೋಚಲು ಮಹದೇವಪ್ಪ ನಿರ್ಧರಿಸಿ, ಸವಣೂರಿಂದ ಟಪಾಲು ತರುವ ಮೋಟಾರ್‌ನಲ್ಲಿ ಸ್ವತಃ ತಾನೇ ಕುಳಿತುಕೊಂಡು ಮಾರ್ಗಮಧ್ಯದಲ್ಲಿ ತನ್ನ ತಂಡದವರು ಮೊದಲು ರೂಪಿಸಿದ್ದ ಯೋಜನೆಯಂತೆ ಯಾವ ಪ್ರಯಾಣಿಕರಿಗೂ ತೊಂದರೆ ಕೊಡದೆ ಟಪಾಲನ್ನು ಕಿತ್ತುಕೊಂಡು ತನ್ನ ತಂಡದೊಂದಿಗೆ ಪರಾರಿಯಾದರು. ಈ ಘಟನೆ ನಡೆದದ್ದು, ನವಾಬರ ಆಳ್ವಿಕೆಯಿರುವ ಸವಣೂರಲ್ಲಿ, ಆ ಪ್ರದೇಶದಲ್ಲಿ ಚಳುವಳಿ ಮಾತು ಕೇಳಿಬರುವಂತಿಲ್ಲ. ಹಾಗೇನಾದರೂ ಆದಲ್ಲಿ ನವಾಬರರಿಂದ ಉಗ್ರಶಿಕ್ಷೆಗೆ ಕಾದಿರುತ್ತಿತ್ತು. ಆ ಭಾಗದಲ್ಲಿ ಕಾರ್ಯಮಾಡುವುದು ಚಳುವಳಿಗಾರರಿಗೆ ದೊಡ್ಡ ಸವಾಲಾಗಿತ್ತು. ಅಂಥ ಪ್ರದೇಶದಲ್ಲಿ ಮೈಲಾರ ಮಹದೇವಪ್ಪನ ತಂಡ ಟಪಾಲು ಲೂಟಿ ಕಾರ್ಯ ಮಾಡಿ ಆ ಭಾಗದ ಜನತೆಗೆ ಪ್ರೇರಣೆಯಾಗುವಂಥ ಕಾರ್ಯಮಾಡಿದ್ದು ಒಂದೆಡೆಯಾದರೆ, ಮತ್ತೊಂದೆಡೆ ಬರೀ ಇಂಗ್ಲಿಷರೊಂದಿಗೆ ಅಷ್ಟೇ ಅಲ್ಲ ನವಾಬರನ್ನು ಎದುರು ಹಾಕಿಕೊಂಡು ಮಾಡಿದ ಕಾರ್ಯ ಆಶ್ಚರ್ಯವನ್ನುಂಟುಮಾಡಿದ ಬಗ್ಗೆ ತಂಡದ ಸದಸ್ಯರಾದ ಪರಮಣ್ಣ ಹರಕಂಗಿ, ದೇವೇಂದ್ರಪ್ಪ ವಿಭೂತಿ ಹಾಗೂ ಹಾಲಯ್ಯ ಕುಲಕರ್ಣಿ ಇವರಿಂದ ತಿಳಿದುಬರುತ್ತದೆ.

* ಗದಗ–ಶಿರಹಟ್ಟಿ ಟಪಾಲು ಬಸ್ಸನ್ನು ಕಲ್ಲುಮುಳಗುಂದದ ಬಳಿ ನಿಲ್ಲಿಸಿ ಟಪಾಲು ದೋಚಲಾಯಿತು. ಅಲ್ಲದೆ, ಹರಿಹರ–ಹರಪನಹಳ್ಳಿ ಟಪಾಲು ಬಸ್ಸಿನ ಟಪಾಲನ್ನು ದೋಚಲು ಆ ಭಾಗ ಪರಿಚಯವಿಲ್ಲದಿದ್ದರೂ ಆ ಕಾರ್ಯಕ್ಕೆ ನಿರ್ಧರಿಸಿದರು. ತಂಡದ ಎರಡು ಜನರನ್ನು ಹರಿಹರಕ್ಕೆ ಕಳುಹಿಸಿ ಟಪಾಲು ಬಸ್ಸಿನಲ್ಲಿ ಬರಲು ಹೇಳಿ ಹರಪನಹಳ್ಳಿ ರಸ್ತೆಯಲ್ಲಿ ಅಡ್ಡಲಾಗಿ ಮರದ ತುಂಡುಗಳನ್ನು ಹಾಕಿ ಸರಿಯಾದ ಸಮಯಕ್ಕೆ ಬಸ್ಸು ಬಂದಾಗ ಬಸ್ಸಿನಲ್ಲಿ ಇದ್ದ ತಂಡದ ಸದಸ್ಯ ದೇವೇಂದ್ರಪ್ಪ ವಿಭೂತಿ ಡ್ರೈವರ ಕಣ್ಣಿಗೆ ಕಾರದ ಪುಡಿ ಎರಚಿ ಬಸ್ಸು ನಿಲ್ಲುವಂತೆ ಮಾಡಿದರು. ಬಸ್ಸು ನಿಲ್ಲುವುದಿಲ್ಲವೆಂದು ತಂಡದ ಇನ್ನೊಬ್ಬ ಸದಸ್ಯ ಗೋಣೆಪ್ಪ ಕಮತದ ಹೋಗುತ್ತಿರುವ ಬಸ್ಸಿನಿಂದ ಜಿಗಿದು ಮೂರ್ಛೆ ಹೋದ, ಆದರೂ ಮಹದೇವಪ್ಪ ಟಪಾಲ್ ಬ್ಯಾಗನ್ನು ತೆಗೆದುಕೊಂಡು



ಮೂರ್ಛೆ ಹೋದ ವ್ಯಕ್ತಿಯನ್ನು ಹೊತ್ತುಕೊಂಡು ಅಲ್ಲಿಯೆ ಇದ್ದ ಜೋಳದ ಹೊಲಕ್ಕೆ ಹೋಗಿ ಸುಧಾರಿಸಿಕೊಳ್ಳುವ ವೇಳೆಗೆ ಪೊಲೀಸರು ಬಂದಾಗ ಅವರಿಂದ ತಪ್ಪಿಸಿಕೊಳ್ಳಲು ಮಹದೇವಪ್ಪ ತನ್ನ ಇತರ ಸದಸ್ಯರಿಗೆ ನಿಮ್ಮಲ್ಲಿ ಕೆಲವರು ಪೊಲೀಸರಿಗೆ ಕಾಣುವಂತೆ ಓಡಿ ಎನ್ನಲು ಕೆಲ ಸದಸ್ಯರು ಓಡಹತ್ತಿದರು. ಅವರನ್ನು ಕಂಡ ಪೊಲೀಸರು ಅವರನ್ನು ಹಿಂಬಾಲಿಸಿದರು. ಇತ್ತ ಮಹದೇವಪ್ಪ ಮೂರ್ಛೆಹೋದ ಸದಸ್ಯನನ್ನು ಹೊತ್ತುಕೊಂಡು ಅಲ್ಲಿಂದ ಪರಾರಿಯಾದರು. ಆದರೂ ಆ ಭಾಗ ಅಪರಿಚಿತ ಸ್ಥಳವಾಗಿದ್ದರಿಂದ ಮಹದೇವಪ್ಪನ ತಮ್ಮ ಲಿಂಗಪ್ಪ ಹಾಗೂ ದೇವೇಂದ್ರಪ್ಪ ವಿಭೂತಿ ಪೊಲೀಸರಿಗೆ ಸಿಕ್ಕು ಜೈಲು ಶಿಕ್ಷೆ ಅನುಭವಿಸಿದರು. ಈ ಘಟನೆ ಅಂದಿನ ಚಳುವಳಿಗಾರರಿಗೆ ಗಡಿ ಭಾಗಗಳ ಹಂಗು ಇರಲಿಲ್ಲವೆಂಬುದಕ್ಕೆ ಸಾಕ್ಷಿ. ಲಿಂಗಣ್ಣ ಮೈಲಾರ ಮತ್ತು ದೇವೇಂದ್ರಪ್ಪ ವಿಭೂತಿ ಪೊಲೀಸರಿಗೆ ಸಿಗಲು ಕಡತಿ(ಗ್ರಾಮ)ಯ ಊರ ಗೌಡ ಕಾರಣವಾಗಿದ್ದು ಈ ಘಟನೆ ಬಗ್ಗೆ ದೇವೇಂದ್ರಪ್ಪ ವಿಭೂತಿ ತಮ್ಮ ಕಾರ್ಯದ ಬಗ್ಗೆ ಸಂದರ್ಶನದಲ್ಲಿ ವಿವರಿಸಿರುತ್ತಾರೆ.

ಹರಿಹರ–ಹರಪನಹಳ್ಳಿ ಟಪಾಲು ಬಸ್ಸಿನ ಘಟನೆಯ ಬಗ್ಗೆ ಬಳ್ಳಾರಿ ಜಿಲ್ಲೆಯ ಚಳುವಳಿಗಾರರ ಮೇಲೆ ಹಾವೇರಿ ಭಾಗದ ಚಳುವಳಿಗಾರರು ಪ್ರಭಾವ ಬೀರಿದ್ದರು ಎಂಬುದನ್ನು ಸ್ಪಷ್ಟಪಡಿಸುವಂತೆ ಮತ್ತೊಂದು ಆಧಾರವೆಂದರೆ ಬಿ. ಶೇಷಾದ್ರಿ ಮತ್ತು ಟಿ. ಆರ್. ಚಂದ್ರಶೇಖರ(ಸಂ) **'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ'** ಎಂಬ ಕೃತಿಯಲ್ಲಿ ಉಲ್ಲೇಖವಾಗಿದೆ. ಧಾರವಾಡ ಜಿಲ್ಲೆಯ ಚಳುವಳಿಗಾರರು ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯ ಸಮಯದಲ್ಲಿ ನವೆಂಬರ್ ೧, ೧೯೪೨ರಂದು ಹರಿಹರದಿಂದ ಹೊಸಪೇಟೆಗೆ ಬರುತ್ತಿದ್ದ ಟಪಾಲು ಬಸ್ಸನ್ನು ಹರಪನಹಳ್ಳಿಯಿಂದ ೬ ಮೈಲಿ ದೂರದಲ್ಲಿ ೧೫–೨೦ ಜನರ ತಂಡವು ತಡೆದು ನಿಲ್ಲಿಸಿ ಬಸ್ಸಿನಲ್ಲಿದ್ದ ಟಪಾಲು ಪೆಟ್ಟಿಗೆಯನ್ನು ತೆಗೆದುಕೊಂಡು ಹೋಯಿತು. ತಂಡದ ಸದಸ್ಯರು ಕೈಯಲ್ಲಿ ಚಾಕು, ಚೂರಿ, ದಂಡ ಹಿಡಿದಿದ್ದರು. ಇಂತಹ ಉಗ್ರರೂಪದ ಚಟುವಟಿಕೆಗಳನ್ನು ಮಾಡಬೇಕಾದರೆ ಅವರು ಬಳ್ಳಾರಿ ಜಿಲ್ಲೆಗೆ ಸೇರಿದ ಚಳುವಳಿಗಾರರಾಗಿರಲು ಸಾಧ್ಯವಿಲ್ಲ, ಅವರೆಲ್ಲರೂ ಬೊಂಬಾಯಿ ಪ್ರಾಂತದ ಧಾರವಾಡ ಜಿಲ್ಲೆಗೆ ಸೇರಿದ ಚಳುವಳಿಗಾರರೇ ಇರಬೇಕು ಎಂದು ೧೯೪೨ರ ಪೊಲೀಸ್ ರಹಸ್ಯ ದಾಖಲೆಗಳು ತಿಳಿಸುತ್ತವೆ. ಮುದೇನೂರು ಸಂಗಣ್ಣ ತಿಳಿಸುವಂತೆ ಈ ಪ್ರಸಂಗವು

'ತೆಲಗಿ' ಎಂಬ ಗ್ರಾಮದ ಬಳಿ ನಡೆಯಿತು. ಈ ಪ್ರಕರಣದಲ್ಲಿ ಆಕ್ರಮಣ ನಡೆಸಿದ ತಂಡದ ನಾಯಕತ್ವವನ್ನು ಮೈಲಾರ ಮಹದೇವಪ್ಪನ ತಮ್ಮ ಮೈಲಾರ ಲಿಂಗಪ್ಪ ವಹಿಸಿದ್ದರು ಎಂಬ ಉಲ್ಲೇಖವಿದೆ.

ಈ ಘಟನೆಯಲ್ಲಿ ನಾಯಕತ್ವದ ವಿಚಾರದಲ್ಲಿ ಭಿನ್ನ ಅಭಿಪ್ರಾಯವಿದೆ. ಕಾರಣ ಇದೇ ಘಟನೆಯಲ್ಲಿ ಭಾಗಿಗಳಾಗಿದ್ದ ಹಾವೇರಿ ತಾಲೂಕಿನ ನೆಗಳೂರು ಗ್ರಾಮದ ದೇವೇಂದ್ರಪ್ಪ ವಿಭೂತಿ, ಪರಮಣ್ಣ ಹರಕಂಗಿ ಮತ್ತು ಹಾಲಗಿಯ ಫಕ್ಕೀರಯ್ಯ ಕುಲಕರ್ಣಿ ಹೇಳಿಕೆಯಂತೆ ಆ ತಂಡದ ನಾಯಕತ್ವವನ್ನು ಮೈಲಾರ ಮಹದೇವಪ್ಪ ವಹಿಸಿದ್ದ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಜಿಲ್ಲೆಯ ರಾಷ್ಟ್ರೀಯ ಚಳುವಳಿಯಲ್ಲಿ ಮೈಲಾರ ಮಹದೇವಪ್ಪನ ತಮ್ಮ ಲಿಂಗಪ್ಪ ತಂಡದ ನಾಯಕತ್ವ ವಹಿಸಿದ ಪ್ರಸ್ತಾಪ ಕೇಳಿಬಂದಿಲ್ಲ.

* ಹುಬ್ಬಳ್ಳಿಯಿಂದ ಪ್ರತಿ ದಿನ ಮೇಲ್‌ಗಾಡಿಯು ಸಂಜೆ (ಇನ್ನೂ ಬೆಳಕಿರುವಾಗಲೇ) ಹಾವೇರಿಗೆ ಬರುತ್ತಿತ್ತು. ಅದನ್ನು ಹೇಗಾದರೂ ಮಾಡಿ ಸಂಜೆ ಬರುವ ಹಾಗೆ ಮಾಡಲು ಮಹದೇವಪ್ಪ ಯೋಚಿಸತೊಡಗಿದ. ಹಾವೇರಿಯಿಂದ ಹಿಂದೆ ವರದಾ ನದಿಯ ಮೇಲಿನ ಸೇತುವೆ ಮೇಲೆ ಯಾರಿಗೂ ತೊಂದರೆಯುಂಟಾಗದ ಹುಸಿ ಬಾಂಬ್ ಹಾಕಿ ಸ್ವಲ್ಪ ಗಾಬರಿಯುಂಟುಮಾಡಿದರೆ, ಹಾವೇರಿಗೆ ಕತ್ತಲಾಗುವ ವೇಳೆಗೆ ಬರುತ್ತೆ ಎಂದುಕೊಂಡು ಕೆಲಸವನ್ನು ಕಾರ್ಯರೂಪಕ್ಕೆ ತಂದ, ಮಹದೇವಪ್ಪನ ಯೋಜನೆಯಂತೆ ಶಕ್ತಿಶಾಲಿ ಬಾಂಬ್ ಆಗಿರದ ಕಾರಣ ಯಾರಿಗೂ ಪ್ರಾಣಹಾನಿ ಆಗದೆ ಗಾಡಿ ಸ್ವಲ್ಪ ಕಾಲ ನಿಂತು ಹಾವೇರಿಗೆ ಇವರು ಅಂದುಕೊಂಡಂತೆ ಸಂಜೆ ಕತ್ತಲು ಕವಿಯುವ ವೇಳೆಗೆ ಬಂದಾಗ ಅಂಚೆ ಜವಾನ ತನ್ನ ದಿನಚರಿಯಂತೆ ಅಂಚೆ ಚೀಲ ತೆಗೆದುಕೊಂಡು ಹೊರಟಾಗ ಜನಗಳೊಂದಿಗೆ ಹೊರಟಿದ್ದ ಮೈಲಾರ ಮಹದೇವಪ್ಪನು ಜವಾನನೊಂದಿಗೆ ಹೊರಟು ಜವಾನನ ಹತ್ತಿರವೇ ಹುಸಿಬಾಂಬನ್ನು ಎಸೆದಾಗ, ಜನ ಗಾಬರಿಯಿಂದ ಬಾಂಬ್ ಬಾಂಬ್ ಎನ್ನುತ್ತ ಓಡುತ್ತಿರುವಾಗ ಮಹದೇವಪ್ಪ ಜವಾನನ ಕೈಯಲ್ಲಿರುವ ಅಂಚೆ ಚೀಲವನ್ನು ಕಿತ್ತುಕೊಂಡು ಓಡಿ ಹೋದನು.

ಈ ಘಟನೆ ಹಾವೇರಿಯ ಮಧ್ಯ ಭಾಗದಲ್ಲಿಯೇ ನಡೆದಿದ್ದರಿಂದ ಪೊಲೀಸರಿಗೆ ಅಧಿಕಾರಿಗಳಿಗೆ ಅವಮಾನ ಮಾಡಿದಂತಿತ್ತು. ಮಹದೇವಪ್ಪನ ಜನಪ್ರಿಯತೆ ಹೆಚ್ಚಾದ ಬಗ್ಗೆ ಮತ್ತು ಆ ಘಟನೆಯ ವಿವರಗಳನ್ನು, ಮಹದೇವಪ್ಪನ ಸಾಹಸವನ್ನು ಹಾವೇರಿಯ ಚಳುವಳಿಗಾರ ರಾಮಚಂದ್ರ ಕರ್ಪೂರ ಸಂದರ್ಶನದಲ್ಲಿ ನೆನಪಿಸಿಕೊಳ್ಳುತ್ತಾರೆ.



ಇದೇ ರೀತಿ ಹಾವೇರಿ–ಹಾವನೂರು ಟಪಾಲು ಬಸ್ಸು ಲೂಟಿ, ಶಿಗ್ಗಿ ರನ್ನರ್‌ನಿಂದ ಟಪಾಲು ಲೂಟಿ, ಕರ್ಜಗಿ ಪೋಸ್ಟ್‌ಬ್ಯಾಗ್ ಲೂಟಿ, ಬ್ಯಾಡಗಿ ರೈಲ್ವೇ ಸ್ಟೇಷನ್ ಹತ್ತಿರ ರನ್ನರನಿಂದ ಟಪಾಲು ಲೂಟಿ, ಸವಣೂರು ರೈಲ್ವೇ ಸ್ಟೇಷನ್‌ಗೆ ಬೆಂಕಿ ಹಚ್ಚಿದ್ದು ಇವರ ಭೂಗತ ಕಾರ್ಯಕ್ಕೆ ಸಾಕ್ಷಿಯಂತಿವೆ. ಈ ಎಲ್ಲ ಘಟನೆಗಳಲ್ಲಿ ಮಹದೇವಪ್ಪನ ತಂಡದಲ್ಲಿ ಮಹತ್ತರ ಪಾತ್ರವಹಿಸಿದ ಚಳುವಳಿಗಾರರೆಂದರೆ ನೆಗಳೂರಿನ ದೇವೇಂದ್ರಪ್ಪ ವಿಭೂತಿ, ಇವರು ಇಲ್ಲಿಯೂ ತಮ್ಮ ಕಾರದ ಪುಡಿಯ ಮಹಿಮೆಯನ್ನು ಪ್ರದರ್ಶಿಸಿದವರು. ಹೀಗಾಗಿ ಇವರಿಗೆ ಮಹದೇವಪ್ಪ ಬ್ಯಾಡಗಿಯ ಬಾಂಬ್ ಎಂದು ಕರೆಯುತ್ತಿದ್ದ ಬಗ್ಗೆ ಸಂದರ್ಶನದಲ್ಲಿ ದೇವೇಂದ್ರಪ್ಪ ಹೆಮ್ಮೆಯಿಂದ ಹೇಳಿರುತ್ತಾರೆ.

ನೆಗಳೂರಲ್ಲಿ ಮಧ್ಯಾಹ್ನದಲ್ಲಿಯೇ ಮಹದೇವಪ್ಪನ ತಂಡ ಕಂದಾಯ ವಸೂಲಿಗೆ ಬಂದ ಅಧಿಕಾರಿಗಳ ವಾಹನಕ್ಕೆ (ಜೀಪಿಗೆ) ಬೆಂಕಿ ಹಚ್ಚಿ ಅಲ್ಲಿಂದ ಪಾರಾಗಿ ಹೋದರು. ಈ ಪ್ರಕರಣದಲ್ಲಿ ಮಹದೇವಪ್ಪನ ತಂಡದಲ್ಲಿದ್ದ ಪರಮಣ್ಣ ಹರಕಂಗಿ ಹೇಳುವಂತೆ, ನಡು ಊರಿನಲ್ಲಿ ಈ ಘಟನೆ ನಡೆದು, ಅಧಿಕಾರಿಗಳಿಗೆ, ಪೊಲೀಸರಿಗೆ ಭಾರಿ ಅವಮಾನವಾಯಿತು. ಅದರಿಂದ ನಮ್ಮನ್ನು ಬಂಧಿಸಲು ತುಂಬಾ ಕಷ್ಟಪಟ್ಟರು. ಆದರೆ ನಾವು ಮಾತ್ರ ಯಾರಿಗೂ ತಿಳಿಸದೆ, ಕಪ್ಪತ್ತಗುಡ್ಡದಲ್ಲಿ ಬಿಡಾರ ಹೂಡಿದ್ದೆವೆಂದು ಆ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

**ಹೊಸರಿತ್ತಿಯ ಚಾವಡಿ ಸುಟ್ಟಿದ್ದು :** ಹೊಸರಿತ್ತಿ ಹಾಗೂ ಕೊರಡೂರು ಆಶ್ರಮವಾಸಿಗಳು ಅಲ್ಲದೇ ಮಹದೇವಪ್ಪ ಮೈಲಾರಗೆ ಆಶ್ರಮದ ಆಚೆಗಿನ ಕೆಲವು ಯುವಕರು ಇವರ ಭೂಗತ ಕಾರ್ಯಗಲ್ಲಿ ಭಾಗಿಗಳಾಗಿರುತ್ತಿದ್ದರು. ಹೀಗಿರುವಾಗ ಹೊಸರಿತ್ತಿ ಚಾವಡಿಯಲ್ಲಿಯ ಹಣ ಲೂಟಿ ಮಾಡಲು ಮಹದೇವಪ್ಪನ ತಂಡದವರು ನಿರ್ಧರಿಸಿದರು. ಇಷ್ಟಕ್ಕೂ ಇವರ ತಂಡ ವಾಸವಿದ್ದ ಜಾಗವೆಂದರೆ ಕಬ್ಬೇರಹಳ್ಳಿ ಈ ಹಳ್ಳಿ ಹಾಳಾಗಿತ್ತು. ಕಾರಣ ಅಲ್ಲಿ ಬ್ರಹ್ಮರಾಕ್ಷಸ ಜನಕ್ಕೆ ಅತಿಯಾದ ಕಾಟ ನೀಡುತ್ತಿತ್ತು ಎಂದು ಎಲ್ಲರೂ ಊರನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗಿದ್ದರು. ಅಂತಹ ಒಂದು ಹಾಳಾದ ಊರಿನ ಮನೆಯಲ್ಲಿ ಮಹದೇವಪ್ಪನ ಸಂಗಡಿಗರು ವಸತಿಯಾಗಿದ್ದಾಗ ಈ ಹೊಸರಿತ್ತಿ

ಚಾವಡಿ ಸುಡಬಾರದೇಕೆ ಎಂಬ ವಿಚಾರ ಬರಲಾಗಿ ಈ ಚಾವಡಿ ಸುಡಲು ನಿರ್ಧರಿಸಿದರು. ಕಬ್ಬೇರಹಳ್ಳಿಯಿಂದ ಹೊಸರಿತ್ತಿಯು ಸುಮಾರು ೨೫ ಕಿ.ಮೀ ದೂರ ಕಾಡುದಾರಿ ರಾತ್ರಿ ವೇಳೆ ಬಹುಜನರಿಗೆ ಪಾದರಕ್ಷೆಗಳೂ ಇರಲಿಲ್ಲ, ಅಲ್ಲದೇ ಮಧ್ಯೆ ಬರುವ ನಾಲ್ಕೆಂಟು ದಾರಿಗಳನ್ನು ತಪ್ಪಿಸಿ ಊರ ಹೊರವಲಯದಲ್ಲಿಯೇ ಸಾಗುತ್ತ ರಾತ್ರಿ ೧೨ರ ಸುಮಾರಿಗೆ ಹೊಸರಿತ್ತಿ ಚಾವಡಿಯ ಹತ್ತಿರ ಬಂದರು, ಬರುವ ಮೊದಲೇ ಅವರವರ ಕೆಲಸಗಳು ಅವರಿಗೆ ತಿಳಿಸಲಾಗಿತ್ತು. ಮೊದಲ ಕೆಲಸವೆಂದರೆ ಇವರೆಲ್ಲ ಚಾವಡಿ ಪ್ರವೇಶಿಸದ ಮೇಲೆ ಯಾರಾದರೂ ಬಂದರೆ ಅವರನ್ನು ಹೊರಗಡೆಯೇ ತಡೆಯಲು ನಾಲ್ಕಾರು ಜನರನ್ನು ನಿಲ್ಲಿಸಲಾಗಿತ್ತು. ಒಳಗಡೆ ಮಲಗಿದವರನ್ನು ಎಬ್ಬಿಸಿ ಬೇರೆ ಕಡೆ ಮಲಗಲು ಇಲ್ಲಾ ಎಲ್ಲಾದರೂ ಹೋಗಿ ಎಂದು ಹೇಳಿ, ಅಲ್ಲಿಯೇ ಇದ್ದ ಮೇಜು, ಕುರ್ಚಿಗಳನ್ನು ಕೂಡಿಹಾಕಿ ಇಮಾರತಿಗೆ ಚಿಮಣ್ಣಿ ಸುರಿದು ಬೆಂಕಿ ಹಚ್ಚಿ ಜೈ ಜೈಕಾರ ಹಾಕಹತ್ತಿದರು. ಅಷ್ಟರಲ್ಲಾಗಲೇ ಚಾವಡಿಗೆ ಹೊಂದಿಕೊಂಡಿರುವ ಕೊಂಡವಾಡಕ್ಕೂ ಬೆಂಕಿ ಹಚ್ಚಲಾಯಿತು. ಕೊಂಡವಾಡಕ್ಕೆ ಹಚ್ಚಿದ್ದರಿಂದ ಒಂದು ಭಯಾನಕ ಘಟನೆ ನಡೆಯುವ ಸಂಭವವನ್ನು ಮಹದೇವಪ್ಪ ಅರಿತನು. ಅದೇನೆಂದರೆ ಕೊಂಡವಾಡಕ್ಕೆ ಹೊಂದಿಕೊಂಡು ಒಂದು ಹುಲ್ಲಿನ ಬಣವೆ, ಅದರ ಪಕ್ಕದಲ್ಲಿ ದನಕರುಗಳನ್ನು ಕಟ್ಟಿದ ದನದ ಕೊಟ್ಟಿಗೆ ಇತ್ತು. ಸ್ವಲ್ಪ ಸಮಯ ಕಳೆಯುವದರೊಳಗೆ ಅವೆಲ್ಲ ಸುಟ್ಟು ಬೂದಿಯಾಗುತ್ತವೆ ಎಂಬುದು ಮಹದೇವಪ್ಪನ ಅರಿವಿಗೆ ಬಂದಿದ್ದೆ ತಡ ಮಹದೇವಪ್ಪ ತನ್ನ ಸಂಗಡಿಗರಿಗೆ ಎಲ್ಲರೂ ಮೊದಲು ದನದ ಕೊಟ್ಟಿಗೆಯಲ್ಲಿದ್ದ ಎಲ್ಲ ದನಗಳನ್ನು ಕಟ್ಟಿದ ಕುಣಿಕೆಗಳನ್ನು ಬಿಚ್ಚಿ ಇಲ್ಲಾ ಕತ್ತರಿಸಿರಿ ಬೇಗ ಎಷ್ಟು ಸಾಧ್ಯವೋ ಅಷ್ಟು ಬೇಗ ಮಾಡಿ ಎಂದು ತಾನು ದನದ ಕೊಟ್ಟಿಗೆಗೆ ನುಗ್ಗಿದನು. ಎಲ್ಲ ದನಗಳನ್ನು ಆ ಬೆಂಕಿಯಿಂದ ಪಾರುಮಾಡಲಾಯಿತು. ಆದರೆ ಪಕ್ಕದಲ್ಲಿದ್ದ ದನಗಳ ಮೇವಿನ ಬಣವೆ ಇದೆ ಬಿಟ್ಟರೆ ಸುಟ್ಟು ಬೂದಿಯಾಗುತ್ತದೆ ಏನು ಮಾಡುವುದು ಎಂದು ಯೋಚಿಸುವುದರ ಬದಲು ಬೆಳಗಾಗುತ್ತಾ ಬಂದಿದೆ ಮೊದಲು ಇಲ್ಲಿಂದ ತಪ್ಪಿಸಿಕೊಳ್ಳೋಣವೆಂದು ಮಾತನಾಡಿಕೊಂಡೆವು. ಆದರೆ ಮಹದೇವಪ್ಪ ಮೈಲಾರ ಹಾಗೂ ಹನುಮಣ್ಣ ಜಂಗಳಿ, ರಾಮಾನಂದರು ಅದಕ್ಕೆ ಒಪ್ಪಲಿಲ್ಲ, ನಾವು ಇಲ್ಲಿಯೇ ಕೈದಾದರೂ ಪರವಾಗಿಲ್ಲ, ಬಣವಿಯನ್ನು ಸುಡಲು ಬಿಡಬಾರದು ಅದು ಮೂಕ ಪ್ರಾಣಿಗಳ ಆಹಾರ, ಅವುಗಳ ಶಾಪ ನಮಗೆ ತಟ್ಟದೇ ಬಿಡುವುದಿಲ್ಲ



ಹಾಗಾಗಿ ನಾವೆಲ್ಲರೂ ಬಣವಿಯನ್ನು ಉಳಿಸಲೆಬೇಕು ಎಂದು ಎಲ್ಲರಿಗೂ ಹೇಳಿದರು. ಆಗ ಯಾರದ್ದೋ ಮನೆಯಿಂದ ಸೇದುವ ಹಗ್ಗ ತರಿಸಿ ಬಣವಿಗೆ ಸುತ್ತಲು ಹಗ್ಗದಿಂದ ಕಟ್ಟಿ ಎಲ್ಲರೂ ಸ್ವಲ್ಪ ದೂರದವರೆಗೂ ಎಳೆಯುವುದರ ಮೂಲಕ ಆ ದನಗಳ(ಮೇವಿನ ಬಣವೆ)ಆಹಾರವನ್ನು ಅಂತಹ ಕಷ್ಟದ ಸನ್ನಿವೇಶದಲ್ಲಿ ಪ್ರಾಣದ ಹಂಗು ತೊರೆದು ಉಳಿಸಿದರು. ಇಷ್ಟಾಗುವುದರೊಳಗೆ ಬೆಳಗಾಗಿದ್ದರಿಂದ ಚಳುವಳಿಕಾರರ ಕಾರ್ಯವನ್ನು ಮೆಚ್ಚಿಕೊಂಡ ಹೊಸರಿತ್ತಿಯ ಜನತೆ ಜೈ ಕಾರ ಹಾಕಿದರು. ಈ ಕಾರ್ಯ ಮುಗಿಸಿದ ಮಹದೇವಪ್ಪನ ತಂಡ ಹೊಸರಿತ್ತಿ ಊರನ್ನು ತೊರೆಯಿತು.

ಮೈಲಾರ ಮಹದೇವಪ್ಪ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಬೇಗನೇ ಯಾವ ಕಾರ್ಯವನ್ನು ಮಾಡಲು ಇಷ್ಟಪಡಲಿಲ್ಲ. ಕಾರಣ ಮುಂಬೈಯಲ್ಲಿ ಸಭೆ ಸೇರಿದ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ **'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ'** ಎಂಬ ನಿರ್ಣಯ ಕೈಗೊಂಡ ದಿನವೆ ಹಲವಾರು ರಾಷ್ಟ್ರ ನಾಯಕರನ್ನು ಸರಕಾರ ದಸ್ತಗಿರಿ ಮಾಡಿತು. ಆಗಾಗಿ ಸ್ವಲ್ಪ ಕಾಯುವ ತಂತ್ರ ಮಾಡಿದ ಮಹದೇವಪ್ಪ ಹೊಸರಿತ್ತಿ ಹಾಗೂ ಕೊರಡೂರು ಆಶ್ರಮಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೂಗತನಾಗಿದ್ದುಕೊಂಡು ತನ್ನ ಮುಂದಿನ ಕಾರ್ಯಗಳ ಬಗ್ಗೆ ಚರ್ಚಿಸಲು ನಿರ್ಧರಿಸಿದನು, ಅಲ್ಲದೇ ಜೊತೆಗಾರರ ಒತ್ತಡವೂ ಹೆಚ್ಚುತ್ತಿತ್ತು. ಅದಕ್ಕಾಗಿ ಮಹದೇವಪ್ಪ ತನ್ನದೇ ಆದ ಯೋಜನೆಗಳನ್ನು ರೂಪಿಸತೊಡಗಿದನು.

**ಆಶ್ರಮದಲ್ಲಿಯ ಶ್ವಾನದ ಪ್ರೀತಿ ಮತ್ತು ರೋಧನ** ಮೈಲಾರ ಮಹದೇವಪ್ಪ ಎಂತವರನ್ನೂ ತನ್ನತ್ತ ಸೆಳೆದುಕೊಳ್ಳಬಲ್ಲ ವ್ಯಕ್ತಿತ್ವವುಳ್ಳವನು. ಹೀಗಿರುವಾಗ ತನ್ನ ಆಶ್ರಮದಲ್ಲಿ ನಾಯಿಯೊಂದು ಮಹದೇವಪ್ಪನನ್ನು ಅತಿಯಾಗಿ ಹಚ್ಚಿಕೊಂಡಿತ್ತು. ಮಹದೇವಪ್ಪ ಎಲ್ಲಿಯೇ ಹೋಗಲಿ ಅಲ್ಲಿಗೆ ಈ ಶ್ವಾನ ಹೊಗಬೇಕು. ಆದರೆ ಚಲೇಜಾವ್ ಚಳುವಳಿಯ ಸಮಯದಲ್ಲಿ ಪೊಲೀಸರಿಂದ ತಲೆಮರೆಸಿಕೊಂಡು ತಿರುಗುತ್ತಿದ್ದ ಮಹದೇವಪ್ಪನಿಗೆ ಈ ನಾಯಿಯ ಬಗ್ಗೆ ದೊಡ್ಡ ಚಿಂತೆ ಕಾಡಹತ್ತಿತ್ತು. ಅದು ತನ್ನ ಸ್ವಾಮಿಭಕ್ತಿಗೆ ಇವನನ್ನು ಬಿಟ್ಟು ಇರಲಾರದ ಸ್ಥಿತಿಯಲ್ಲಿಯಿತ್ತು. ಹೀಗಾಗಿ ಆಶ್ರಮದಿಂದ ಹೊರಡುವ ಮುನ್ನ ಮಹದೇವಪ್ಪನಿಗೆ ಪೊಲೀಸಿನವರಿಗಿಂತ ಶ್ವಾನದ ಕೈಯಲ್ಲಿ ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತಿತ್ತು.

ಕೆಲವು ಸಲ ಬಿಟ್ಟು ಹೋದರು, ಅದು ಹೇಗೋ ವಾಸನೆಯ ಮೂಲಕ ಮಹದೇವಪ್ಪ ಇದ್ದಲ್ಲಿಗೆ ಹೋಗಿಬಿಡುತ್ತಿತ್ತು. ಎರಡು ದಿನಗಳ ಕಾಲ ತನ್ನೊಂದಿಗೆ ಇರಿಸಿಕೊಂಡು ಯಾರಾದರೂ ಸಹಚರರ ಕೂಡಾ ಆಶ್ರಮಕ್ಕೆ ನಾಯಿಯನ್ನು ಕಳಿಸಿಕೊಟ್ಟರೆ, ಮಹದೇವಪ್ಪನ ಶ್ವಾನ ಅವರಿಗಿಂತ ಮೊದಲೇ ಬಂದಿರುತ್ತಿತ್ತು. ಇದರಿಂದ ಮಹದೇವಪ್ಪನಿಗೆ ಸಾಕುಸಾಕಾಯಿತು. ಕಾಡುಮೇಡುಗಳಲ್ಲಿ ಅಲೆಯುವಾಗ ಉಪಾಯದಿಂದ ಮಹದೇವಪ್ಪ ಆ ನಾಯಿಯಿಂದ ತಪ್ಪಿಸಿಕೊಂಡನು. ಆದರೆ ತನ್ನ ಒಡೆಯ ಕಾಣದಿದ್ದಾಗ ಚೀರುತ್ತಾ ಗಿಡಗಂಟೆಗಳಲ್ಲಿ ಮೂಸಿನೋಡುತ್ತಾ ಹುಡುಕುತ್ತಿತ್ತು. ಮಹದೇವಪ್ಪ ಸಿಗದೆ ಇದ್ದಾಗ ವಿಪರೀತ ದುಃಖವಾಗಿ ಬರೀ ಹಿಂಗಾಲುಗಳ ಮೇಲೆ ಕುಳಿತು ಕಣ್ಣೀರು ಸುರಿಸುತ್ತಿತ್ತು. ಆಗಾಗಾ ಆಕಾಶದ ಕಡೆ ತಲೆ ಎತ್ತಿ ಧ್ವನಿತೆಗೆದು ಚೀರು ಧ್ವನಿಯಲ್ಲಿ ಅಳುತಿತ್ತು. ಮೂರು ದಿನಗಳ ಕಾಲ ಉಪವಾಸ ಇದ್ದರೂ ಜಾಗ ಖಾಲಿಮಾಡಲಿಲ್ಲ. ತನ್ನ ಸಹಪಾಠಿಗಳಿಂದ ನಾಯಿಯ ವಿಷಯ ತಿಳಿದು ಸ್ವತಹ ಮಹದೇವಪ್ಪನೇ ಆಶ್ರಮಕ್ಕೆ ಕರೆತಂದು ಎರಡು ದಿನಗಳ ಕಾಲಕಳೆದನು. ಆದರೆ ಈ ಸಾರಿ ಆಶ್ರಮದಿಂದ ಹೊರಟಾಗ ನಾಯಿಯನ್ನು ಕುರಿತು ನಾನು ಎರಡು ದಿನ ಬಿಟ್ಟು ಬರುತ್ತೇನೆ, ನೀನು ಮಾತ್ರ ಆಶ್ರಮದಲ್ಲಿ ಇದ್ದುಕೊಂಡು ಮಗಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು ಎಂದು ಹೇಳಲಾಗಿ, ಬಾಲ ಅಲ್ಲಾಡಿಸಿ ಮೂಖ ನೋಟ ನೊಡಿತು. ಅದು ಮಹದೇವಪ್ಪನ ಮಾತನ್ನು ಒಪ್ಪಿದಂತಿತ್ತು. ಈ ಘಟನೆ ಮಹದೇವಪ್ಪ ಕ್ಲಿಷ್ಟಕರ ಸಮಯದಲ್ಲಿ ಮೂಕ ಪ್ರಾಣಿಯ ಪ್ರೀತಿಯನ್ನು ಗಳಿಸಿದ್ದು ಒಂದಡೆಯಾದರೆ, ಆ ಶ್ವಾನ ಕೂಡಾ ಇಂತಹ ಸಮಯದಲ್ಲಿ ತನ್ನ ಒಡೆಯನ ಕಡೆ ಇರಲು ಇಷ್ಟಪಡುವುದನ್ನು ಗಮನಿಸಬಹುದು.

**ಕೊನೆಯ ಬಾರಿ ಪತ್ನಿ ಮತ್ತು ಮಗಳನ್ನು ನೋಡಿದ ಮಹದೇವಪ್ಪ :** ಹಾವೇರಿಯಲ್ಲಿ ತನ್ನ ಗುರುಗಳು ಮತ್ತು ಚಳುವಳಿಯ ನಾಯಕರೂ ಆದ ಕೆ. ಎಫ್. ಪಾಟಿಲ್‌ರನ್ನು ಭೇಟಿಯಾಗಿ ಆಶ್ರಮಕ್ಕೆ ರಾತ್ರಿ ಬಂದು ಪತ್ನಿಯನ್ನು ಕಂಡ ಮಹದೇವಪ್ಪ ನನಗೂ ನಿನಗೂ ಆಶ್ರಮದಲ್ಲಿದ್ದರೆ ತೊಂದರೆ ನೀನು ಇಲ್ಲಿ ಇರುವುದು ಬೇಡ ಯಾವುದಾದರೂ ಸುರಕ್ಷಿತ ಸ್ಥಳಕ್ಕೆ ನೀನು ಹೋಗಬೇಕು ಎಂದು ಸೂಚಿಸಿದನು. ಕಾರಣ ನಮ್ಮ ಭೂಗತ ಕಾರ್ಯಗಳನ್ನು ಸರಕಾರ ಗಂಭಿರವಾಗಿ ತೆಗೆದುಕೊಂಡಿದೆ, ನನ್ನ ಮೇಲಿನ ಕೋಪಕ್ಕೆ ನಿನಗೆ ತೊಂದರೆ



ಕೊಡುತ್ತಾರೆ ಹಾಗಾಗಿ ನೀನು ಇಲ್ಲಿ ಇರುವುದು ಸುರಕ್ಷಿತವಲ್ಲ ಎಂದು ಹೇಳಲಾಗಿ ಪತ್ನಿಗೆ ಮಾತ್ರ ಆಶ್ರಮವನ್ನು ಬಿಟ್ಟು ಹೋಗಲು ಮನಸ್ಸಿಲ್ಲ, ಅಲ್ಲದೇ ಪುಟ್ಟ ಮಗಳು ತೀವ್ರ ಜ್ವರದಿಂದ ಬಳಲುತ್ತಿದ್ದಳು. ಹೀಗಾಗಿ ತಾನು ಆಶ್ರಮವನ್ನು ಬಿಟ್ಟು ಹೋಗದಿರಲು ನಿರ್ಧರಿಸಿರುವುದನ್ನು ಪತಿಗೆ ತಿಳಿಸಿದಳು.

ಪತ್ನಿ ಸಿದ್ದಮ್ಮಳಿಗೆ ಇಲ್ಲಾ ನೀನು ಹೊಗಲೇಬೇಕು ಕಾರಣ ನಾವು ಕಂದಾಯ ಕೇಂದ್ರದ ಮೇಲೆ ದಾಳಿ ಮಾಡುವುದಿದೆ, ಹೀಗಾಗಿ ನೀನು ಹರಪನಹಳ್ಳಿಯಲ್ಲಿ ತಮ್ಮ ಲಿಂಗಣ್ಣನನ್ನು ಹೊಸಪೇಟೆಯ ಜೈಲಿಗೆ ಸ್ಥಳಾಂತರಿಸಿದ್ದಾರೆ, ಅವನನ್ನು ನೋಡಿಕೊಂಡು ಬಾ, ಅಷ್ಟರಲ್ಲಿ ನನ್ನ ಕಾರ್ಯವನ್ನು ಮಾಡಿ ಮುಗಿಸುತ್ತೇನೆ, ಎಂದು ಹೇಳಿ ಮಹದೇವಪ್ಪ ಹೊರಡಲು ಸಿದ್ಧನಾದನು. ಇತ್ತ ಸಿದ್ದಮ್ಮಳಿಗೆ ಮನಸ್ಸಿನಲ್ಲಿ ಕಳವಳ ಪ್ರಾರಂಭವಾಯಿತು. ಆಗ ಗಾಂಧೀಜಿಯವರ ವಿಚಾರಧಾರೆಗಳನ್ನು ತಿಳಿಸಿ ಪತ್ನಿಯನ್ನು ಹೊರಡಲು ತಯಾರು ಮಾಡಿದನು.

ಮಹದೇವಪ್ಪ ಮೈಲಾರ ಪತ್ನಿಗೆ ಇಷ್ಟವಿಲ್ಲದಿದ್ದರೂ ಅವಳನ್ನು ಒಪ್ಪಿಸಿ, ಆಶ್ರಮದಿಂದ ಹೊರಟಾಗ ಪುಟ್ಟ ಮಗಳು ತಂದೆ ಹೊರಡುವುದನ್ನು ಕಂಡು ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿತು. ಮಗುವಿನ ಮುಖ ನೋಡಿ ತುಂಬ ದುಃಖ ಬರತೊಡಗಿತು. ಎಂದೂ ಇಷ್ಟು ದುಃಖ ಪಡೆದ ಮಗಳು ಇಂದ್ಯಾಕೆ ಇಷ್ಟು ರೋಧಿಸುತ್ತದೆ ಎಂದು ಮಗಳನ್ನು ಮತ್ತೊಮ್ಮೆ ಎತ್ತಿಕೊಂಡು ಸಂತೈಸಿದರೂ, ಎಷ್ಟು ಮುದ್ದಿಸಿದರೂ ಮಗುವಿನ ಅಳು ಮಾತ್ರ ಕಡಿಮೆಯಾಗಲಿಲ್ಲ. ಆದರೆ ತಾನು ಮಾಡುವ ಕರ್ತವ್ಯವನ್ನು ಬಿಡುವಂತಿರಲಿಲ್ಲ. ಮತ್ತೊಮ್ಮೆ ಗೋಗರೆದು ಅಳುತ್ತಿರುವ ಮಗುವನ್ನು ನೋಡಿ ಭಾರವಾದ ಮನಸ್ಸಿನಿಂದ ಮಹದೇವಪ್ಪ ಆಶ್ರಮದಿಂದ ಹೊರಟನು, ಅದು ಕೊನೆಯ ಸಾರಿ ಪತ್ನಿ ಮತ್ತು ಎರಡು ವರ್ಷದ ಮಗುವನ್ನು ನೋಡಿದ ಕ್ಷಣ, ಮತ್ತೊಮ್ಮೆ ಪತ್ನಿ ಹಾಗೂ ಪ್ರೀತಿಯ ಮುದ್ದಿನ ಮಗಳನ್ನು ನೋಡುವುದಿಲ್ಲ ಎಂಬ ಅರಿವಿಲ್ಲದ ಮಹದೇವಪ್ಪ ಆಶ್ರಮದಿಂದ ಹೊರಟು ಹೋದನು.

**ಹೊಸರಿತ್ತಿ ಕಂದಾಯ ಕೇಂದ್ರ :** ಹಾವೇರಿ ಜಿಲ್ಲೆಯ ಹಾಗೂ ತಾಲೂಕಿನ ಹೊಸರಿತ್ತಿ ಒಂದು ಕಂದಾಯ ವಸೂಲಿ ಮಾಡುವ ಕೇಂದ್ರ. ವರದಾ ನದಿಯ ದಂಡೆಯ ಮೇಲೆ ಇರುವ ಒಂದು ದೊಡ್ಡ ಗ್ರಾಮ. ಬಹುದಿನಗಳಿಂದ ಅಲ್ಲಿ ಗಾಂಧೀ ಆಶ್ರಮ ಇದ್ದುದರ ಫಲವಾಗಿ ತುಂಬಾ ಜಾಗೃತವಾದ ಹಳ್ಳಿ. ಪಕ್ಕದಲ್ಲಿಯೇ

ಮಹದೇವಪ್ಪನ ಕೊರಡೂರಿನ 'ಗ್ರಾಮ ಸೇವಾಶ್ರಮದ ಕೇಂದ್ರ' ಇದೆ. ಹೊಸರಿತ್ತಿಯಲ್ಲಿ ಕಂದಾಯ ವಸೂಲಿ ಮಾಡಿ ಕೇಂದ್ರ ತೆರೆಯುವಲ್ಲಿ ಆಳರಸರಿಗೆ ಎದೆಗುಂದದಿದ್ದರೂ ಸಹಿತ ಮಹಾ ಮುತ್ಸದ್ದಿತನದಿಂದ ವರ್ತಿಸಿದ್ದರು. ಜಾಗೃತರಾದ ಜನರಿಗೆ ಅಲ್ಲಿ ತೆರೆದ ಕೇಂದ್ರದ ತನಕ ತೆರೆಳಿ ಹಣ ಕೊಟ್ಟು ಬರುವುದು ಅವರ ಸ್ವಾಭಿಮಾನಕ್ಕೆ ಚೇಳು ಕಡಿದಂತಾಗುತ್ತಿತ್ತು. ಅವರ ಸ್ವಾಭಿಮಾನ ಅಳಕಿಸುವುದೇ ಆಡಳಿತಗಾರರ ಗುರಿಯಾಗಿತ್ತು. ಮೇಲಾಗಿ, ಮಹದೇವಪ್ಪನು ಖಂಡಿತವಾಗಿ ಆ ಕೇಂದ್ರದ ಮೇಲೆ ಹಲ್ಲೆ ಮಾಡಿಯೇ ಮಾಡುತ್ತಾನೆ. ಆಗ ಅವನನ್ನು ಹಾಗೂ ಅವನ ಸಂಗಡಿಗರನ್ನು ಹಿಡಿದು ನಮ್ಮ ಕಾರ್ಯ ಸಾಧಿಸಬಹುದು ಎಂದು ಸರಕಾರ ನಿರ್ಧರಿಸಿತ್ತು. ಕಾರಣ ಅಂತಹ ಸರ್ಪಗಾವಲಿನ ಪೊಲೀಸ್ ಪಡೆಯನ್ನು ಪಹರೆಗೆ ಹಾಕಲಾಗಿತ್ತು. ಅದು ಸ್ಥಳಿಯ ಪೊಲೀಸರನ್ನು ನಂಬದ ಮುಂಬೈ ಸರಕಾರ ಮಹಾರಾಷ್ಟ್ರದಿಂದ ಪೊಲೀಸ್ ಪಡೆಯನ್ನು ಕಳಿಸಿತ್ತು. ಇತ್ತ ೭೪ ವಿದಾಯಕ ಕಾರ್ಯಗಳನ್ನು ಮಾಡಿದ್ದ ಮಹದೇವಪ್ಪನಿಗೆ ಇದು ದೊಡ್ಡ ವಿಷಯವಾಗಿರಲಿಲ್ಲ. ಅದಕ್ಕಾಗಿ **ಹೊಸರಿತ್ತಿ** ಕಂದಾಯದ ಹಣ ಲೂಟಿ ಮಾಡಿ ರೈತರಿಗೆ ಕಂದಾಯ ವಾಪಾಸು ಮಾಡಬೇಕು ಎಂದು ಆಲೋಚಿಸಿ ಅದಕ್ಕಾಗಿ **ಬುಡಬುಡಕಿಯ ವೇಷ ಧರಿ**ಸಿ ಕಂದಾಯ ಸಂಗ್ರಹ ಕೇಂದ್ರವಾದ ಹೊಸರಿತ್ತಿಯ ವೀರಭದ್ರೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿಯ ಪೊಲೀಸ್ ಪಡೆಯ ಪಹರೆ ಹೇಗಿದೆ ಎಂಬುದನ್ನು ಲೂಟಿ ಮಾಡುವ ಮುನ್ನಾದಿನ ಗಮನಿಸಿ ಬಂದಿದ್ದನು.

**ಹೊಸರಿತ್ತಿ ಕಂದಾಯ ಕೇಂದ್ರದ ಮೇಲೆ ಧಾಳಿ ಮಾಡುವ ಮುನ್ನ ಮಹದೇವಪ್ಪ ಮೈಲಾರರ ತಂಡದ ಉಪಾಯ ಹಾಗೂ ಸಂಭ್ರಮ:** ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಕರೆ ನೀಡಿದ **"**ಮಾಡು ಇಲ್ಲವೇ ಮಡಿ**"** ಸಂದೇಶ ಮಹದೇವಪ್ಪನಿಗೆ ಕಾಡಿತ್ತು. ಅದಕ್ಕಾಗಿ ತನಗಿಂತ ಹಿರಿಯ ತ್ರಿಮೂರ್ತಿ ಅಹಿಂಸಾ ಚಳುವಳಿಕಾರರಾದ ಫಕ್ಕೀರಪ್ಪ ತಾವರೆ, ವೆಂಕಣ್ಣ ವಾಯಿ ಮತ್ತು ರಮಾನಂದ ಮನ್ನಂಗಿ ಇವರು ಸಮಯಕ್ಕೆ ತಕ್ಕ ಹಾಗೆ ಹಂಚಿಕೆ ಮಾಡುವಲ್ಲಿ, ತಂಡದ ಸದಸ್ಯರ ಸಾಮರ್ಥ್ಯದ ಆಧಾರದ ಮೇಲೆ ಸದಸ್ಯರನ್ನು ನೇಮಿಸುವಲ್ಲಿ ನಿಪುಣರು ಇಂತಹವರೊಂದಿಗೆ ಮಹದೇವಪ್ಪ ಹೊಸರಿತ್ತಿ ಹಪ್ತಾ ಕೇಂದ್ರದ ಮೇಲೆ ದಾಳಿ ಮಾಡಲು ಚರ್ಚಿಸಿದ್ದ. ವಿಶೇಷವೆಂದರೆ ಅವರು ಯಾವುದೇ ಕಾರ್ಯದ, ಧಾಳಿಯ ವಿಷಯ ಕುರಿತು ಚರ್ಚಿಸುವಾಗ ತಂಡದ ಯಾವೊಬ್ಬ ಸದಸ್ಯರೂ



ಅವರ ಬಳಿ ಹೋಗುತ್ತಿರಲಿಲ್ಲ. ಹಾಗೆಯೇ ಹೊಸರಿತ್ತಿ ವಿಷಯದಲ್ಲಿ ನಾವು ಯಾರೂ ಅವರ ಬಳಿ ಹೋಗಿರಲಿಲ್ಲ. ಅವರು ನಾಲ್ವರೂ ಸೇರಿ ಚರ್ಚಿಸಿ ಧಾಳಿ ಮಾಡುವ ರೂಪುರೇಷೆಗಳನ್ನು ತಯಾರಿಸಿಕೊಂಡರು. ವಿವಾಹಕ್ಕಾಗಿ ಹೊರಡುವ ಬೀಗರಂತೆ ಹೊಸರಿತ್ತಿಗೆ ಹೋಗಲು ಎತ್ತುಗಳ ಮತ್ತು ಚಕ್ಕಡಿಗಳ ವ್ಯವಸ್ಥೆಯು ಆಯಿತು. ಚಕ್ಕಡಿಗೆ ಕೊಲ್ಹಾರಿಕಟ್ಟಿ ಗುಡಾರ ಹಾಕಿ ಬಂಡಿಯನ್ನು ತಳಿರು ತೋರುಣ ಕಬ್ಬಿನ ಗಣಿಕೆ ಬಾಳೆಕಂಬಗಳಿಂದ ಅಲಂಕರಿಸಿಲಾಯಿತು. ಈ ರೀತಿಯ ನಮ್ಮ ರಥವು ಕೊಗನೂರಿನಿಂದ ದಿನಾಂಕ ೩೧/೩/೧೯೪೩ರ ಸಂಜೆ ಇಪ್ಪತೊಂದು ಜನ ಬಂಟರೊಡಗೂಡಿ ಹೊರಟು ರಾತ್ರಿ ೧೦ ರಿಂದ ೧೧ ಗಂಟೆಗೆ ಹಾಲಗಿ ಗ್ರಾಮಕ್ಕೆ ತಲುಪಿದೆವು. ಹಾಲಗಿಯಲ್ಲಿ(ಹೊಸರಿತ್ತಿಯಿಂದ ಸುಮಾರು ೧೦ ಕಿ.ಮೀ ದೂರ) ನಿಸ್ಸೀಮ ದೇಶಭಕ್ತ ಪರಸನಗೌಡ ಕಾಕಡೆಯವರ ಮನೆಯಲ್ಲಿ ಕೊಗನೂರಿಂದ ಬಂದ ಎಲ್ಲ ಚಳುವಳಿಕಾರರಿಗೆ ಹೋಳಿಗೆ, ರೊಟ್ಟಿ, ತರತರಹದ ಪಲ್ಲೆಯ ಸಮೇತ ಒಳ್ಳೆಯ ಊಟ ಕೊಡಲಾಯಿತು. ಹೀಗೆ ಎಲ್ಲ ಚಳುವಳಿಯ ವೀರರು ಸಂತೋಷ, ಸಂಭ್ರಮಗಳಿಂದ ಹೊಸರಿತ್ತಿಯ ವರದಾನದಿ ದಂಡೆಗೆ ಬೆಳಗಿನ ೫:೩೦ಕ್ಕೆ ಬಂದೆವು. ಅಲ್ಲಿ, ಕೊಗನೂರಿನ ಹನುಮಣ್ಣನ ನಾಯಕತ್ವದಲ್ಲಿ ಮಹದೇವಪ್ಪನವರ ತಂಡದಲ್ಲಿ ಹಾಗೂ ಕೊಗನೂರಿನ ನಿಂಗಪ್ಪನ ನಾಯಕತ್ವದಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಿ ಅವರವರ ಕಾರ್ಯಗಳನ್ನು ಹಂಚಲಾಯಿತು. ಹೀಗೆ ಮೂರು ಗುಂಪುಗಳು ಉತ್ತರ ಪೂರ್ವ, ಪಶ್ಚಿಮ ದಿಕ್ಕಿನಿಂದ ಏಕಕಾಲಕ್ಕೆ ಧಾಳಿ ಮಾಡುವುದಾಗಿ ನಿಶ್ಚಯವಾಯಿತು.

ಮಹದೇವಪ್ಪ ಮೈಲಾರರ ತಂಡ ನದೀ ತೀರದ ಪೇರಲ ತೋಟದ ಮೂಲಕ ಧೀರೇಂದ್ರಸ್ವಾಮಿ ಮಠದ ಮುಂದುಗಡೆ ಹಾಯ್ದು ಹೋಗತಕ್ಕದ್ದು, ಹನುಮಣ್ಣನವರ ತಂಡ ಹೊಸರಿತ್ತಿ ಗ್ರಾಮದ ಗ್ರಾಮದೇವತೆಯ ದೇವಸ್ಥಾನದ ಮುಂದೆ ಹಾಯ್ದು ಠಾಣೆ ಇದ್ದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಬಲಭಾಗದಿಂದ ಏಕಕಾಲಕ್ಕೆ ಬಂದು ದೇವಸ್ಥಾನದ ಬಲಭಾಗದ ಗೋಡೆಗೆ ಮರೆಯಿಂದ ಹಾಯ್ದು ದೇವಸ್ಥಾನದಲ್ಲಿ ಹೊಗೆ ಬಾಂಬ್ ಸ್ಫೋಟಿಸಬೇಕೆಂದು ತೀರ್ಮಾನವಾಯಿತು. ಮೂರನೆಯ ನಿಂಗಪ್ಪನರ ಗುಂಪು ತಳವಾರ ಓಣಿಯ ಸಂದಿಯಲ್ಲಿ ಹಾಯ್ದು ಪೂರ್ವದಿಂದ ನುಗ್ಗಿ ದೇವಸ್ಥಾನದ ಸಮೀಪ ನುಗ್ಗಿ ಧಾಳಿ ಮಾಡಬೇಕೆಂದು ನಿಶ್ಚಯಿಸಿಕೊಂಡು ಅವರವರ ಸಂಗಾತಿ ಯೋಧರೊಡಗೂಡಿ ಸರಿಯಾಗಿ

ಅರುಣೋದಯ ಅಡಗಿ ಮೂಡಣದಿಂದ ಬಾಲ ಸೂರ್ಯ ಮೂಡಿಬರುವ ಸಮಯಕ್ಕೆ ಬೆಳಕಿನಲ್ಲಿ ಕಂದಾಯ ಕೇಂದ್ರ ಶ್ರೀ ವೀರಭದ್ರೇಶ್ವರ ದೇವಾಲಯಕ್ಕೆ ನುಗ್ಗಬೇಕು ಎಂದು ಎಲ್ಲರಿಗೂ ನಿರ್ದೇಶನ ನೀಡಿ ನದಿಯ ದಂಡೆಯಿಂದ ಎಲ್ಲರೂ ಅವರವರ ದಾರಿ ಹಿಡಿದು ಎಲ್ಲರೂ ಹೇಗೆ ಎಲ್ಲಿ ಸರಿಯಾಗಿ ಸೇರಬೇಕೆಂಬುದನ್ನು ನಿರ್ಧರಿಸಿ ಹೊರಟೆವು' ಎಂಬುದನ್ನು ಹೊಸರಿತ್ತಿಯ ಕಂದಾಯ ಕೇಂದ್ರದ ದಾಳಿಯ ಮೊದಲಿನ ಸನ್ನಿವೇಶವನ್ನು, ಸಂಘಟನೆಯನ್ನು ಹಾಗೂ ತಂಡದ ಸದಸ್ಯರ ಹುಮ್ಮಸ್ಸಿನ ವಿವರಗಳನ್ನು ಅಂದು ತಂಡದಲ್ಲಿದ್ದ ಚಳುವಳಿಕಾರ ಪರಮಣ್ಣ ಹರಕಂಗಿ ವಿವರಿಸುತ್ತಾರೆ.

ಹೊಸರಿತ್ತಿ ಕಂದಾಯ ಕೇಂದ್ರದಲ್ಲಿ ಕಂದಾಯ ಲೂಟಿ ಸಮಯದಲ್ಲಿ ನಮ್ಮವರು ಹುತಾತ್ಮರಾಗಿದ್ದು ಹೇಗೆ? ಪೂರ್ವ ನಿಗದಿಯಂತೆ ಎಲ್ಲ ಮೂರು ತಂಡಗಳು ಅವರವರಿಗೆ ವಹಿಸಿದ ಕಾರ್ಯದಂತೆ ಕಂದಾಯ ಕೇಂದ್ರಕ್ಕೆ ಬಂದಾಗಿತ್ತು. ಆದರೆ, ಹನುಮಣ್ಣನ ತಂಡ ದೇವಾಲಯ ಸೇರಿ ಹೊಗೆ ಬಾಂಬ್ ಹಾಕಿದ ಮೇಲೆ ಮಹದೇವಪ್ಪನ ತಂಡ ಕಂದಾಯ ಲೂಟಿ ಮಾಡಲು ತಕ್ಷಣಕ್ಕೆ ಬರಬೇಕಿತ್ತು. ಆದರೆ ಹನುಮಣ್ಣನ ತಂಡ ದೇವಾಲಯ ಪ್ರವೇಶಿಸುವ ಒಂದು ನಿಮಿಷ ಮೊದಲೇ ಮಹದೇವಪ್ಪ ಮೈಲಾರರ ತಂಡ ದೇವಾಲಯವನ್ನು ಆವೇಶದಲ್ಲಿಯೇ ಪ್ರವೇಶಿಸಿತು. ಅಲ್ಲದೇ ಮಹದೇವಪ್ಪನ ಬಲಗೈ ಬಂಟ ವೀರಯೋಧ ಕೊಗನೂರಿನ ಗೋಣೆಪ್ಪ ಕಮತದ ಹಾಗೂ ಮಹದೇವಪ್ಪನವರ ತಂಡದ ತಿರುಕಪ್ಪ ಮಡಿವಾಳರ, ವೀರಯ್ಯ ಹಿರೇಂಠ ದೇವಾಲಯವನ್ನು ನುಗ್ಗಿಯೇ ಬಿಟ್ಟರು. ಮಹದೇವಪ್ಪ ತಕ್ಷಣ ಮೇಲ್ಬಾವಣೆ(ಕಟ್ಟೆ) ಏರಿ ಸೆಂಟ್ರಿಯನ್ನು(ಪೊಲೀಸ) ತಮ್ಮ ಕೈಗಳಿಂದ ಬಂಧಿಸಲು ಅವರ ಮೇಲೆ ಏರಿ ಹೋದರು. ಸೆಂಟರಿ ಹೆದರಿ ತನ್ನ ಕೈಯಲ್ಲಿದ್ದ ಬಂದೂಕನ್ನು ಮಹದೇವಪ್ಪನವರ ಮೇಲೆ ಜೋರಾಗಿ ಎಸೆದುಬಿಟ್ಟನು. ಬ್ಯಾನಟ್ ಮಹದೇವಪ್ಪನವರ ಎದೆ ಗುಂಡಿಯ ಭಾಗಕ್ಕೆ ನೆಟ್ಟು ರಕ್ತ ಪುಟಿಯಿತು. ಆದರೆ ಮಹದೇವಪ್ಪ ತಮ್ಮ ಎದೆಗೆ ನೆಟ್ಟ ಬಂದೂಕನ್ನು ಕಿತ್ತೆಸೆದು ಆ ಪೊಲೀಸನನ್ನು ತೆಕ್ಕೆ ಹಾಯ್ದು ಅವನು ಎತ್ತಲೂ ಹೋಗದಂತೆ ಹಿಡಿಯುವಷ್ಟರಲ್ಲಿಯೇ ಗರ್ಭಗುಡಿಯಲ್ಲಿದ್ದ ಪೊಲೀಸನೊಬ್ಬ ಮಹದೇವಪ್ಪನಿಗೆ ಗುರಿಯಿಟ್ಟು ಗುಂಡು ಹಾರಿಸಲು ನಿಂತಿರುವುದನ್ನು ಗಮನಿಸಿದ ಗೋಣೆಪ್ಪ ಕಮತದ ಅದನ್ನು ತಪ್ಪಿಸಲು ಮತ್ತು ಬಂದುಕನ್ನು ಕಸಿಯಲು ಇನ್ನೇನು ಬಂದೂಕು ಕಸಿದುಕೊಳ್ಳಬೇಕೆನ್ನುವಷ್ಟರಲ್ಲಿ ಆ ಪೊಲೀಸ್ ಹಾರಿಸಿದ



ಗುಂಡು ಗೋಣೆಪ್ಪನವರ ಬಲಗೈಯ ಮೂರು ಬೆರಳು ಅರ್ಧ ಹಸ್ತವನ್ನು ಬಲಿ ತೆಗೆದುಕೊಂಡು ಮಹದೇವಪ್ಪನವರ ಎದೆ ಸೇರಿ ಬಿಟ್ಟಿತು. ಅಲ್ಲದೇ ಅದೇ ಪೊಲೀಸನು ಹಾರಿಸಿದ ಮತ್ತೆರೆಡು ಗುಂಡುಗಳು ಮಹದೇವಪ್ಪನನ್ನು ರಕ್ಷಿಸಲು ಮುಂದೆ ಹೋದ ವೀರಯ್ಯ ಹಿರೇಮಠ ಹಾಗೂ ತಿರುಕಪ್ಪ ಮಡಿವಾಳರ ಇವರಿಗೆ ತಲುಗಿದವು. ಈ ವೇಳೆಗೆ ಮಹದೇವಪ್ಪ ಭಾರತ್ ಮಾತಾಕಿ ಜೈ ಎನ್ನುತ್ತ ನೆಲಕ್ಕುರುಳಿದರು. ಈ ವೇಳೆಗೆ ವೀರಯ್ಯ ಹಾಗೂ ತಿರುಕಪ್ಪ ಇವರೂ ಸಹ ನೆಲಕ್ಕುರುಳಿ ರಕ್ತದ ಮಡುವಿನಲ್ಲಿ ಬಿದ್ದು ತಿರುಕಪ್ಪ ಮಹದೇವಪ್ಪನೊಂದಿಗೆ ವೀರ ಸ್ವರ್ಗ ಸೇರಿದರೆ ಹುತಾತ್ಮರಲ್ಲಿ ವೀರಯ್ಯ ಹಿರೇಮಠ ಮಾತ್ರ ಇನ್ನೂ ಜೀವ ಹಿಡಿದುಕೊಂಡಿದ್ದರು.

ಇಷ್ಟಾಗುವ ವೇಳೆಗೆ ಹೊಳೆಕಡೆ ಹೋಗಿದ್ದ ಪೊಲೀಸರು ದೇವಸ್ಥಾನದಲ್ಲಿಯ ಗುಂಡುಗಳ ಸದ್ದು ಕೇಳಿ ದೇವಾಲಯದ ಕಡೆ ಓಡೋಡಿ ಬಂದರು. ಅವರಿಗೂ ನಮ್ಮ ವೀರರಿಗೂ ಕುಸ್ತಿ ಕಾಳಗವೇ ನಡೆಯಿತಾದರೂ ನಮ್ಮವರು ಮಹದೇವಪ್ಪನ ಅಪ್ಪಣೆಯಂತೆ ಅಹಿಂಸಾ ಕಾಳಗವನ್ನು ಮಾಡಿದರು. ನಮ್ಮವರು ಆಕಾಶದತ್ತ ಗುಂಡುಹಾರಿಸುತ್ತ ಹೋರಾಡಬೇಕಾಯಿತು. ಈ ಕಾಳಗದಲ್ಲಿ ಮುದುಕಪ್ಪ ಹಡಪದ ವೀರನಿಗೆ ತೊಡೆಗೆ ಗುಂಡು ಬಡಿದು ರಕ್ತ ಸೋರಹತ್ತಿತ್ತು. ಉಳಿದವರಿಗೂ ಅಲ್ಲಲ್ಲಿ ಗುಂಡುಗಳು ಬಡಿದು ಗಾಯಗಳಿಂದ ಎಲ್ಲರೂ ರಕ್ತಸಿಂಚಿತರಾಗಿದ್ದರೂ, ಪೊಲೀಸರ ಏಳು ಬಂದೂಕುಗಳನ್ನು ಕಸಿದುಕೊಂಡು ಹಣವನ್ನು ಲೂಟಿ ಮಾಡಿಕೊಂಡು ಭಾರತ ಮಾತಾಕಿ ಜೈ ಎನ್ನುತ್ತ ಅಲ್ಲಿಂದ ಓಡಿದರು.

ಹೊಸರಿತ್ತಿಯ ಕಂದಾಯ ಕೇಂದ್ರದಿಂದ ಹೊರಬಂದ ಮೇಲೆ ಕಿತ್ತೂರ ಮಾರ್ಗವಾಗಿ ಓಡುತ್ತಾ ವರದಾ ನದಿಯ ದಂಡೆಯ ಮೇಲೆ ಸಂಗಮೇಶ್ವರ ದೇವಾಲಯದ ಗೊಂದಿ ಎಂಬ ಸ್ಥಳದ ಹಾಳಾದ ಗುಂಡಿಯಲ್ಲಿ ಎಲ್ಲ ಬಂದೂಕುಗಳನ್ನು ಎಸೆದು ಅಲ್ಲಿಂದ ಸಂಗಮೇಶ್ವರ ದೇವಸ್ಥಾನಕ್ಕೆ ಬಂದು ಕೈ ಮುಗಿದು ಕೋಗನೂರು, ಹಾಲಗಿ ಊರುಗಳತ್ತ ಓಡಿ ಕಪ್ಪತ್ತಗುಡ್ಡ ಸೇರಿಕೊಂಡರು.

**ಈ ಘಟನೆಯ ನಂತರ :** ಪರಮಣ್ಣನವರೆ ಮುಂದುವರೆದು ಹೇಳುವಂತೆ, ನಮ್ಮ ಹೋರಾಟದಲ್ಲಿ ಭಾಗಿಯಾದ ಎತ್ತುಗಳನ್ನು ಮತ್ತು ಚಕ್ಕಡಿಯನ್ನು ಸರಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಹಾವೇರಿಗೆ ಒಯ್ದರು. ಅಲ್ಲದೇ

ಹೊಸರಿತ್ತಿ ಲೂಟಿ ಪ್ರಕರಣದಲ್ಲಿ ಮೂರುಜನ ವೀರ ಯೋಧರ ದೇಹಗಳನ್ನು ನೋಡಲು ಸಮೀಪವೂ ಯಾರನ್ನೂ ಬಿಡಲಿಲ್ಲ, ಅವರ ಸಂಬಂಧಿಗಳಿಗೆ, ತಂದೆ–ತಾಯಿ, ಪತ್ನಿ, ಮಕ್ಕಳಿಗೆ, ಸಹೋದರ–ಸಹೋದರಿಯರಿಗೆ ಹುತಾತ್ಮರಾದ ಸುದ್ದಿ ತಿಳಿಸದೇ ಹಾವೇರಿಯಿಂದ ರಾಣೇಬೆನ್ನೂರಿಗೆ ಹೊಗುವ ಹೆದ್ದಾರಿಯ ಪೂರ್ವಕ್ಕೆ ಇರುವ ಸ್ಮಶಾನದಲ್ಲಿ ಬ್ರಿಟಿಷ್ ಸರಕಾರದ ಗುಲಾಮಗಿರಿಯ ನೌಕರರು, ಪೊಲೀಸ್ ಸಿಬ್ಬಂದಿಯವರು ದಿಕ್ಕಿಲ್ಲದವರ ಹೆಣಗಳನ್ನೂ ಹೂಳುವಂತೆ ಮೂರುಜನ ಹುತಾತ್ಮರನ್ನು ಒಂದೆ ತಗ್ಗಿನಲ್ಲಿ ಹೂಳಿಬಿಟ್ಟರು. ಈ ದೃಶ್ಯವನ್ನು ಅಲ್ಲಿಯೇ ಸ್ವಲ್ಪ ದೂರದಲ್ಲಿ ಕುಳಿತು ನಮ್ಮ ಸ್ವಾತಂತ್ರ್ಯ ಹೋರಾಟದ ಸಿ.ಐ.ಡಿ ಕೆಲಸ ಮಾಡುತ್ತ ಹಗಲಿನಲ್ಲಿ ಪೊಲೀಸರೊಂದಿಗಿದ್ದು ರಾತ್ರಿ ನಮ್ಮೊಂದಿಗೆ ಇರುತ್ತಿದ್ದ ತೋಟದ ಯಲ್ಲಾಪುರದ ನಿಂಗನಗೌಡರು ಮತ್ತು ಹಾವೇರಿಯ ಕ್ರಾಂತಿಕಾರಿ ದೇಶಭಕ್ತ ಪಂಚಪ್ಪ ಒಳಸಂಗದ ಇರ್ವರೂ ಆ ಎಲ್ಲ ಘಟನೆಯನ್ನೂ ಕಣ್ಣೀರಿಡುತ್ತ ನೊಡುತ್ತಿರುವುದನ್ನು ಕಂಡು ಅವರನ್ನೂ ಬಂಧಿಸಿ ಜೈಲಿಗೆ ಕಳಿಸಲಾಯಿತು. ಎಲ್ಲ ಘಟನೆಗಳನ್ನು ಎಲ್ಲ ಸ್ವಾತಂತ್ರ್ಯ ಹೋರಾಟಗಾರರಿಗೆ ತಿಳಿಸಲಾಯಿತು ಎಂಬುದನ್ನು ಚಳುವಳಿಕಾರ ಪರಮಣ್ಣ ಹರಕಂಗಿಯವರು ನೋವಿನಿಂದ ಹಾಗೂ ಹೆಮ್ಮೆಯಿಂದ ಹೇಳುತ್ತಾರೆ.

## ಜಿಲ್ಲೆಯ ನೆರೆಯ ತಾಲೂಕುಗಳಿಂದ ಬಂದು ಹೊಸರಿತ್ತಿಯಲ್ಲಿ ಹುತಾತ್ಮರಾದ ಸ್ವಾತಂತ್ರ್ಯವೀರರು

ಹೊಸರಿತ್ತಿಯ ಕಂದಾಯ ಕೇಂದ್ರದಲ್ಲಿ ಹುತಾತ್ಮರಾದ ಮೂರು ಜನರಲ್ಲಿ ವೀರಯ್ಯ ಹಿರೇಮಠ ಹಾಗೂ ತಿರುಕಪ್ಪ ಮಡಿವಾಳರ ಇವರೀರ್ವರೂ ಹಾವೇರಿ ಜಿಲ್ಲೆಯವರಲ್ಲ. ಸ್ವಾತಂತ್ರ್ಯಹೋರಾಟದಲ್ಲಿ ಇಲ್ಲಿಯ ಚಳುವಳಿಗಾರರೊಂದಿಗೆ ಗಡಿ ಜಿಲ್ಲೆ, ತಾಲೂಕುಗಳಿಂದ ಬಂದು ಇಲ್ಲಿಯ ನಾಯಕರ ನೇತೃತ್ವದಲ್ಲಿ ಹಲವು ವಿದಾಯಕ ಕಾರ್ಯಗಳನ್ನು ಮಾಡಿದ ಕೀರ್ತಿಗೆ ಪಾತ್ರರಾಗಿರುವ ಶಿರಹಟ್ಟಿ ತಾಲೂಕಿನ ಕೊಗನೂರಿನ ಗೋಣೆಪ್ಪ ಕಮತದರವರ ತಂಡ. ಆ ಎರಡು ಜನ ಹುತಾತ್ಮ ವೀರರು ಈ ತಂಡದ ಸದಸ್ಯರು. ಆ ತಂಡದ ಹಿನ್ನೆಲೆಯನ್ನು ಗಮನಿಸುವುದಾದರೆ–

ಗಾಂಧೀಜಿ ದೇಶದ ಬಿಡುಗಡೆಗೆ ನೀಡಿದ್ದ ಕರೆಗೆ ಎಚ್ಚೆತ್ತ ಗ್ರಾಮಗಳಲ್ಲಿ ಕೊಗನೂರು ಒಂದು. ಈ ಗ್ರಾಮ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಪುಟ್ಟ ಗ್ರಾಮ. ಆದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ಗ್ರಾಮ ನೀಡಿದ ಕೊಡುಗೆ ಅಪಾರ. ಈ ಚಿಕ್ಕ ಗ್ರಾಮ ಸುಮಾರು ಇಪ್ಪತ್ತು ಜನ ಚಳುವಳಿಗಾರರಿಗೆ ಜನ್ಮ ನೀಡಿದ್ದು ವಿಶೇಷವೇ ಸರಿ. ಈ ಊರಿನವರೇ ಹೊಸರಿತ್ತಿ ಗ್ರಾಮದಲ್ಲಿಯ ವೀರಭದ್ರೇಶ್ವರ ದೇವಾಲಯದಲ್ಲಿ ಮೈಲಾರ ಮಹದೇವಪ್ಪನೊಂದಿಗೆ ವೀರಯ್ಯ ಹಿರೇಮಠ ಮತ್ತು ತಿರುಕಪ್ಪ ಮಡಿವಾಳರೊಂದಿಗೆ ರಕ್ತಾಭಿಷೇಕ ಎರೆದವರು.

ಕೊಗನೂರಿನ ಅಯ್ಯಪ್ಪ ಮತ್ತು ಗುರುಪಾದಮ್ಮ ದಂಪತಿಗಳ ಮೂರು ಜನ ಪುತ್ರರಲ್ಲಿ ವೀರಯ್ಯ ಹಿರೇಮಠ ಕೊನೆಯ ಮಗ. ತಿರುಕಪ್ಪ ಮಡಿವಾಳರ ಇವರ ತಂದೆ–ತಾಯಿ ಯಮುನಪ್ಪ–ಯಮುನವ್ವ ದಂಪತಿಗಳ ಪುತ್ರ. ಇವರೀರ್ವರೂ ಕೊಗನೂರಿನಲ್ಲಿ ಆರನೆಯ ತರಗತಿಯವರೆಗೂ ಓದಿದವರು. ಇವರಲ್ಲಿ ವೀರಯ್ಯ ಮಾತ್ರ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನದ ಮಠದಲ್ಲಿದ್ದು ಮುಲ್ಕಿ ಪರೀಕ್ಷೆ ಪಾಸು ಮಾಡಿಕೊಂಡು ಮರಳಿ ಕೊಗನೂರಿಗೆ ಬಂದವರು. ಇಬ್ಬರೂ ಬಡ ಕುಟುಂಬವಾಗಿದ್ದರಿಂದ ಮನೆಯಲ್ಲಿ ಕೃಷಿ ಕಾಯಕದಲ್ಲಿ ತೊಡಗಿದವರು. ಹೀಗಿರುವಾಗ ದೇಶಾದ್ಯಂತ ಸ್ವಾತಂತ್ರ್ಯ ಸಮರದ ಚಂಡಮಾರುತ ಬೀಸತೊಡಗಿತ್ತು. ಆ ಚಂಡಮಾರುತ ಕೊಗನೂರನ್ನು ತಲುಪಿತು. ಗಾಂಧೀಜಿಯ **'ಮಾಡು ಇಲ್ಲವೇ ಮಡಿ'** ಎಂಬ ಸಂದೇಶ ಇಡೀ ಭಾರತವನ್ನು ಬಡಿದೆಬ್ಬಿಸಿದಂತೆ ಕೊಗನೂರಿನ ಯುವಕರಿಗೆ ಗೋಣೆಪ್ಪ ಕಮತದರಿಂದ ಬಡಿಯತೊಡಗಿತು.

ಗೋಣೆಪ್ಪ ಕಮತದ ಜನಪರ ಹೋರಾಟಗಾರರು. ಕೊಗನೂರಿನ ಯುವಕರಿಗೆಲ್ಲ ನಾಯಕರಾಗಿದ್ದವರು. ಇವರ ತಂಡದಲ್ಲಿ ಇದ್ದ ಪ್ರಮುಖರೆಂದರೆ– ಗುಡ್ಡಪ್ಪ ಡಿಳ್ಳೆಪ್ಪನವರ, ವೀರಯ್ಯ ಹಿರೇಮಠ, ತಿರುಕಪ್ಪ ಮಡಿವಾಳರ, ವೀರಪ್ಪ ಅಂಗಡಿ, ನಿಂಗಪ್ಪ ಕೊರಗುಂದ, ವೀರಭದ್ರಗೌಡ ಪಾಟೀಲ, ಭಗವಂತಪ್ಪ ಭೂದನೂರು, ವಾಸರೆಡ್ಡಿ ಹೊಸಮನಿ, ನಿಸ್ಸೀಮಪ್ಪ ಚಿನ್ನೂರು, ಇಷ್ಟಲಿಂಗಯ್ಯ ಹಿರೇಮಠ, ಮುದ್ದಪ್ಪ ಹಡಪದ, ಬಸವಕುಮಾರ ಶಿಗ್ಲಿ, ಗುರಪ್ಪ ಗೋಧಿ ಹೀಗೆ ಯುವ ಪಡೆ ಗೋಣೆಪ್ಪನ ನೇತೃತ್ವದಲ್ಲಿ ಸ್ವಾತಂತ್ರ್ಯ ಸಮರಕ್ಕೆ ಸಿದ್ಧವಾಯಿತು.

ಈ ಯುವಪಡೆಗೆ ನಾಯಕ ಗೋಣೆಪ್ಪ ಕಮತದ ದೊಡ್ಡಾಟದ ತಾಲೀಮು ನೆಪದಲ್ಲಿ ಊರಿನ ಯುವಕರನ್ನು ಚಾವಡಿಯ ಹತ್ತಿರದ ಮನೆಯಲ್ಲಿ ಸೇರಿಸಿ ದೇಶದ ಸ್ವಾತಂತ್ರ್ಯದ ವಿಚಾರವಾಗಿ ವಿವಿಧ ಭಾಗಗಳಲ್ಲಿ ನಡೆಯುವ ವಿದ್ಯಮಾನಗಳನ್ನು ಯುವಕರಿಗೆ ತಿಳಿಸುತ್ತಿದ್ದರು. ನಾವೆಲ್ಲ ಬಿಳಿಯರನ್ನು ದೇಶದಿಂದ

ಹೊರಹಾಕದಿದ್ದರೆ ನಮ್ಮ ಜನ ಸುಖವಾಗಿರಲಾರರು. ರೈತರು ಸುಧಾರಿಸಲಾರರು, ಕೂಲಿಕಾರರ ಸಮಸ್ಯೆಗಳು ಬಗೆಹರಿಯಲಾರವು. ಇವೆಲ್ಲವುಗಳಿಗೆ ಒಂದೇ ಪರಿಹಾರದ ಮಂತ್ರ **'ಮಾಡು ಇಲ್ಲವೇ ಮಡಿ'**. ದೇಶದ ಸ್ವಾತಂತ್ರ್ಯಕ್ಕಾಗಿ ನಾವು ಏನಾದರೂ ಮಾಡಬೇಕು. ಅದು ನಮ್ಮ ಉದ್ದೇಶವಾಗಬೇಕು, ಆ ಪವಿತ್ರ ಕಾರ್ಯದಲ್ಲಿ ನಾವು ಮಡಿದರೂ ಚಿಂತೆಯಿಲ್ಲ ಎಂಬ ಅವರ ವಾಣಿಗೆ ಯುವಪಡೆ ಸಿದ್ಧವಾಯಿತು. ಅಲ್ಲದೇ, ಮಹದೇವಪ್ಪ ಮೈಲಾರರ ತಂಡದೊಂದಿಗೆ ಸಮರಕ್ಕೆ ಹೆಜ್ಜೆಯಿಟ್ಟ ಕೊಗನೂರಿನ ಎಲ್ಲ ಯುವಪಡೆ ಮಹದೇವಪ್ಪನ ತಂಡದೊಂದಿಗೆ ಸೇರಿತು. ಮಹದೇವಪ್ಪ ಎಲ್ಲ ತರುಣರನ್ನು ಬೆಳಗಿನ ಐದು ಗಂಟೆಗೆ ಎಬ್ಬಿಸಿ ಒಂದೆಡೆ ಸೇರಿಸಿ ದೇಹದಾರ್ಢ್ಯ ದೈಹಿಕ ಶಕ್ತಿ, ನಿಯಮಿತ ವ್ಯಾಯಾಮದ ಪ್ರವೃತ್ತಿ ಬೆಳೆಸಿದನು.

ಇಂತಹ ತಂಡ ಕಟ್ಟಿಕೊಂಡ ಮಹದೇವಪ್ಪ ಮೈಲಾರ ಗದಗ, ಶಿರಹಟ್ಟಿ, ಹಾವೇರಿ, ಮುಂಡರಗಿ, ಹಡಗಲಿ, ಹರಪನಹಳ್ಳಿ, ಸವಣೂರು, ಶಿಗ್ಗಾವ ಮುಂತಾದ ತಾಲೂಕುಗಳಲ್ಲಿ ಸರಕಾರಿ ಕಾಗದ ಪತ್ರ, ಚಾವಡಿ, ರೈಲ್ವೆ ಸ್ಟೇಷನ್‌ಗಳಿಗೆ ಬೆಂಕಿಹಚ್ಚುವ ಕಾರ್ಯ ಭರದಿಂದ ನಡೆಯಿತು. ತಾರು ತಂತಿ ಕತ್ತರಿಸುವುದು, ತಾರು ಕಂಬಗಳನ್ನು ಕೀಳುವುದು ಹೀಗೆ ಮೊದಲಾದ ವಿಧ್ವಂಸಕ ಕಾರ್ಯಗಳನ್ನು ಯಶಸ್ವಿಯಾಗಿ ಮಾಡುತ್ತಿದ್ದ ಬಗ್ಗೆ ತಂಡದ ಸದಸ್ಯರಾದ ದೇವೇಂದ್ರಪ್ಪ ವಿಭೂತಿ ಹಾಗೂ ಪರಮಣ್ಣ ಹರಕ್ಕಂಗಿ, ಫಕ್ಕಿರಯ್ಯ ಕುಲಕರ್ಣಿ ಮುಂತಾದ ಚಳುವಳಿಗಾರರ ಹೇಳಿಕೆಯಿಂದ ಗುರುತಿಸಲಾಗಿದೆ.

ಹೊಸರಿತ್ತಿಯ ಹಫ್ತೆಯನ್ನು ಲೂಟಿ ಮಾಡುವಾಗಿನ ಘಟನೆಯನ್ನು ಈ ಹಿಂದೆ ತಿಳಿಸಿದ ಹಾಗೆ ಪೊಲೀಸನೊಬ್ಬ ಗುಂಡು ಹಾರಿಸಿದ್ದರಿಂದ ಕುಸಿದು ಬಿದ್ದ ಮಹದೇವಪ್ಪನ ಸಹಾಯಕ್ಕೆ ಧಾವಿಸಿದ ತಿರುಕಪ್ಪ ಮಡಿವಾಳರ, ವೀರಯ್ಯ ಹಿರೇಮಠರಿಗೂ ಗುಂಡು ತಗುಲಿದವು. ಉಳಿದ ಸದಸ್ಯರು ತಮ್ಮಲ್ಲಿ ಬಂದೂಕುಗಳಿಂದ ಪೊಲೀಸರ ಮೇಲೆ ಗುಂಡು ಹಾರಿಸಲು ನಿರ್ಧರಿಸಿದಾಗ ಸಾಯುವ ಸ್ಥಿತಿಯಲ್ಲಿದ್ದ ಮಹದೇವಪ್ಪ ಮೈಲಾರ ನಾವು ಅಹಿಂಸಾವಾದಿಗಳು, ನೀವು ಯಾರು ಪೊಲೀಸರ ಮೇಲೆ ಕೈ ಮಾಡಬೇಡಿ. ಇಲ್ಲಿಂದ ತಪ್ಪಿಸಿಕೊಳ್ಳಿ ಈ ಚಳುವಳಿಯನ್ನು ಮುಂದುವರಿಸಿ ಎನ್ನುತ್ತಲೇ ಪ್ರಾಣ ಬಿಡುತ್ತಲೇ ಎಲ್ಲ ಸದಸ್ಯರು ಅಲ್ಲಿಂದ ಹೊರಹೋದ ಬಗ್ಗೆ ತಂಡದ ಸದಸ್ಯರಾದ ದೇವೇಂದ್ರಪ್ಪ ವಿಭೂತಿ ಹಾಗೂ ಪರಮಣ್ಣ ಹರಕಂಗಿ ಅಂದಿನ ಭಯಾನಕ ಘಟನೆಗೆ ಸಾಕ್ಷಿಭೂತರಾಗಿದ್ದಾರೆ.



ಈ ಪ್ರಕರಣದಲ್ಲಿ ಕೊಗನೂರಿನ ಯುವಕರ ನಾಯಕ ಗೋಣೆಪ್ಪ ಕಮತದ ಯುವಕರನ್ನು ರಕ್ಷಿಸಿಕೊಳ್ಳಲು ಪೊಲೀಸರ ಬಂದೂಕು ಕಸಿಯಲು ಹೋಗಿ ಬಲಗೈಯ ಬೆರಳುಗಳು ಬಂದೂಕಿನ ಬಾನೆಟ್ ತಾಗಿ ನಾಲ್ಕು ಬೆರಳುಗಳು ತುಂಡರಿಸಿದವು. ಮತ್ತೊಬ್ಬ ಕೊಗನೂರಿನ ಯುವಕ ಹಡಪದ ಮುದಕಪ್ಪ ಸಹ ಸದಸ್ಯರನ್ನು ಕಾಪಾಡಲು ಹೋಗಿ ಅವರ ಸೊಂಟದ ಕೆಳಗಿನ ಹಿಂಭಾಗಕ್ಕೆ ಗುಂಡು ಬಡಿಯಿತು. ಈ ಘಟನೆಯ ನಂತರದಲ್ಲಿ ಕೊಗನೂರಿನ ನಾಯಕ ಗೋಣೆಪ್ಪ ಕಮತ ೧೦ ತಿಂಗಳು ಅಜ್ಞಾತರಾಗಿದ್ದರು. ಆದರೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಬಂಧಿಸಲಾಯಿತು. ಒಂದು ವರ್ಷ ಜೈಲು ಶಿಕ್ಷೆ ೧೦೦ ರೂ. ದಂಡವಾಗಿ ಬುಧಗಾಂವ್‌ನಲ್ಲಿ ಶಿಕ್ಷೆ ಅನುಭವಿಸಿದರು. ಅಲ್ಲದೇ ತಂಡದ ಇತರ ಸದಸ್ಯರು ವಿವಿಧ ರೀತಿಯ ಶಿಕ್ಷೆಗೆ ಒಳಗಾದರು.

ಜಿಲ್ಲೆಯ ಗಡಿಭಾಗದ ತಾಲೂಕಿನ ಕೊಗನೂರಿನ ಯುವಪಡೆ ಸ್ವಾತಂತ್ರ್ಯ ಚಳುವಳಿಯಲ್ಲಿ ಅದ್ಭುತವಾದ ಕಾರ್ಯ ಸಾಧನೆಗೈದ ಮಹನೀಯರೆನಿಸಿದ್ದಾರೆ. ಆದರೆ ಇತ್ತೀಚಿನ ಸರಕಾರ, ಆಡಳಿತ ವ್ಯವಸ್ಥೆ ಅವರನ್ನು, ಅವರ ಕಾರ್ಯಸಾಧನೆಯನ್ನು ಗುರುತಿಸುವ ವಿಚಾರದಲ್ಲಾಗಲೀ ಮತ್ತು ಸದ್ಯದ ಯುವಪಡೆಯ ದೇಶಾಭಿಮಾನವನ್ನು ಗಮನಿಸಿದರೆ,– 'ಹೇಳುವುದಕವರಲ್ಲ ಕೇಳುವುದಕವರಲ್ಲ ಮಾಡಿ ಮಡಿಯುವುದಕವರು' ಎಂಬ ಕವಿವಾಣಿ ಇಂಥ ಸನ್ನಿವೇಶವನ್ನು ನೋಡಿಯೇ ಹೇಳಿದಂತಿದೆ. ಹೀಗೆ ಜಿಲ್ಲೆಯ ಹೋರಾಟದಲ್ಲಿ ಗಡಿ ಜಿಲ್ಲೆಯ ಈ ಚಳುವಳಿಗಾರರ ಹೋರಾಟವನ್ನು ಮರೆಯುವಂತಿಲ್ಲ.

ಈ ಘಟನೆಯಲ್ಲಿ ಮಹದೇವಪ್ಪನ ಸಂಗಡಿಗರ ಹತ್ತಿರ ಬಂದೂಕುಗಳಿದ್ದು ಅವರು ಪ್ರತಿಯಾಗಿ ಪೊಲೀಸರಿಗೆ ಗುಂಡುಹಾರಿಸದೇ ಇರುವುದು, ಕಾರಣ ಮಹದೇವಪ್ಪ ನಾವು ಅಹಿಂಸಾವಾದಿಗಳು ನೀವಾರೂ ಗುಂಡು ಹಾರಿಸಬೇಡಿ ಎನ್ನುತ್ತ ಪ್ರಾಣಬಿಟ್ಟಿದ್ದ. ಹಾಗಾಗಿ ಯಾರೂ ಆಯುಧಗಳನ್ನು ಪ್ರಯೋಗಿಸದೆ ಅಲ್ಲಿಂದ ಹೋದರು. ಈ ಘಟನೆ ಜಿಲ್ಲೆಯ ಚಳುವಳಿಗಾರರ ಹೊಸರಿತ್ತಿ ಘಟನೆ ಅಷ್ಟೇ ಅಲ್ಲಾ ಇಡೀ ಜಿಲ್ಲೆಯಲ್ಲಿ ಈ ರೀತಿಯ ಅಹಿಂಸಾ ನೀತಿಗೆ ಉದಾಹರಣೆ ನಮಗೆ ಸಾಕಷ್ಟು ಸಿಗುತ್ತವೆ.

## ಮಹದೇವಪ್ಪನವರ ತಂಡದ ಪ್ರಮುಖ ಸದಸ್ಯರು

ಮೈಲಾರ ಮಹದೇವಪ್ಪನ ತಂಡದಲ್ಲಿ ೫೦ ರಿಂದ ೬೦ ಜನರಿದ್ದು

ಅವರಲ್ಲಿ ಪ್ರಮುಖರೆಂದರೆ– ನಿಂಗಪ್ಪ ಕೊರಗುಂದ, ಲಿಂಗಣ್ಣ ಮೈಲಾರ, ಗೋಣೆಪ್ಪ ಕಮತದ, ವೀರಯ್ಯ ಹಿರೇಮಠ, ತಿರುಕಪ್ಪ ಮಡಿವಾಳರ, ಫಕ್ಕೀರಪ್ಪ ಕೊರಗುಂದ, ನೀಲಪ್ಪ ದಿಳ್ಳೆಪ್ಪನವರ, ಚನ್ನಪ್ಪ ಕೊರಗುಂದ, ಹಾಲಪ್ಪ ಉಡಚಣ್ಣನವರ, ವೆಂಕಣ್ಣ ವಾಯಿ, ಬಸವಕುಮಾರ ಮುಳಗುಂದಮಠ, ಯಲ್ಲಪ್ಪ ಕನವಳ್ಳಿ, ಹನುಮಣ್ಣ ಜಂಗ್ಲಿ, ರಮಾನಂದ ಮನ್ನಂಗಿ, ಬುಡನಸಾಬ್ ನದಾಪ(ಓಲೇಕಾರ), ಫಕ್ಕೀರಪ್ಪ ತಾವರೆ, ದೇವೇಂದ್ರಪ್ಪ ವಿಭೂತಿ, ಪರಮಣ್ಣ ಹರಕಂಗಿ, ವಿರುಪಣ್ಣ ಹಾವೇರಿ, ಪಂಚಾಕ್ಷರಿ ಒಳಸಂಗದ, ಇನ್ನೂ ಮುಂತಾದವರು.

**ಮಹದೇವಪ್ಪನವರ ತಂಡ ಕ್ಯಾಂಪು ಮಾಡಿದ ಸ್ಥಳಗಳು –** ಮಹದೇವಪ್ಪ ಮೈಲಾರ ಹೊಸರಿತ್ತಿ ಹಾಗೂ ಕೊರಡೂರು ಪ್ರಮುಖ ವಾಸಸ್ಥಳವಾದರೂ ಸಮಯಕ್ಕೆ ತಕ್ಕಂತೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಕೊಗನೂರಿನ ಭೈರವ ದೇವರಗುಡ್ಡ, ಕಲ್ನಾರು ಪೆಳೆಗಳು, ಬಾಲೇಹೊಸೂರಿನ ಹಾಗೂ ಹಾಲಗಿ ಗುಡಿಯ ಹಳ್ಳದ ಕೇದಿಗಿ ಮಟ್ಟಿ, ಅಲ್ಲಿನ ಕಬ್ಬಿನ ತೋಟ, ನೀರಲಗಿ ವರದಾ ನದಿ ದಂಡೆಯ ಗಡ್ಡಿ, ನೆಗಳೂರಿನ ಕಬ್ಬಿನ ತೋಟ, ವಡವಿಗುಡ್ಡ, ತೋಟದ ಯಲ್ಲಾಪರದ ಹೆಗ್ಗೇರಿ ಕೆಳಗಿನ ನಿಂಗನಗೌಡರ ಕಬ್ಬಿನ ತೋಟ, ಕಪ್ಪತ್ತಗುಡ್ಡದ ಗವಿಗಳು ಹಾಗೂ ಹೊಳಲಮ್ಮ ದೇವಿಯ ಗುಡಿ, ಹಾವೇರಿ ಸಮೀಪದ ಶಿವಪುರದ ಈಶ್ವರ ದೇವಾಲಯ. ಇವಲ್ಲದೆ ಒಂದೊಂದು ರಾತ್ರಿ ಅನೇಕ ಜೋಳದ ಹೊಲಗಳಲ್ಲಿ ವಸತಿ ಆಗುತ್ತಿದ್ದರು.

ಹೀಗೆ ಹಾವೇರಿ ಜಿಲ್ಲೆಯ ಹಾವೇರಿ, ಶಿಗ್ಗಾವಿ, ಶಿರಹಟ್ಟಿ, ನೆಗಳೂರು, ಹೊಸರಿತ್ತಿ ಇನ್ನೂ ಮುಂತಾದ ಭಾಗಗಳಲ್ಲಿನ ಗುಡ್ಡ, ತೋಟ, ಕಾಡು, ಗವಿ, ಹೊಲಗಳು ಮಹದೇವಪ್ಪನ ತಂಡದ ಸದಸ್ಯರ ವಸತಿ ಪ್ರದೇಶಗಳು, ಅದರಲ್ಲೂ ಭೈರದೇವರ ಗುಡ್ಡದಲ್ಲಿ ಕಾಡು ಹಂದಿಗಳ ಕಾಟದ ಬಗ್ಗೆ ಪರಮಣ್ಣ ಹರಕ್ಕಂಗಿ, ಹಾಲಯ್ಯ ಕುಲಕರ್ಣಿ ತಾವು ಅನುಭವಿಸಿದ ಅಂದಿನ ಕರಾಳ ಸನ್ನಿವೇಶಗಳನ್ನು ಇಂದು ಹೆಮ್ಮೆಯಿಂದ ಹೇಳುತ್ತಾರೆ. ಸಾಮಾನ್ಯವಾಗಿ ಊರ ಸಮೀಪವಿದ್ದರೆ ಊಟದ ಸಮಸ್ಯೆಯಿರುತ್ತಿರಲಿಲ್ಲ. ಆದರೆ ಒಂದು ಕಾರ್ಯಕ್ರಮ ಮಾಡಿದರೆ ಜನವಸತಿಯಿಂದ ದೂರವಿದ್ದಾಗ (ಭೈರದೇವರ ಗುಡ್ಡ) ಊಟವಿಲ್ಲ ಎಂದು ಹೇಳುವ ಪರಮಣ್ಣ ಒಂದು ರಾತ್ರಿಯ ಹುಗ್ಗಿ(ಸಿಹಿ)ಊಟದ ವಿವರ ಹೇಳಿದ್ದು



ಮನಕುಲುಕುವಂತಿದೆ. ವಿಪರೀತ ಹಸಿವಿನಲ್ಲಿರುವ ಸದಸ್ಯರು ಊಟ ಬಂತು ಎಂಬ ಸಂತೋಷ ಆದರೆ ಊಟದ ಗಂಟನ್ನು ತರುವಾಗ ರಾತ್ರಿಯಿದ್ದರಿಂದ ಕಲ್ಲಿಗೆ ಎಡವಿ ಬಿದ್ದು ಹುಗ್ಗಿ ನೆಲಪಾಲಾಗಿದ್ದು, ನಾವೆಲ್ಲ ಊಟಕ್ಕಾಗಿ ಕಾಯುತ್ತೇವೆ ಎಂಬ ಭಯದಿಂದ ನೆಲದ ಮೇಲಿನ ಹುಗ್ಗಿಯನ್ನು ಬಳೆದುಕೊಂಡು ತಂದದ್ದು, ನಾವೆಲ್ಲರೂ ಹುಗ್ಗಿ ಉಣ್ಣುವುದಕ್ಕಿಂತ ಸೀಪುತ್ತಿದ್ದೇವೆ. ಕಾರಣ ಬಾಯಲ್ಲಿ ಕಲ್ಲು, ಮಣ್ಣು ಬಂದರೆ ಉಗಿದು ಹುಗ್ಗಿ ನುಂಗುತ್ತಿದ್ದೆವು ಎಂದು ಹೇಳುವ ಚಳುವಳಿಗಾರರ ಅಂದಿನ ಆ ಕಾಡು ಜೀವನದ ಕಥೆ, ವ್ಯಥೆ ನಿಜಕ್ಕೂ ರೋಚಕ, ಕರುಣಾಜನಕ ವಾದುದು.

ಹೀಗೆ ಹಾವೇರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಮಹದೇವಪ್ಪನ ನಾಯಕತ್ವದ ತಂಡ ಸ್ವಾತಂತ್ರ್ಯಕ್ಕಾಗಿ ಹಲವು ಭೂಗತ ಕಾರ್ಯಕ್ರಮಗಳನ್ನು ಮಾಡಿ ಕೊನೆಗೆ ನಾಯಕ ಮತ್ತು ಅವರ ಸಂಗಡಿಗರಿಬ್ಬರೂ ಹುತಾತ್ಮರಾಗುವುದರೊಂದಿಗೆ ಗಾಂಧೀಜಿಯ **'ಮಾಡು ಇಲ್ಲವೆ ಮಡಿ'** ಸಂದೇಶವನ್ನು ಸಾರ್ಥಕಗೊಳಿಸಿಕೊಂಡು ಭಾರತೀಯ ಸ್ವಾತಂತ್ರ್ಯ ಚಳುವಳಿಯ ಇತಿಹಾಸದ ಪುಟಗಳಲ್ಲಿ ಮರೆಯಲಾಗದ ಅಧ್ಯಾಯವನ್ನು ಬಿಟ್ಟುಹೋಗಿದ್ದಾರೆ.

**ಮಹದೇವಪ್ಪ ಮೈಲಾರ ಭೂಗತಕಾರ್ಯದ ಯೋಜನೆ ಹೇಗಿರುತ್ತಿತ್ತು;** ಪ್ರತ್ಯಕ್ಷವಾಗಿ ಚಳುವಳಿಯ ಕಾರ್ಯಗಳಲ್ಲಿ ಭಾಗವಹಿಸುವವರು ೫೦ ರಿಂದ ೬೦ ಜನರು ಮಹದೇವನ ತಂಡದಲ್ಲಿದ್ದರೂ ಅವರಲ್ಲಿ ೨೦ ರಿಂದ ೩೦ ಜನ ಭೂಗತರಾಗಿದ್ದರು. ಕೆಲವರು ಆಗಾಗ ಬಂದು ಸೇರಿ ಕೆಲಸ ಪೂರೈಸಿದ ನಂತರ ತಮ್ಮ ಸ್ಥಳಗಳಿಗೆ ಹೋಗಿ ನಿತ್ಯದ ಕಾಯಕಗಳಲ್ಲಿ ತೊಡಗುತ್ತಿದ್ದರು.

ಮಹದೇವಪ್ಪನ ಕಾರ್ಯಗತಿ ಕೋಲ್ಮಿಂಚಿನಂತೆ. ಅದರಲ್ಲಿ ಒಂದು ತೆರನಾದ ಶಿಸ್ತು ಇತ್ತು. ಒಂದೇ ಕಡೆಯಲ್ಲಿ ಅವನೆಂದೂ ಕಾರ್ಯ ಮಾಡುತ್ತಿರಲಿಲ್ಲ. ಒಂದು ಭಾಗದಲ್ಲಿ ಕಾರ್ಯಕ್ರಮ ನಡೆಯಿಸಿ ಪುನಃ ಕೆಲವು ದಿನಗಳ ಮಟ್ಟಿಗೆ ಆ ಕಡೆಗೆ ಅವನು ಹೋಗುತ್ತಿರಲಿಲ್ಲ. ಮರುದಿನ ಬಹು ದೂರಕ್ಕೆ ಹೋಗಿಬಿಡುತ್ತಿದ್ದನು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಯಾರಿಗೂ ಯಾವುದೇ ಹೆಜ್ಜೆ ಗುರುತು ಸಿಗದಹಾಗೆ ಹೋಗುತ್ತಿದ್ದನು. ಅಲ್ಲದೇ ತನ್ನ ಜೊತೆಗಾರರಿಗೂ ತಾವು ಯಾವ ಸ್ಥಳಕ್ಕೆ ಹೊಗುತ್ತೇವೆ ಮತ್ತು ಏನು

ಮಾಡುತ್ತೇವೆ ಎಂಬುದು ಏನು ಗೊತ್ತಿರಲಲ್ಲಿ ಆ ಸ್ಥಳಕ್ಕೆ ಹೋದೊಡನೆಯೇ ಅದಕ್ಕಿಂತ ಸ್ವಲ್ಪ ಸಮಯ ಮೊದಲು ಮಾತ್ರ ಗೊತ್ತಾಗುತ್ತಿತ್ತು. ತಾವು ಹೋದ ಸ್ಥಳದಲ್ಲಿ ಏನು ಮಾಡಬೇಕೋ ಆ ಕಾರ್ಯವು ತುಂಬ ತ್ವರಿತವಾಗಿರುತ್ತಿತ್ತು.

ತನ್ನ ಮುತ್ಸದ್ದಿತನದಿಂದ ತಾವು ಹೋದ ಹಳ್ಳಿಗಳಲ್ಲಿ ಹಳ್ಳಿಗರೆನ್ನೆಲ್ಲ ಸೇರಿಸಿ, ಅವರೆಲ್ಲರ ಎದುರಿನಲ್ಲಿಯೇ ಸರಕಾರಿ ಕಟ್ಟಡ, ದಫ್ತರಗಳ ಹೋಳಿ ಮಾಡುತ್ತಿದ್ದನು. ಮೇಲಾಗಿ ಒಂದೇ ದಿನ ಏಕಕಾಲಕ್ಕೆ ಇಪ್ಪತ್ತು ಮೂವತ್ತು ಮೈಲಿಗಳ ಅಂತರದಲ್ಲಿ ಎರಡು ಸ್ಥಳಗಳಲ್ಲಿ ಕಾರ್ಯಕ್ರಮ ನಡೆಯುತ್ತಿದ್ದವು. ಇದರಿಂದ ಸರಕಾರಕ್ಕೆ ಏಕ ಕಾಲದಲ್ಲಿ ಎರಡು ಕಡೆ ಭೂಗತ ಕಾರ್ಯ ನಡೆದಿವೆ ಎಂದರೆ ಎರಡು ತಂಡಗಳು ಈ ಕಾರ್ಯ ಮಾಡಿರಬೇಕು ಎಂದು ಅಧಿಕಾರಿಗಳು ಯೋಚಿಸುತ್ತಿದ್ದರು.

**ಹೊಸರಿತ್ತಿ ಸಮೀಪದ ಹಾಲಗಿ ಭಾಗದ ಮಹಿಳೆಯರು ಮಾಡಿದ ಸಹಾಯ:** ಚಳುವಳಿ ಸಮಯದಲ್ಲಿ ಮೈಲಾರ ಮಹದೇವಪ್ಪನ ತಂಡ ಹೆಚ್ಚು ಕಾರ್ಯಮಾಡಿದ್ದು ಹೊಸರಿತ್ತಿ, ನೆಗಳೂರು, ಹಾಲಗಿ ಭಾಗಗಳಲ್ಲಿ. ಈ ಸಮಯದಲ್ಲಿ ಆ ಭಾಗದ ಹಳ್ಳಿಗರು ಚಳುವಳಿಗಾರರಿಗೆ ಊಟ–ಉಪಹಾರದ ಸಹಾಯ ಮಾಡಿದ್ದು ವಿಶೇಷವೇ. ಆದರೆ ಹಾಲಗಿ ಗ್ರಾಮದ ಮಹಿಳೆಯರು ಮಾತ್ರ ಇದಕ್ಕೂ ವಿಶೇಷವಾದ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಆ ಊರಿನ ಮಹಿಳೆಯರು ತಮ್ಮ ತಮ್ಮ ಜಮೀನುಗಳ(ಹೊಲದ) ಕೆಲಸಕ್ಕೆ ಹೋಗುವಾಗ ತಾವು ಒಯ್ಯುವ ಊಟವನ್ನು ತಮಗೆ ಮಾತ್ರ ತೆಗೆದುಕೊಂಡು ಹೋಗದೆ ತಮ್ಮ ತಮ್ಮ ಮನೆಯ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಹೆಚ್ಚು ಹೆಚ್ಚು ಊಟವನ್ನು ತೆಗೆದುಕೊಂಡು ಹೋಗುತ್ತಿದ್ದರು. ಕಾರಣ ತಮ್ಮ ಹೊಲದ ಬದಿಯಲ್ಲಿ ಊಟವಿಟ್ಟು ತಮ್ಮ ಕೆಲಸ ತಾವು ಮಾಡುತ್ತಿದ್ದರೆ, ಯಾರಾದರೂ ಚಳುವಳಿಗಾರರು ಬಂದರೆ, ಅವರಿಗೆ ಊಟ ಕೊಟ್ಟು ಸಹಾಯ ಮಾಡುತ್ತಿದ್ದರು. ಚಳುವಳಿಗಾರರಿಗೂ ವಿಷಯ ಗೊತ್ತಿದ್ದು ಹಾಲಗಿಯವರ ಹೊಲಗಳೆಂದರೆ, ಊಟದ ಕಷ್ಟವಿಲ್ಲ ಎನ್ನುವುದನ್ನು ಅರಿತುಕೊಂಡಿದ್ದರು. ಅಷ್ಟರಮಟ್ಟಿಗೆ ಹಾಲಗಿಯ ಜನತೆ ಚಳುವಳಿಗಾರರಿಗೆ ಊಟ ನೀಡಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ ಎಂದು ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿ ಸಂದರ್ಶನದಲ್ಲಿ ಅಭಿಮಾನದಿಂದ ಹೇಳುತ್ತಾರೆ.



**ಉಡ್ಡೊಟ್ಟಿ ಮತ್ತು ಮರಡಿ ಲಮಾಣಿಗಳ ತಾಂಡಗಳ ಜನತೆಯ ಸಹಾಯ:** ಹೊಸೊರಿತ್ತಿಯ ಚಾವಡಿ ಸುಟ್ಟ ನಂತರ ಈ ತಂಡ ಕಪ್ಪತಗುಡ್ಡ ಸೇರಿತು. ಹೊಸರಿತ್ತಿಯಲ್ಲಿ ಬೆಳಗಿನ ಉಪಹಾರ ಮಾಡಿದ್ದೆ ಪುನಃ ಬೆಳಗಾದರೂ ಯಾರಿಗೂ ಊಟವಿರಲಿಲ್ಲ. ಅಲ್ಲದೇ ಚಾವಡಿ ಸುಟ್ಟು ಬಂದಿದ್ದರಿಂದ ಯಾರು ಕಾಡು ಬಿಟ್ಟು ಬರುವಹಾಗಿರಲಿಲ್ಲ. ಇಂತಹ ಸಮಯದಲ್ಲಿ ಆ ಗುಡ್ಡಕ್ಕೆ ಹತ್ತಿರದಲ್ಲಿ ಇರುವ ಉಡ್ಡೊಟ್ಟಿ ಮತ್ತು ಮರಡಿ ಲಮಾಣಿಗಳ ತಾಂಡಗಳಿದ್ದವು. ವಿಶೇಷವೆಂದರೆ ಮಹದೇವಪ್ಪ ಮೈಲಾರ ಮತ್ತು ವೆಂಕಣ್ಣ ವಾಯಿ ಇವರುಗಳಿಗೆ ಆ ತಾಂಡಾಗಳ ಮುಖ್ಯಸ್ಥರ ಪರಿಚಯವಿತ್ತು. ಅವರಿಬ್ಬಿರು ನೀವು ಯಾರೂ ಬರಬೇಡಿ ಆ ತಾಂಡಗಳಿಗೆ ಹೋಗಿ ನಿಮಗೆಲ್ಲರಿಗೂ ಏನಾದರೂ ಊಟದ ವ್ಯವಸ್ಥೆ ಮಾಡಿಕೊಂಡು ಬರುತ್ತೇವೆ ಎಂದು ಹೇಳಿಹೋದರು. ಆದರೆ ಅವರು ಹೋದ ನಂತರ ವಿಪರೀತ ಮಳೆ ಸುರಿಯಲು ಪ್ರಾರಂಭಿಸಿತು, ರಾತ್ರಿ ಎಷ್ಟು ಹೊತ್ತಾದರೂ ಬಿಡುತ್ತಿಲ್ಲ. ಸುಮಾರು ಮೂರು ಗಂಟೆಯ ಸಮಯವಿರಬೇಕು ಲಂಬಾಣಿ ನಾಯಕರು ಊಟ ತಂದರು. ಅಲ್ಲದೇ ಅವರು ಕುಡಿಯಲು ಎರಡು ಬಿಂದಗಿ ನೀರನ್ನು ತಂದಿದ್ದರು. ಇದು ಮಹದೇವಪ್ಪ ಎಲ್ಲಿ ಹೋದರೂ ಈ ತರಹದಲ್ಲಿ ಜನರನ್ನು ಸೆಳೆದುಕೊಂಡಿದ್ದ ಅಂತಹ ವ್ಯಕ್ತಿತ್ವ ಮಹದೇವಪ್ಪನದು.

ಆದರೆ ಕಪ್ಪತಗುಡ್ಡದಲ್ಲಿ ರಾತ್ರಿ ಕಳೆಯುವುದೇ ದೊಡ್ಡ ಕಷ್ಟ ಕಾರಣ ಕಾಡುಹಂದಿಗಳ ಕಾಟ ಒಂದಡೆಯಾದರೆ ಅಂಬಾರ ಉಣ್ಣೆಗಳ ಕಾಟ ಬಹಳವಾಗಿರುತ್ತಿತ್ತು. ಬಹುಶಃ ಇವೆರೆಡರ ಅನುಭವ ಅನುಭವಿಸಿದವರಿಗೆ ಗೊತ್ತು. ಇದು ನಮ್ಮ ಕಥೆಯಾದರೆ ನಾಯಕ ಮಹದೇವಪ್ಪ ಮೈಲಾರ ಇದ್ದ ಮೂರು ದಿನಗಳಲ್ಲಿ ಮಲಗದೇ ರಾತ್ರಿ–ಹಗಲು ಎನ್ನದೇ ಬೇರೆ ಬೇರೆ ಊರುಗಳ ಸಂಪರ್ಕ ಪಡೆದು ಎಲ್ಲಿ ಎಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಬೇಕೆಂಬುದನ್ನು ವಿಚಾರಿಸಿಕೊಳ್ಳುತ್ತಿದ್ದ ಅವನ ಬಿಡುವಿಲ್ಲದ ಕಾರ್ಯ ಎಂಥವರಿಗೂ ಆಶ್ಚರ್ಯವನ್ನುಂಟು ಮಾಡುವಂತಹದ್ದು ಎಂದು ತಮ್ಮ ನಾಯಕನನ್ನು ಪರಮಣ್ಣ ಹರಕಂಗಿ ನೆನಪಿಸಿಕೊಂಡಿದ್ದಾರೆ.

**ಜಮಿನ್ದಾರನ ಸೇವಕ ದುರಗಪ್ಪ ಹರಿಜನನ ಮಾಡಿದ ಸಹಾಯ:** ಹೊಸರಿತ್ತಿಯ ಈ ತಂಡ ಹಾವನೂರು ಚಾವಡಿಯನ್ನು ಸುಟ್ಟ ನಂತರ ಹೊಸರಿತ್ತಿಯ ಈ ತಂಡ ರಾತ್ರಿಯಿಡೀ ನಡೆದು ಮಧ್ಯರಾತ್ರಿ ವೇಳೆಗೆ ಸೆಣಬಿನ ಹೊಲವೊಂದಕ್ಕೆ

ಸೇರಿದರು. ಬೆಳಗ್ಗೆ ಏಳುತ್ತಲೆ ಮತ್ತೊಂದು ಸಂಕಟ ಎದುರಾಗಿತ್ತು. ಕಾರಣ ರಾತ್ರಿ ಅವರು ಉಳಿದುಕೊಂಡ ಸೆಣಬಿನ ಹೊಲ ಗಳಗನಾಥದ ಜಮಿನ್ದಾರರಿಗೆ ಸೇರಿದ್ದು, ಅವರು ಆಂಗ್ಲ ಸರಕಾರದ ಪರವಾಗಿದ್ದವರು. ಈಗ ಗೊತ್ತಾದ ಮೇಲೆ ಹೊರಹೋಗುವಂತಿಲ್ಲ, ಕಾರಣ ಹೊರ ಜಗತ್ತಿಗೆ ಸಧ್ಯಕ್ಕಂತೂ ಕಾಣುವ ಹಾಗಿರಲಿಲ್ಲ, ಏನೇ ಇದ್ದರೂ ರಾತ್ರಿ ವೇಳೆ ತಾವು ಹೋಗಬಹುದಿತ್ತು. ನೊಡೋಣ ಆಗುವುದು ಆಗಲಿ ಎಂದುಕೊಂಡು ಎಲ್ಲರೂ ಅಲ್ಲಿಯೇ ಇರುವ ಪೇರಲ ಹಣ್ಣುಗಳನ್ನು ತಿಂದು ಮುಗಿಸುವುದರಲ್ಲಿ, ಸಾಯಂಕಾಲ ಗಳಗನಾಥದ ಜಮಿನ್ದಾರ ನಾಲ್ಕಾರು ಸ್ನೇಹಿತರೊಂದಿಗೆ ಸೇರಿ ತನ್ನ ಸಹಾಯಕ **ಹರಿಜನರ** ದುರುಗಪ್ಪನೊಂದಿಗೆ ಅದೇ ತೋಟಕ್ಕೆ ಬಂದೇಬಿಟ್ಟರು. ಬಂದವರು ದುರುಗಪ್ಪನನ್ನು ಕುರಿತು ಎಲ್ಲಡೆ ಒಮ್ಮೆ ಅಡ್ಡಾಡಿಕೊಂಡು ಬಂದುಬಿಡು ಎಂದು ತಮ್ಮ ಉಳಿದ ಸಂಗಡಿಗರೊಂದಿಗೆ ಮಾತನಾಡುತ್ತಾ ನಿಂತರು. ತೋಟವನ್ನು ಸುತ್ತುತ್ತಾ ಇವರತ್ತ ಬಂದೇ ಬಿಟ್ಟ ದುರುಗಪ್ಪ, ಇವರ ತಂಡದ ಹನುಮಣ್ಣ ಜಂಗಲಿಯವರಿಗೆ ದುರುಗಪ್ಪ ಪರಿಚಯಸ್ಥ, ಹಾಗಾಗಿ ಕೈ ಸನ್ನೆಯಿಂದಲೇ ದುರುಗಪ್ಪನನ್ನು ಹತ್ತಿರಕ್ಕೆ ಕರೆದ ಹನುಮಣ್ಣ 'ನೋಡು ದುರುಗಪ್ಪ ನಾವು ಇಲ್ಲಿರುವುದು ಯಾರಿಗೂ ಗೊತ್ತಾಗಬಾರದು, ಮುಖ್ಯವಾಗಿ ನಿಮ್ಮ ಧಣಿಗೂ ಗೊತ್ತಾಗಬಾರದು ಎನ್ನುತ್ತ ಸ್ವಲ್ಪ ಹಣವನ್ನು ಅವನ ಜೇಬಿಗೆ ಇಟ್ಟರು. ನನಗೆ ನಿಮ್ಮ ಹಣ ಬೇಡ, ನಾನು ನೀವಿರುವ ವಿಚಾರವನ್ನು ಯಾರಿಗೂ ಹೇಳುವುದಿಲ್ಲ ಎಂದು ಮಾತು ಕೊಡುತ್ತೇನೆ, ಬೇಕಾದರೆ ನನ್ನ ತಾಯಿಯ ಮೇಲಾಣೆ' ಎಂದು ಪಿಸು ಮಾತಲ್ಲಿಯೇ ಹೇಳಿ ಹೋರಟು ಹೋದನು. ಅವನು ಹೇಳಿದಂತೆ ನಾವು ಇರುವ ವಿಷಯವನ್ನು ಯಾರಿಗೆ ಹೇಳಿದನೋ ಇಲ್ಲವೋ ಗೊತ್ತಿಲ್ಲ, ಆಗ ಅವರ ಧಣಿಗೆ ಮಾತ್ರ ಹೇಳದೇ ನಮ್ಮನ್ನು ಮಾತ್ರ ಕಾಪಾಡಿದ. ನಾವು ಗಮನಿಸಬೇಕಾದ ಅಂಶವೆಂದರೆ, ಅವನು ಅಕ್ಷರ ಜ್ಞಾನಿಯಿಲ್ಲದಿರಬಹುದು, ಆದರೇ ನಾವು ಚಳುವಳಿಕಾರರು ಎಂಬುದು ಮಾತ್ರ ಗೊತ್ತಿತ್ತು ಮತ್ತು ಅವನ ಧಣಿ ಚಳುವಳಿಕಾರರ ವಿರೋಧಿ ಮತ್ತು ಕಾಂಗ್ರೆಸ್ ವಿರೋಧಿಯೆಂಬುದು ಮಾತ್ರ ಅವನಿಗೆ ತಿಳಿದಿತ್ತು. ಅಂತಹ ದುರುಗಪ್ಪ ಕೂಡಾ ನಮ್ಮಂತ ಚಳುವಳಿಕಾರರಿಗೆ ಈ ರೀತಿಯಲ್ಲಿ ಸಹಾಯ ಮಾಡಿದ್ದನ್ನು ಮರೆಯುವಂತಿಲ್ಲ ಎಂಬುದನ್ನು ಪರಮಣ್ಣ ಹರಕಂಗಿಯವರು ನೆನಪಿಸಿಕೊಳ್ಳುತ್ತಾರೆ.

**ಹೊಸರಿತ್ತಿಯಲ್ಲಿಯ ಶ್ರೀ ಗುದ್ದಲೀಶ ಸ್ವಾಮಿಯ ಮಠವು** ಪ್ರಖ್ಯಾತಿಯನ್ನು ಗಳಿಸಿರುವುದನ್ನು ಕೇವಲ ಧಾಮಿಕ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ರಾಷ್ಟ್ರೀಯ ಹೋರಾಟದಲ್ಲಿಯೂ ಈ ಮಠ ಭೂಗತ ಚಳುವಳಿಕಾರರಿಗೆ ಅನ್ನ ನೀಡಿ ಆಶ್ರಯ ನೀಡಿರುವುದನ್ನು ಅಂದಿನ ಚಳುವಳಿಕಾರರು ಮರೆಯುವುದಿಲ್ಲ. ಅದರಲ್ಲಿಯೂ ಮಹದೇವಪ್ಪ ಮೈಲಾರ ಇದೇ ಮಠದಲ್ಲಿ ಸುಮಾರು ದಿನಗಳ ಕಾಲ ಆಶ್ರಯ ಪಡೆದಿರುವುದನ್ನು ಮಹದೇವಪ್ಪನ ಸಹಪಾಠಿಗಳು ಹೆಮ್ಮೆಯಿಂದ ಹೇಳುತ್ತಾರೆ. ಅಂದರೆ ಹೊಸರಿತ್ತಿಯ ಈ ಮಠದ ಪೂಜ್ಯರೂ ಸಹ ಪರೋಕ್ಷವಾಗಿ ಚಳುವಳಿಯಲ್ಲಿ ತಮ್ಮತನವನ್ನು ಪ್ರದರ್ಶಿಸಿದ್ದಾರೆ.

**ಮಹದೇವಪ್ಪ ಮೈಲಾರ ಕಂದಾಯ ಕೇಂದ್ರಗಳಲ್ಲಿ ಲೂಟಿ ಮಾಡುತ್ತಿದ್ದ ಹಣವನ್ನು ಏನು ಮಾಡುತ್ತಿದ್ದ** ? ಎಂಬ ಈ ಪ್ರಶ್ನೆಗಳನ್ನು ಅವರೊಂದಿಗೆ ಹಲವು ವಿದಾಯಕ ಕಾರ್ಯಗಳಲ್ಲಿ ಭಾಗಿಯಾಗಿ ಮತ್ತು ಜೈಲುವಾಸ ಅನುಭವಿಸಿದ ನೇಗಳೂರಿನ ಮರಮಣ್ಣ ಹರಕ್ಕಂಗಿ ಮತ್ತು ದೇವೇಂದ್ರಪ್ಪ ವಿಭೂತಿ ಎಂಬ ಚಳುವಳಿಕಾರರನ್ನು ಕೇಳಿದಾಗ ಸಿಗುವ ಉತ್ತರ ಯಾರಿಂದ ಆ ಹಣವನ್ನು ಬಲತ್ಕಾರವಾಗಿ, ತೊಂದರೆ ಕೊಟ್ಟು ಗೌಡ, ಶಾನಭೋಗರು ವಸೂಲಿ ಮಾಡಿರುತ್ತಿದ್ದರೊ ಆ ರೈತರಿಗೆ ಮಹದೇವಪ್ಪನ ಸಂಗಡಿಗರು ಆ ಹಣವನ್ನು ಮುಟ್ಟಿಸುತ್ತಿದ್ದರು ಎಂಬ ಮಾತುಗಳು ಕೇಳಿಬರುತ್ತವೆ. ಇದಕ್ಕೇ ಪೂರಕವಾಗಿ ಮಹದೇವಪ್ಪ ಹುತಾತ್ಮನಾಗುವ ನಾಲ್ಕು ದಿನಗಳ ಮೊದಲು ಹಾವೇರಿಯಲ್ಲಿ ತನಗೆ ಆರ್ಥಿಕವಾಗಿ ತುಂಬ ಕಷ್ಟವಿದೆ ಎಂದು ತನ್ನ ಗುರುಗಳು ಹಾಗೂ ಹಾವೇರಿ ಭಾಗದಲ್ಲಿ ಚಲೇಜಾವ್ ಚಳುವಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಾಲ್ಕು ತಂಡಗಳಿಗೆ ಚಳುವಳಿಯ ರೂಪುರೇಷೆಗಳನ್ನು ತಿಳಿಸುತ್ತಿದ್ದ ಮತ್ತು ಆರ್ಥಿಕವಾಗಿ ಸಹಾಯವಮಾಡುತ್ತಿದ್ದ ಕೆ. ಎಫ್. ಪಾಟೀಲರೊಂದಿಗೆ ಐದುನೂರುಗಳನ್ನು ಇಸಿದುಕೊಂಡು ಹೊಗಲು ಹೊಸರಿತ್ತಿಯಿಂದ ಹಾವೇರಿಗೆ ಬಂದದ್ದು ಮಹದೇವಪ್ಪನ ಆರ್ಥಿಕಸ್ಥಿತಿಯನ್ನು ತೋರಿಸಿಕೊಡುತ್ತದೆ.

ಇದಕ್ಕೆ ಉದಾರಣೆಯೆಂಬಂತೆ ಒಂದು ಘಟನೆ ಹಾವೇರಿ ತಾಲೂಕಿನ **ಮರೋಳ** ಎಂಬ ಗ್ರಾಮದಲ್ಲಿ ನಡೆಯಿತು. ಮರೋಳದಲ್ಲಿ ಮಹದೇವಪ್ಪ ಮೈಲಾರ ಹಫ್ತೆಯ ಹಣವನ್ನು ಲೂಟಿ ಮಾಡಿದಾಗ ಗೌಡರು ಹೆದರಿ ತಮ್ಮ ಸ್ವಂತದ ಹಣವನ್ನು ಕೊಟ್ಟರಂತೆ, ಅದು ಹಿಂದಿನಿಂದ ಮಹದೇವಪ್ಪನಿಗೆ ನಿಜಾ ಗೊತ್ತಾಗಿ ತಾನೇ ಸ್ವತಃ **ಆ ಊರ ಗೌಡರ ಮನೆಗೆ ಹೋಗಿ ಅವರ ಹಣವನ್ನು ಊರ ಜನರನ್ನು ಸೇರಿಸಿ ಊರವರ ಎದುರಿಗೆ ಲೆಕ್ಕಮಾಡಿ ಊರ ಗೌಡರಿಗೆ**

**ಅವರ ಹಣವನ್ನು ಮುಟ್ಟಿಸಿದಾಗ,** ಇಲ್ಲಿಯವರೆಗೂ ಕೆಟ್ಟದಾಗಿ ಕಾಣುತ್ತಿದ್ದ ಊರ ಗೌಡರು ಮಹದೇವಪ್ಪನ ಈ ಕಾರ್ಯದಿಂದ ಕೃತಜ್ಞತೆಯಿಂದ ಕೈ ಮುಗಿದು ಮಹದೇವಪ್ಪನಿಗೆ ಅವರು ಜೈ ಕಾರಹಾಕಿದ್ದಲ್ಲದೇ, ತಾವು ರಾಷ್ಟ್ರೀಯ ಹೋರಾಟದಲ್ಲಿ ಕೈ ಜೋಡಿಸುವುದಾಗಿ ಊರ ಗೌಡರ ಹೇಳಿಕೆ ಮಹದೇವಪ್ಪನ ಸತ್ಯ ಹಾಗೂ ಉದ್ದೇಶ ಹೇಗಿದ್ದವೆಂಬುದನ್ನು ಅರಿಯಬಹುದು.

ಚಲೇಜಾವ್ ಚಳುವಳಿಯನ್ನು ಯಶಸ್ವಿಯಾಗಿ ನಡೆಸಿದ್ದರಲ್ಲಿ ಹಳೆಯ ಧಾರವಾಡ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಗಳು ಕರ್ನಾಟಕದಲ್ಲಿಯೇ ಹೆಚ್ಚು ಪ್ರಭಾವಶಾಲಿಯಾಗಿ ಕಾರ್ಯ ನಿರ್ವಹಿಸಿದ್ದವು. ಅಂದಿನ ಜೈಲು ಪ್ರಕರಣಗಳು, ವಿಧ್ವಂಸಕ ಪ್ರಕರಣಗಳು, ಲೂಟಿ ಪ್ರಕರಣಗಳು, ಲಾಠಿ ಪ್ರಕರಣಗಳು, ನ್ಯಾಯಾಲಯದಲ್ಲಿ ಶಿಕ್ಷೆಯ ಪ್ರಕರಣಗಳು ಇವೆಲ್ಲವುಗಳ ದೃಷ್ಟಿಯಿಂದಲೂ ಹಾವೇರಿ ಸೇರಿದಂತೆ ಈ ಎರಡು ಜಿಲ್ಲೆಗಳಲ್ಲಿ ಹೆಚ್ಚು ಪ್ರಕರಣಗಳು ಆಗಿರುವುದನ್ನು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

* ಹಾವೇರಿಯಲ್ಲಿ ಎರಡು ಬಾರಿ ಲಾಠಿಚಾರ್ಜ್ ನಡೆದು ೮ ಜನ ಗಾಯಗೊಂಡರು. * ಟೆಲಿಗ್ರಾಫ್ ತಂತಿಗಳ ಕತ್ತರಿಸಿದ ಪ್ರಕರಣಗಳು ೩೯. * ಅಂಚೆ ಕಛೇರಿಗಳನ್ನು ಲೂಟಿ ಮಾಡಿದ ಪ್ರಕರಣಗಳು ೯. * ಅಂಚೆಚೀಲ ಕಸಿದುಕೊಂಡ ಪ್ರಕರಣಗಳು ೨೯. * ಗ್ರಾಮಗಳ ದಾಖಲೆಗಳನ್ನು ಹಾಳು ಮಾಡಿದ ಪ್ರಕರರ್ಣಗಳು ೬೨. * ವಿಶ್ರಾಂತಿಗೃಹಗಳ ಮೇಲೆ ಧಾಳಿ ಮಾಡಿದ ಪ್ರಕರಣಗಳು ೯ * ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮತ್ತು ಮುತ್ತಿಗೆ ಹಾಕಿದ ಪ್ರಕರಣಗಳು ೧೮. * ಚಾವಡಿ ಮೊದಲಾದ ಸರಕಾರಿ ಆಸ್ತಿ ಹಾನಿ ಮಾಡಿದ ಪ್ರಕರಣಗಳು ೬೯. ಈ ಎಲ್ಲಾ ಅಂಕಿಅಂಶಗಳು ಅಂದಿನ ಚಳುವಳಿಗಾರರ ಕಾರ್ಯದ ಕುರುಹುಗಳಾಗಿವೆ.

**ಚಳುವಳಿಕಾರ ಪರಮಣ್ಣ ಹರಕಂಗಿಯವರು, ದೇವೇಂದ್ರಪ್ಪ ವಿಭೂತಿ, ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿ ಹಾಗೂ ನಾಗವ್ವ ರಾಮಣ್ಣ ಉಂಡೇರ ಈ ಚಳುವಳಿಕಾರರು:** ೨೦೧೪–೧೫ರಲ್ಲಿ ಅವರ ಒಡನಾಟವಿದ್ದು, ಅಂದು ನಮ್ಮೊಂದಿಗಿದ್ದ ಹಾವೇರಿ ಜಿಲ್ಲೆಯ ೧೯ ಚಳುವಳಿಕಾರರನ್ನು ಸಂದರ್ಶಿಸಿದ್ದು ಅವರಲ್ಲಿ ಹೊಸರಿತ್ತಿಗೆ ಹೊಂದಿಕೊಂಡಿರುವ ನೆಗಳೂರು ಮತ್ತು ಹಾಲಗಿಯ ಎರಡೆರಡು ಜನ ಸ್ವಾತಂತ್ರ್ಯ ಹೋರಾಟಗಾರರನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ್ದೇನೆ.



**ಪರಮಣ್ಣ ಲಿಂಗನಗೌಡ ಹರಕಂಗಿ :** ಹೊಸರಿತ್ತಿ ಸಮಿಪದ ನೆಗಳೂರು, ತಾ॥ ಜಿ॥ ಹಾವೇರಿ

ಹಾವೇರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ತಾವು ಮಾಡಿದ ಘಟನೆಗಳನ್ನು ಸ್ಪಷ್ಟವಾಗಿ ಹೇಳುವ ಮತ್ತು ಇನ್ನಿತರ ಚಳುವಳಿಗಾರರಿಗಿಂತ ದೈಹಿಕವಾಗಿ ಆರೋಗ್ಯವಾಗಿರುವ ಸ್ಪಷ್ಟ ಮಾಹಿತಿ ನೀಡುವುದಲ್ಲದೆ ಇನ್ನಿತರ ಚಳುವಳಿಕಾರರ ಬಗ್ಗೆಯೂ ಮಾಹಿತಿ ಕೊಡುವ ಮತ್ತು ಸಂದರ್ಶನದ ಅವಧಿಯಲ್ಲಿ ನೆಗಳೂರಿನ ಸುತ್ತಮುತ್ತಲ ಗ್ರಾಮಗಳಿಗೆ ಬಂದು ಚಳುವಳಿಗಾರರನ್ನು ಭೇಟಿ ಮಾಡಿಸಿದಂಥ ಚಳುವಳಿಗಾರರಲ್ಲಿ ನೆಗಳೂರಿನ ಪರಮಣ್ಣ ಹರಕಂಗಿ. ಇವರು ಹಾವೇರಿಯ ಮೈಲಾರ ಮಹದೇವಪ್ಪ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ (ಇವರು ಟ್ರಸ್ಟ್‌ನ ಸದಸ್ಯರು ಹೌದು) ಜಿಲ್ಲೆಯಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ತಪ್ಪದೆ ಭಾಗವಹಿಸಿ, ಶಾಲಾ ಮಕ್ಕಳು, ಸಾಮಾನ್ಯ ಜನತೆ ಕೇಳುವ ಪ್ರಶ್ನೆಗಳಿಗೆ ಉತ್ತರಿಸಿದವರು.

**ಪ್ರೇರಣೆ :** ಚಳುವಳಿಗೆ ಭಾಗವಹಿಸುವಲ್ಲಿ ಪ್ರಮುಖ ಪ್ರೇರಣೆಯೆಂದರೆ ಹೊಸರಿತ್ತಿಯ ಅಲ್ಲದೆ ಹೊಸರಿತ್ತಿ ಗಾಂಧಿ ಆಶ್ರಮ. ಕೊರಡೂರಿನ ಗ್ರಾಮ ಸೇವಾ ಆಶ್ರಮ. ಹೊಸರಿತ್ತಿ ಜಾತ್ರೆಯಲ್ಲಿಯ ಕವಾಯತ್ತು ಇವರಿಗೆ ಪ್ರೇರಣೆ.

**ಪ್ರಮುಖ ಘಟನೆಗಳು :** ಇವರು ಭಾಗವಹಿಸಿದ ಪ್ರಮುಖ ಘಟನೆಗಳೆಂದರೆ, ಆರಂಭದಲ್ಲಿ ೧೬ ವರ್ಷವಾಗಿದ್ದರಿಂದ, ಚಳುವಳಿಯ ನಾಯಕರುಗಳು ಕೊಡುವ ಪತ್ರಗಳನ್ನು ಅವರು ಹೇಳಿದವರಿಗೆ ಮುಟ್ಟಿಸುವ ಹಾಗೂ ಅವರಿಂದ ಪತ್ರಗಳನ್ನು ಇಸಿದುಕೊಂಡು ಇವರಿಗೆ ಮುಟ್ಟಿಸುವ ಕಾಯಕ, ನಂತರದಲ್ಲಿ ಚಳುವಳಿಕಾರರಿಗೆ ಊಟ, ಉಪಹಾರವನ್ನು ತಂದುಕೊಡುವ ಕಾಯಕ ಮಾಡಿದ ಇವರು, ನಂತರ ಚಳುವಳಿಕಾರರು ಟೆಲಿಫೋನ್ ತಂತಿ ಕೀಳುವ ಮತ್ತು ಕಂಬಗಳನ್ನು ಕೀಳುವ ಕಾರ್ಯದಲ್ಲಿ ಇವರು ಕಂಬವನ್ನು ಹತ್ತಿ ತಂತಿಸುತ್ತಿದ ಕಪ್ಪನ್ನು ಒಡೆಯುವ ಕಾರ್ಯಮಾಡಿದರು. ನಂತರದಲ್ಲಿ ವಿಧ್ವಂಸಕ ಕಾರ್ಯಮಾಡುವ ಸಂದರ್ಭದಲ್ಲಿ ಕಾವಲುಗಾರರನ್ನು ಕಾಯುವ ಕಾಯಕ, ಕಾವಲುಗಾರರು ಆಕಸ್ಮಿಕ ಇವರ ಮೈಮೇಲೆ ಕೈ ಮಾಡಿದರೆ, ಇವರು ಅವರ ಮೇಲೆ ಕೈಮಾಡುವ ಹಾಗಿಲ್ಲ,

ಕಾರಣ ನಾವು ಗಾಂಧೀಜನ, ಅಹಿಂಸೆ ಪಾಲಿಸಬೇಕು ಎಂಬುದು ಮಹದೇವಪ್ಪನ ಆಜ್ಞೆಯಾಗಿತ್ತು. ನಂತರದಲ್ಲಿ ಹಲವು ಚಾವಡಿಗಳನ್ನು ಲೂಟಿಮಾಡಿದ್ದು, ಪೋಸ್ಟ್‌ಗಳನ್ನು ಲೂಟಿ ಮಾಡಿದ್ದು, ರೇಲ್ವೇ ಸ್ಟೇಷನ್ ಲೂಟಿ, ಕಂದಾಯ ಲೂಟಿ ಮಾಡುವುದು, ಕಂದಾಯದ ಕಾಗದ ಪತ್ರಗಳನ್ನು ಸುಡುವುದು ಹೀಗೆ ಹಲವು ಕಾರ್ಯಗಳನ್ನು ಮಾಡಿದರು.

**೧೯೪೨ರ ಚಳುವಳಿ :** ೧೯೪೨ರ ಚಳುವಳಿಯಿಂದ ಪೂರ್ಣಪ್ರಮಾಣದ ಚಳುವಳಿಗಾರನಾಗಿದ್ದ ಬಗ್ಗೆ ಹೇಳುವ ಇವರು ಇಲ್ಲಿಯವರೆಗೂ ಚಳುವಳಿ ಮಾಡುವ ಸಮಯಕ್ಕೆ ಮಾತ್ರ ಹೋಗುತ್ತಿದ್ದು, ಈಗ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೊಸರಿತ್ತಿ, ಯಲಗಚ್ಚು, ನೆಗಳೂರು ಈ ಭಾಗದ ಕಂದಾಯ ಕೇಂದ್ರಗಳಿಗೆ ದಾಳಿ ಮಾಡಿ ದಫ್ತರಗಳನ್ನು ಸುಡಲಾಯಿತು. ನೆಗಳೂರಲ್ಲಿ ಕಂದಾಯ ಅಧಿಕಾರಿಗಳು ಕಂದಾಯ ವಸೂಲಿಗೆ ಬಂದಾಗ ಮಧ್ಯಾಹ್ನ ೨:೩೦ ರಿಂದ ೩ ಘಂಟೆಯ ಅವಧಿಯಲ್ಲಿ ಅವರ ಕಾರಿಗೆ ಬೆಂಕಿಹಚ್ಚಿ ಪರಾರಿಯಾಗಿ ಕಾಡು ಸೇರಿದ ಬಗ್ಗೆ ಹೆಮ್ಮೆಯಿಂದ ಹೇಳುತ್ತಾರೆ.

**ಮೊದಲ ಬಂಧನ :** ಮೈಲಾರ ಮಹದೇವಪ್ಪನ ನಾಯಕತ್ವದಲ್ಲಿ ವಿವಿಧ ರೀತಿಯಲ್ಲಿ ವಿಧ್ವಂಸಕ ಕಾರ್ಯಗಳನ್ನು ಮಾಡುತ್ತಿದ್ದುದರಿಂದ ಪೋಲೀಸರಿಗೆ ಪರಮಣ್ಣ ಹರಕಂಗಿ ಮೇಲೂ ದೂರುಗಳಿದ್ದು, ಇವರನ್ನು ಬಂಧಿಸಲು ನಿರ್ಧರಿಸಿದರು. ಇವರಿಗೂ ಆ ವಿಷಯ ತಿಳಿದು ಮನೆಯಲ್ಲಿ ಮಲಗುವುದನ್ನು ಬಿಟ್ಟು, ತಮ್ಮದೇ ಕಣದಲ್ಲಿ ರಾತ್ರಿಯ ವಾಸ್ತವ್ಯ ಆಗುತ್ತಿದ್ದರು. ಒಂದು ದಿನ ಪೋಲೀಸರು ರಾತ್ರಿ ೨ ಘಂಟೆಯ ಸಮಯದಲ್ಲಿ ಮನೆಗೆ ಹೋಗಿ ತಮ್ಮ ತಂದೆ–ತಾಯಿಯರನ್ನು ಇವರ ಬಗ್ಗೆ ಕೇಳಿದಾಗ, ಅವರು ಹೇಳದ ಕಾರಣ ನಿಮ್ಮ ಮಗನ ಬಗ್ಗೆ ಯಾವ ದೂರುಗಳು ಬಂದಿಲ್ಲ. ಅವನ ಬಗ್ಗೆ ದೂರುಗಳು ಬಂದರೆ ನಾವು ಬಂಧಿಸಬೇಕಾಗುತ್ತದೆ; ಈಗಲೇ ಅವರನ್ನು ಹಾವೇರಿಗೆ ಕರೆದುಕೊಂಡು ಹೋಗಿ, ಅವನಿಂದ ನನ್ನ ತಪ್ಪಿಲ್ಲವೆಂದು ಬರೆಸಿಕೊಂಡು ಬಿಡುತ್ತೇವೆ, ಇಲ್ಲವೆಂದರೆ ಅವನಿಗೆ ಜೈಲು ಖಾಯಂ ಆಗುತ್ತದೆ ಎಂದು ಗುತ್ತಲದ ಫೌಜುದಾರ ಪತ್ರೋಳಿ ನಂಬುವ ರೀತಿಯಲ್ಲಿ ಹೇಳಿದ್ದರಿಂದ ಇವರ ತಾಯಿ ನಂಬಿ ಇವರಿರುವ ಸ್ಥಳಕ್ಕೆ ಕಳುಹಿಸಿಕೊಟ್ಟರು. ಕಣದಲ್ಲಿ ಮಲಗಿದ ಇವರನ್ನು ಪೋಲೀಸರು ಬಂದು ಇವರನ್ನು ಹಾವೇರಿಗೆ ಕರೆದೊಯ್ದರು.



**ದೇಶಭಕ್ತ ಅಧಿಕಾರಿ :** ಹಾವೇರಿಯಲ್ಲಿ ಪೋಲೀಸ್ ಠಾಣೆಯ ಅಧಿಕಾರಿ **'ಲೇ ನೀವೇನು ಚಳುವಳಿ ಮಾಡ್ತೀರಿ ಮಕ್ಕಳಾ ನಾ ಹೇಳಿದ ಹಾಗೆ ಬರೆದುಕೊಟ್ಟು ತಪ್ಪಾಯಿತು ಅಂತಾ ಹೇಳಿ ಮನಿಗೆ ಹೋಗಿ'** ಎಂದಾಗ ಇವರ ಗುಂಪು 'ಇಲ್ಲಾ ನಾವು ಗಾಂಧೀಜಿ ಜನ, ಸುಳ್ಳು ಹೇಳಬಾರದೆಂದು ನಾಯಕರು ಹೇಳಿದ್ದಾರೆ' ಎಂದು ತಾವು ಮಾಡಿದ ಕಾರ್ಯಗಳನ್ನು ಒಪ್ಪಿದರು. ಅನಂತರ ಮಜೀದ್ ಎಂಬ ಅಧಿಕಾರಿ ಎದುರು ಸತ್ಯವನ್ನೇ ಹೇಳಿದರು. ಆ ಮೇಲೆ ಇವರಿಗೆ ಗೊತ್ತಾಗಿದ್ದು ಆ ಅಧಿಕಾರಿಗಳು ಮೈಲಾರ ಮಹದೇವಪ್ಪ ಮತ್ತು ದೇವೇಂದ್ರಪ್ಪ ವಿಭೂತಿ ಸ್ನೇಹಿತರೆಂಬುದು.

**ಶಿಕ್ಷೆ :** ಹಾವೇರಿಯಲ್ಲಿ ಒಂದು ತಿಂಗಳು ಕಳೆದ ನಂತರ ಧಾರವಾಡಕ್ಕೆ ಕಳುಹಿಸಲಾಯಿತು. ಅಲ್ಲಿ ಮತ್ತೆ ವಿಚಾರಣೆಯಾಗಿ ಅಲ್ಲಿಯೂ ಸತ್ಯವನ್ನೇ ಹೇಳಿದ್ದರಿಂದ ದೊಡ್ಡವರಿಗೆ ಐದು ವರ್ಷ ಪರಮಣ್ಣ ಹರಕಂಗಿ ಮತ್ತು ವಿರುಪಣ್ಣ ಹಾವೇರಿ ಇವರಿಗೆ ನ್ಯಾಯಾಧೀಶ ಧಳವಿ ಮೂರು ವರ್ಷಗಳ ಶಿಕ್ಷೆಯನ್ನು ವಿಧಿಸಿದರು. ಮೊದಲು ಧಾರವಾಡದ ಸೆಂಟ್ರಲ್ ಜೈಲಿನಲ್ಲಿ ಎಂಟರಿಂದ ಹತ್ತು ದಿನವಿದ್ದು, ನಂತರ ವಿಜಾಪುರ ಜೈಲಿಗೆ ಕಳಿಸಿದರು. ಅಲ್ಲಿ ಇವರಿಗೆ ರಾಜಕೀಯ ಕೈದಿ ಎಂದು ಪರಿಗಣಿಸದೇ ಕ್ರಿಮಿನಲ್ ಕೈದಿಯೆಂದು ಪರಿಗಣಿಸಿ ಕ್ರಿಮಿನಲ್ ಕೈದಿಗಳ ಕೊಠಡಿಗೆ ಹಾಕಿದರು. ಅಲ್ಲಿ ೮–೮ ಇಟ್ಟಂಗಿಗಳನ್ನು ಹೊರುವ ಕೆಲಸ ಕೊಟ್ಟರು. ನಂತರದಲ್ಲಿ ಒಬ್ಬರೇ ಒಂದೇ ಕೊಠಡಿಯಲ್ಲಿ ಕತ್ತಲೆಯಲ್ಲಿಯೇ ಇರಬೇಕು. ಅದು ನಿಜಕ್ಕೂ ಹುಚ್ಚು ಹತ್ತುವಂತಹ ಪರಿಸರ; ಅಂಥಲ್ಲಿ ಇಡಲಾಗಿ, ದಿನಕ್ಕೆ ಒಂದು ಊಟ ಅದು ಸ್ವಲ್ಪ ಗಂಜಿ ಮಾತ್ರ. ಅಂಥ ಸ್ಥಿತಿಯಲ್ಲಿ ಎರಡು ತಿಂಗಳು ಕಳೆಯುವಂತಾಯಿತು.

**ನಮ್ಮವರಿಂದ ನೆಮ್ಮದಿ ದೊರೆತ್ತಿದ್ದು:** ಜೈಲಿನಲ್ಲಿ ಕ್ರೂರ ರೀತಿಯ ಶಿಕ್ಷೆಯನ್ನು ಅನುಭವಿಸುವ ವೇಳಗೆ ಕೆ. ಎಫ್. ಪಾಟೀಲ್, ಸಂಗೂರು ಕರಿಯಪ್ಪ ಅದೇ ಜೈಲಿಗೆ ಬಂದಾಗ ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಅವರು ಜೈಲಿನಲ್ಲಿಯೇ ಸತ್ಯಾಗ್ರಹ ಆರಂಭಿಸಿದ್ದರಿಂದ ಇವರನ್ನು ರಾಜಕೀಯ ಕೈದಿಯೆಂದು ಪರಿಗಣಿಸಿ ಕೊಠಡಿಯನ್ನು ಬದಲಾಯಿಸಿ ಉಪಕಾರ ಮಾಡಿದಂತಾಯಿತು.

**ಸಹಾಯ :** ಚಳುವಳಿಯ ಸಂದರ್ಭದಲ್ಲಿ ಇವರ ಗುಂಪಿಗೆ ಸಹಾಯಮಾಡಿದ ಗ್ರಾಮಗಳೆಂದರೆ, ಹಾಲಗಿ, ನೆಗಳೂರು, ಹೊಸರಿತ್ತಿ, ಅಂಕಲಿ,

ಕೊಗನೂರ. ಇಲ್ಲಿಯ ಜನತೆ ಮತ್ತು ಶಿರಹಟ್ಟಿ ತಾಲೂಕಿನ ಮೂರಾಡಿ–ಉಡ್ಡೊಟ್ಟಿ ಲಂಬಾಣಿಗರು ಇವರಿಗೆ ಊಟ, ವಸತಿ, ಆಶ್ರಯ ನೀಡಿ ಸಲಹಿದರು ಎಂದು ಹೆಮ್ಮೆಯಿಂದ ಹೇಳುತ್ತಾರೆ.

**ದೇವೇಂದ್ರಪ್ಪ ವಿಭೂತಿ:** ಹೊಸರಿತ್ತಿ ಸಮಿಪದ ನೆಗಳೂರು, ತಾ॥ ಹಾವೇರಿ

೯೬ ವರ್ಷದ ದೇವೇಂದ್ರಪ್ಪ ವಿಭೂತಿ ಮೈಲಾರ ಮಹದೇವಪ್ಪನ ತಂಡದ ಸದಸ್ಯರಾಗಿ ಸೇವೆ ಮಾಡಿದವರು. ಮಹದೇವಪ್ಪನ ಭೂಗತ ಕಾರ್ಯದಲ್ಲಿ **'ಇವರನ್ನು ಬ್ಯಾಡಗಿ ಬಾಂಬ್'** ಎಂದೇ ಕರೆಯಲಾಗುತ್ತಿತ್ತು. ಕಾರಣ ಟಪಾಲು ಲೂಟಿ ಪ್ರಕರಣದಲ್ಲಿ ಬಸ್ಸಿನ, ಪೋಸ್ಟ್ ರನ್ನರ್, ಅಧಿಕಾರಿಗಳ ಕಣ್ಣಿಗೆ ಕಾರದ ಪುಡಿ ಎರಚಿ, ಅವರಿಂದ ಬ್ಯಾಗಗಳನ್ನೂ ಲೂಟಿ ಮಾಡಲು ಅನೂಕೂಲವಾಗುವಂತೆ ಮಾಡುವಲ್ಲಿ ಇವರ ಪಾತ್ರ ಮಹತ್ವದ್ದಾಗಿತ್ತು. ಇವರು ಮಹದೇವಪ್ಪನ ೧೯೪೨ರ ಎಲ್ಲ ಭೂಗತ ಕಾರ್ಯಗಳಲ್ಲಿ ಭಾಗವಹಿಸಿದ ಇವರು ಮಹದೇವಪ್ಪ ಮೈಲಾರರ ತಂಡದಲ್ಲಿ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಮಾಡಿದ ಪ್ರಮುಖ ಕಾರ್ಯಗಳೆಂದರೆ–

* ಫಕ್ಕೀರಪ್ಪ ತಾವರೆ ಮತ್ತು ಲಿಂಬಣ್ಣ ಇವರೊಂದಿಗೆ ಸೇರಿ ೨೦.೧೦.೧೯೪೨ ರಂದು ಕರ್ಜಗಿ ರೇಲ್ವೆ ಸ್ಟೇಷನ್ನಿನಿಂದ ಬರುವ ಟಪಾಲ್ ಲೂಟಿ ಮಾಡಲು ನಿರ್ಧರಿಸಿದರು. ಕರ್ಜಗಿಯಿಂದ ಸ್ಟೇಷನ್‌ವರೆಗೆ ಪೋಸ್ಟನ್ನು ರನ್ನರ್‌ನು ಟಾಂಗಾ ಗಾಡಿಯಲ್ಲಿ ತರುತ್ತಿದ್ದರಿಂದ, ಆ ಅವಕಾಶವನ್ನು ಉಪಯೋಗಿಸಿಕೊಳ್ಳಲು ನಿರ್ಧರಿಸಿ ತಮಗೆ ಅನುಕೂಲವಾಗುವ ಸ್ಥಳ ಆಯ್ಕೆ ಮಾಡಿಕೊಂಡು ಎರಡು ಜನರನ್ನು ಅಲ್ಲಿಯೇ ನಿಲ್ಲಿಸಿದರು. ತಾವು ಸ್ಟೇಷನ್‌ಗೆ ಹೋದರು. ಪೋಸ್ಟ್ ರನ್ನರ್‌ನು ಟಪಾಲುಗಳನ್ನು ತೆಗೆದುಕೊಂಡು ಟಾಂಗಾ ಗಾಡಿಗೆ ತುಂಬುವಾಗ ಇವರು 'ನಾನು ಕರ್ಜಗಿಗೆ ಬರಬೇಕು ಗಾಡಿಯಲ್ಲಿ ಬರಲಾ? ಎಂದು ಕೇಳಿದಾಗ ಪೋಸ್ಟ್ ರನ್ನರ್‌ನು ಕರೆದುಕೊಂಡನು. ಗಾಡಿ ಸ್ನೇಹಿತರಿರುವ ಸ್ಥಳಕ್ಕೆ ಬರುತ್ತಿದ್ದಂತೆ ಅವರು ರಸ್ತೆಗೆ ಅಡ್ಡಲಾಗಿ ನಿಂತರೆ, ಟಾಂಗಾದಲ್ಲಿಯ ರನ್ನರ್‌ನು ದೇವೇಂದ್ರಪ್ಪನನ್ನು ನೋಡುತ್ತಿದ್ದಂತೆಯೇ ರನ್ನರನ ಕಣ್ಣಿಗೆ ಕಾರದ ಪುಡಿ ಎರಚಿ, ಪೋಸ್ಟ್ ಚೀಲ ತೆಗೆದುಕೊಂಡು ಜೋಳದ ಹೊಲದಲ್ಲಿ ಮಾಯವಾದರು.



* ದಿನಾಂಕ ೧೯.೧೦.೧೯೪೨ ರಂದು ಗದಗ ಹಾವೇರಿ ಟಪಾಲು ಬಸ್ಸನ್ನು ಕಲ್ಲಮುಳಗುಂದದ ಹತ್ತಿರ ರಸ್ತೆಗೆ ಕಲ್ಲು, ಕಟ್ಟಿಗೆ ಬಡ್ಡೆಹಾಕಿ ನಿಲ್ಲಿಸಿ ಟಪಾಲು ದೋಚಿ ಜೋಳದ ಹೊಲದಲ್ಲಿ ಓಡಿದರು. ಇಲ್ಲಿಯು ದೇವೇಂದ್ರಪ್ಪ ಡ್ರೈವರ್‌ಗೆ ಕಾರದ ಪುಡಿ ಎರಚಿ ಬಸ್ಸು ನಿಲ್ಲಿಸಿದ್ದರು, ಈ ಕಾರ್ಯದಲ್ಲಿ ವೆಂಕಣ್ಣ ವಾಯಿ, ಯಲ್ಲಪ್ಪ ಕನವಳ್ಳಿ ದೇವೇಂದ್ರಪ್ಪನೊಂದಿಗಿದ್ದು ಯಶಸ್ವಿಯಾಗಲು ಕಾರಣರಾದರು.

* ದಿನನಿತ್ಯ ಗುಡಗೇರಿ ಗ್ರಾಮದ ಟಪಾಲು ರೈಲ್ವೆ ಗಾಡಿಗೆ ಬರುತ್ತಿತ್ತು. ದಿನಾಂಕ ೨೦.೧೦.೧೯೪೨ ರಂದು ಸಂಜೆ ೫ ಗಂಟೆಯ ಸುಮಾರಿಗೆ ದೇವೇಂದ್ರಪ್ಪ ವಿಭೂತಿ, ವೆಂಕಣ್ಣವಾಯಿ ಸ್ಟೇಶನ್ ಹತ್ತಿರ ಜೋಳದ ಹೊಲದಲ್ಲಿದ್ದು, ಪೋಸ್ಟಮನ್‌ನು ಗಾಡಿಯಿಂದ ಚೀಲದೊಂದಿಗೆ ಬರುವಾಗ ಅವನ ಕಣ್ಣಿಗೆ ಕಾರದ ಪುಡಿ ಎರಚಿ ಪೋಸ್ಟ್ ಚೀಲವನ್ನು ಕಸಿದುಕೊಂಡು ಮಾಯವಾದರು.

* ದಿನಾಂಕ ೨೩.೧೦.೧೯೪೨ ರಂದು ಶಿಗ್ಗಿ ಗ್ರಾಮದಿಂದ ಯಲವಿಗಿ ಸ್ಟೇಶನ್ನಿಗೆ ಬೆಳಗ್ಗೆ ೬ ಗಂಟೆಗೆ ಪೋಸ್ಟಮನ್ ಟಪಾಲು ಒಯ್ಯುತ್ತಿರಲು ದೇವೇಂದ್ರಪ್ಪ ವಿಭೂತಿ, ವೆಂಕಣ್ಣ ವಾಯಿ, ಗೋಣೆಪ್ಪ ಕೊಗನೂರು ಸೇರಿ ಮಹದೇವಪ್ಪನ ನಿರ್ದೇಶನದಂತೆ ಇಲ್ಲಿಯೂ ಪೋಸ್ಟಮನ್‌ನ ಕಣ್ಣಿಗೆ ಕಾರದ ಪುಡಿ ಎರಚಿ ಟಪಾಲು ದೋಚಲಾಯಿತು.

* ದಿನಾಂಕ ೨೩.೧೦.೧೯೪೨ ರಲ್ಲಿ ಮಹದೇವಪ್ಪನ ಗುಂಪು ೧೪ ರಿಂದ ೧೫ ಜನರ ತಂಡವಾಗಿತ್ತು. ಸಂಗೂರ ಕರಿಯಪ್ಪ, ಮೆಣಸಿನಾಳದ ತಿಮ್ಮನಗೌಡರೊಂದಿಗೆ ತುಮ್ಮಿನಕಟ್ಟಿ, ಕುಡಪಲಿ, ಕುಪ್ಪೇಲೂರು, ಸೂಡಂಬಿ, ಹಿರೇಅಣಜಿ ಭಾಗದ ಯುವಕರ ಪಡೆಯಿದ್ದು ಒಟ್ಟಾರೆ ೨೨ ಜನರಾದರು. ಇವರೆಲ್ಲರ ತಂಡ ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಪೋಸ್ಟ್ ಲೂಟಿ ಮಾಡಬೇಕೆಂದು ನಿರ್ಧರಿಸಿದರು.

೨೪.೧೦.೧೯೪೨ ರಂದು ಮಹದೇವಪ್ಪ ತನ್ನ ತಂಡದ ಸದಸ್ಯರಾದ ದೇವೇಂದ್ರಪ್ಪ ವಿಭೂತಿ, ವೆಂಕಣ್ಣ ವಾಯಿ, ಫಕ್ಕೀರಪ್ಪ ಗೋಣೆಪ್ಪ ಈ ಮೂರು ಜನ ಹರಿಹರಕ್ಕೆ ಹೋಗಿ ಬಸ್ಸಿನಲ್ಲಿ ತಮ್ಮ ತಂಡ ನಿಶ್ಚಿಯಿಸಿದ ನೀಲಗುಂದ (ಹರಪನಹಳ್ಳಿ ರೋಡ) ಗ್ರಾಮದ ಸಮೀಪದ ಸ್ಥಳಕ್ಕೆ ಬಸ್ಸು ಬಂದಾಗ ನಿಲ್ಲಿಸುವ ಕಾರ್ಯವನ್ನು ಇವರಿಗೆ ವಹಿಸಿದರು.

೨೫.೧೦.೧೯೪೨ ರಂದು ಹರಿಹರದಲ್ಲಿ ಬೆಳಗ್ಗೆ ೮ ಗಂಟೆಯ ಬಸ್ಸಿನಲ್ಲಿ ಟಪಾಲು ಇಡುವ ಹತ್ತಿರವೇ ಮೂರು ಜನ ಕುಳಿತರು. ನಿಗದಿಪಡಿಸಿದ ಸ್ಥಳಕ್ಕೆ ಬಸ್ಸು ಬಂದಾಗ ಆಗಲೇ ಅವರು ರಸ್ತೆಗೆ ಕಟ್ಟಿಗೆ ಬಡ್ಡೆಗಳನ್ನು ಹಾಕಿದ್ದರು. ಟಪಾಲು ಹತ್ತಿರ ಕುಳಿತ್ತಿದ್ದ ದೇವೇಂದ್ರಪ್ಪ ಪಕ್ಕದಲ್ಲಿಯೆ ಡ್ರೈವರನ ಕಣ್ಣಿಗೆ ಕಾರದ ಪುಡಿ ಎರಚಿದರು. ಗೋಣೆಪ್ಪ ಕೊಗನೂರು ಟಪಾಲು ಚೀಲ ತೆಗೆದುಕೊಂಡು ಬಸ್ಸಿನಿಂದಲೇ ಹಾರಿದ್ದರಿಂದ ಮೂರ್ಛೆ ಹೋದರು, ತಕ್ಷಣ ಮಹದೇವಪ್ಪ ಗೋಣೆಪ್ಪನನ್ನು ಹೊತ್ತುಕೊಂಡು ಜೋಳದ ಹೊಲದಲ್ಲಿ ಓಡಿದರು.

ಈ ತಂಡ ಅಂದುಕೊಂಡಂತೆ ಪೊಲೀಸರು ಹರಿಹರದಿಂದ ಬಂದಾಗ, ಮಹದೇವಪ್ಪ 'ಇಲ್ಲಿಯೇ ಇದ್ದರೆ ಎಲ್ಲರೂ ಸಿಗುತ್ತೇವೆ. ಆದ್ದರಿಂದ ಯಾರಿಗೆ ಹೆಚ್ಚು ಓಡಲಾಗುತ್ತದೆಯೋ ಅವರು ಇಲ್ಲಿಂದ ಪೊಲೀಸರಿಗೆ ಸಿಗದ ಹಾಗೆ ಮತ್ತು ಅವರಿಗೆ ಕಾಣುವಂತೆ ಓಡಿರಿ' ಎಂದಾಗ ದೇವೇಂದ್ರಪ್ಪ ಪೊಲೀಸರಿಗೆ ಕಾಣುವಂತೆ ಓಡಲಾರಂಭಿಸಿದರು. ದೇವೇಂದ್ರಪ್ಪನೊಂದಿಗೆ ಓಡಿದವನೆಂದರೆ ಮಹದೇವಪ್ಪನ ತಮ್ಮ ಲಿಂಗಣ್ಣ. ಆದರೆ ಅದು ಪರಿಚಯವಿಲ್ಲದ ಭಾಗವಾಗಿದ್ದರಿಂದ ಯಾವ ಕಡೆ ಓಡಿದರೆ ಯಾವ ಊರು ಬರುತ್ತದೆ ಎಂಬ ಜ್ಞಾನವಿಲ್ಲದೆ ಎಷ್ಟೋ ದೂರ ಓಡಿ ನಿಂತರು. ವಿಪರೀತ ಹಸಿವು ಇವರನ್ನು ನಿಲ್ಲುವಂತೆ ಮಾಡಿತ್ತು. ಆದರೂ ಹೊಳೆ ದಾಟಿ ನಮ್ಮೂರಿಗೆ ಹೋಗಿರಿ ಎಂದು ಮಹದೇವಪ್ಪ ಹೇಳಿದ್ದು ನೆನಪಿಗೆ ಬಂದು ಹೊಳೆಯ ಹತ್ತಿರ ಇರುವ ಗ್ರಾಮವೊಂದರಲ್ಲಿಯ ಅಂಗಡಿಯಲ್ಲಿ ಕೊಬ್ರಿ ಬೆಲ್ಲ ಮಂಡಕ್ಕಿ ತೆಗೆದುಕೊಂಡು ತಿನ್ನುತ್ತ ಐರಣಿ(ರಾಣೆಬೆನ್ನೂರು ತಾ॥) ಹತ್ತಿರ ಹೊಳೆ ದಾಟಲು ಹರಗೋಲು ಹತ್ತಿರ ಹೋದರು. ಅಲ್ಲಿಯೇ ಇದ್ದ ಕಡತಿಗೌಡ ಇವರನ್ನು ಆತ್ಮೀಯವಾಗಿ ಮಾತನಾಡಿಸಿ ತಮ್ಮ ಮನೆಗೆ ಬಂದು ಊಟ ಮಾಡಿಕೊಂಡು ಹೋಗುವಂತೆ ಒತ್ತಾಯಿಸಿ, ಮನೆಗೆ ಕರೆದುಕೊಂಡು ಹೋಗಿ ಊಟ ನೀಡಿ ರಾತ್ರಿ ಅಲ್ಲಿಯೆ ಉಳಿಸಿಕೊಂಡರು. ಬೆಳಗ್ಗೆ ದೇವೇಂದ್ರಪ್ಪ ವಿಭೂತಿ ಮತ್ತು ಮೈಲಾರ ಲಿಂಗಣ್ಣನನ್ನು ಪೊಲೀಸರಿಗೆ ಹಿಡಿಸಿಕೊಟ್ಟರು. ದಿನಾಂಕ ೦೧.೧೧.೧೯೪೨ ರಂದು ಹರಪನಹಳ್ಳಿ ನ್ಯಾಯಾಧೀಶರು ಬಳ್ಳಾರಿ ಕೋರ್ಟಿಗೆ ಕೇಸ್ ವರ್ಗಾಯಿಸಿದ್ದರಿಂದ ಅಲ್ಲಿ ಇವರಿಬ್ಬರಿಗೆ ೧ ತಿಂಗಳು ೩ ದಿವಸ ಜೈಲು ಶಿಕ್ಷೆಯಾಯಿತು. ಹೀಗೆ ದೇವೇಂದ್ರಪ್ಪ ವಿಭೂತಿ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಮಹದೇವಪ್ಪನ ತಂಡದಲ್ಲಿ ಮಹತ್ವವಾದ ಕಾರ್ಯಗಳನ್ನು ಮಾಡಿದ ಕೀರ್ತಿಗೆ ಭಾಜನರಾಗಿದ್ದಾರೆ.



**ಶ್ರೀಮತಿ ನಾಗವ್ವ ರಾಮಣ್ಣ ಉಂಡೇರ :** ಸಾ॥ ಹಾಲಗಿ, ತಾ॥ ಹಾವೇರಿ, ವಯಸ್ಸು ೯೨

ಸ್ವಾತಂತ್ರ್ಯ ಹೋರಾಟದಲ್ಲಿ ಅಂದಿನ ಚಳುವಳಿಗಾರರು ಮಹಿಳೆಯರಿಗೂ ಹೋರಾಡಲು ಅವಕಾಶ ಕಲ್ಪಿಸಿದ್ದರು ಎಂಬುದಕ್ಕೆ ಜಿಲ್ಲೆಯಲ್ಲಿ ಚಳುವಳಿಯಲ್ಲಿ ಮಹಿಳೆಯರು ಮಾಡಿದ ಕಾರ್ಯಗಳೇ ಸಾಕ್ಷಿ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಬಡತನ ಅಡ್ಡಿಯಾಗಿಲ್ಲ ಎಂಬುದಕ್ಕೂ ಇವರೇ ಸ್ಪಷ್ಟ ಉದಾಹರಣೆ. ಪತಿ ರಾಮಣ್ಣ ಉಂಡೇರ ಹಾಲಗಿಯಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಸಾಮಾನ್ಯ ವ್ಯಕ್ತಿಯೊಬ್ಬ ತನ್ನೊಂದಿಗೆ ಪತ್ನಿಯನ್ನೂ ಚಳುವಳಿಗೆ ಕರೆದುಕೊಂಡು ಹೋದದ್ದು ವಿಶೇಷವೇ. ಯಾವುದೇ ಆಸ್ತಿಯಿಲ್ಲದೆ ಕೂಲಿ ಮಾಡಿ ಜೀವನ ಸಾಗಿಸುವ ಪತಿ–ಪತ್ನಿ ಸೇರಿ ಚಳುವಳಿಯಲ್ಲಿ ಭಾಗಿಯಾಗಿದ್ದು ಅಂದಿನ ಸಮಾಜದಲ್ಲಿ ಚಳುವಳಿ ಬಗ್ಗೆ ಇದ್ದ ಅಭಿಮಾನದ ಧ್ಯೋತಕವಾಗಿದೆ. ತಮ್ಮೊಂದಿಗೆ ಕೂಲಿ ಕೆಲಸಕ್ಕೆ ಜೊತೆಯಲ್ಲಿ ಬರುವ ಹೆಣ್ಣು ಮಕ್ಕಳಿಗೂ ಇವರು ಪ್ರೇರಣೆಯಾಗಿರುವುದು ಇವರ ಹೇಳಿಕೆಯಿಂದ ತಿಳಿಯುತ್ತದೆ.

**ಪ್ರೇರಣೆ:** ನಾಗವ್ವ ಉಂಡೇರ ಮೊದಲು ಚಳುವಳಿಗೆ ಬರಲು ನಿರಾಕರಿಸುತ್ತಿದ್ದರು. ಕಾರಣ ಚಳುವಳಿಯೆಂದರೆ ಗಂಡಸರು ಮಾತ್ರ ಮಾಡುವಂಥ ಕಾರ್ಯ; 'ನಮ್ಮಂತ ಮಹಿಳೆಯರಿಗಲ್ಲ' ಎಂದು ಹಿಂಜರಿಯುತ್ತಿದ್ದರು. ಮೈಲಾರ ಮಹದೇವಪ್ಪ ಮತ್ತು ಪರಸನಗೌಡ ಕಾಕಡೆ ಅವರ ಮಾತುಗಳು ತಮ್ಮನ್ನು ಚಳುವಳಿಗೆ ಸೇರುವಂತೆ ಮಾಡಿದವು ಎಂದು ಅಭಿಮಾನದಿಂದ ಸ್ಮರಿಸುತ್ತಾರೆ. ನಾಯಕರು ಹೇಗೆ ಪ್ರೇರೇಪಿಸಿದರು ಎಂಬ ಪ್ರಶ್ನೆಗೆ 'ಸರಕಾರ ಹೇಗೆ ನಮ್ಮನ್ನು ನಡೆಸಿಕೊಳ್ಳುತ್ತದೆ. ನಾವು ಜಾತಿ ಹೆಸರಿನಲ್ಲಿ ಹೇಗೆ ಸಮಾಜವನ್ನು ಒಡೆದುಕೊಂಡು ಹಾಳಾಗುತ್ತಿದ್ದೇವೆ, ನಮ್ಮಲ್ಲಿಯ ಹರಿಜನರಿಗೆ ನಾವು ಯಾವ ಸ್ಥಾನ ಕೊಟ್ಟಿದ್ದೇವೆ, ಅವರು ನಮ್ಮ ಹಾಗೆ ಮನುಷ್ಯರಲ್ಲವೇ? ಹೊಂಡ, ಬಾವಿಗಳಲ್ಲಿ ನೀರು ತುಂಬುವುದರಿಂದ ಯಾರಿಗೆ ಏನು ತೊಂದರೆ ಆಗುತ್ತೆ? ಸತ್ತಮೇಲೆ ಏನಾಗುತ್ತೋ ಗೊತ್ತಿಲ್ಲದಿದ್ದಾಗ ನಾವು ಮಾಡುವ ಜಾತೀಯತೆ ಬಗ್ಗೆ ಬೇರೆಯವರ ಮನಸ್ಸಿನ ಮೇಲೆ ಎಂಥ ದುಷ್ಪರಿಣಾಮ ಬೀರುತ್ತೆ ಎಂಬುದನ್ನು ಅರ್ಥ ಮಾಡಿಕೊಳ್ಳಿ, ಮುಂದಿನ ಜನ್ಮದಲ್ಲಿ ನೀವು ಹರಿಜನರಾಗಿ ಹುಟ್ಟಿದರೆ? ಎಂಬ ಅವರ ಮಾತುಗಳು ಊರಲ್ಲಿ ಎಲ್ಲರ ಗಮನ ಸೆಳೆದವು. ತಾವು ತಮ್ಮ ಪತಿ ಸಹ ಈ ಮಾತುಗಳಿಂದ

ಅವರನ್ನು ನಂಬಿದ ಬಗ್ಗೆ, ನಮಗೆ ಯಾಕೆ ಸ್ವಾತಂತ್ರ್ಯ ಬೇಕು ಎಂಬುದನ್ನು ತಿಳಿಸಿದ್ದರಿಂದ ಚಳುವಳಿಗೆ ಧುಮುಕಿದೆವು ಎಂದು ಹಿನ್ನೆಲೆಯನ್ನು ವಿವರಿಸುತ್ತಾರೆ.

ನಾಗವ್ವನೊಂದಿಗೆ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರೆಂದರೆ– ಅಂಬವ್ವ ಹಳ್ಳಿಗುಡಿ, ಕರಿಯವ್ವ ಮುದ್ದಿ, ಭರಮವ್ವ ಹಡಗದ ಇನ್ನೂ ಮೊದಲಾದವರು. ಆದರೆ ಅವರ್‍ಯಾರು ಇಂದು ನಮ್ಮೊಂದಿಗಿಲ್ಲ. ಆದರೆ ಅವರೆಲ್ಲರೂ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರು. ಆದರೆ ನಮ್ಮ ನಾಯಕರ ಮಾತುಗಳು ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ತಾವುಗಳು ಉತ್ಸಾಹದಿಂದ ೧೯೪೨ರ ಚಳುವಳಿಯಲ್ಲಿ ಭಾಗವಹಿಸಿದ ಬಗ್ಗೆ ಅಭಿಮಾನದಿಂದ ಹೇಳುತ್ತಾರೆ.

**ಇವರು ಮಾಡಿದ ಪ್ರಮುಖ ಕಾರ್ಯಗಳೆಂದರೆ :**

* ಹಾವೇರಿಯ ವೀರಭದ್ರೇಶ್ವರ ದೇವಸ್ಥಾನದಿಂದ ಹಳೆ ತಾಲೂಕಾ ಕಛೇರಿಯವರೆಗೆ ಜೈಕಾರ ಹಾಕುತ್ತಾ ಪ್ರಭಾತ ಫೇರಿ ಹೋದದ್ದು. ಕೈಯಲ್ಲಿ ಧ್ವಜ ಹಿಡಿದುಕೊಂಡು ಹೋಗಿದ್ದರಿಂದ ಪೊಲೀಸರು ಇವರನ್ನು ಬಂಧಿಸಿದರು. * ದೇವರಗುಡ್ಡ ಹಾಗೂ ಮೈಲಾರ ಜಾತ್ರೆಗಳಲ್ಲಿ ಧ್ವಜಹಿಡಿದು ಜೈಕಾರ ಹಾಕಿದ್ದರಿಂದ ಅಲ್ಲಿಯೂ ಪೊಲೀಸರು ಇವರನ್ನು ಬಂಧಿಸಿದರು. * ವಿವಿಧ ಹಳ್ಳಿಗಳಿಗೆ ಹೋಗಿ ಪ್ರಭಾತ್‌ಫೇರಿ ಮಾಡುವುದು ಮತ್ತು ಹರಿಜನ ಕೇರಿಗೆ ಹೋಗಿ ಸ್ವಚ್ಛತಾ ಕಾರ್ಯ ಮಾಡುವುದು.

ಹಾವೇರಿ, ದೇವರಗುಡ್ಡ ಮತ್ತು ಮೈಲಾರ ಜಾತ್ರೆಯಲ್ಲಿ ಇವರನ್ನು ಬಂಧಿಸಿ ರಾಣಿಬೆನ್ನೂರು, ಹಾವೇರಿ, ಧಾರವಾಡ ಮತ್ತು ಹಿಂಡಲಗಾ ಜೈಲಿನಲ್ಲಿ ಆರು ತಿಂಗಳ ಶಿಕ್ಷೆ ಅನುಭವಿಸಿದರು.

**ಪ್ರಮುಖ ಘಟನೆ;** ಇವರ ಪ್ರಮುಖವಾದ ಚಳುವಳಿಯೆಂದರೆ, ಮಹದೇವಪ್ಪ ಮೈಲಾರ ಹೊಸರಿತ್ತಿ ಹಫ್ತಾ ಲೂಟಿ ಸಮಯಕ್ಕೆ ಸರಿಯಾಗಿ ಹಾವೇರಿಯಲ್ಲಿಯ ನ್ಯಾಯಾಲಯದಲ್ಲಿ ಘಟನೆ ನಡೆಯುವ ಯೋಜನೆ ರೂಪಿಸಿದ್ದರು. ಆ ಘಟನೆಯಲ್ಲಿ ತಾವು ಇದ್ದ ಬಗ್ಗೆ ಹೆಮ್ಮೆಪಡುತ್ತಾರೆ. ನ್ಯಾಯಾಲಯದಲ್ಲಿ ಬ್ರಿಟಿಷರಿಗೆ ಶಿಕ್ಷೆ ನೀಡುವ ಕಾರ್ಯಕಲಾಪದ ಬಗ್ಗೆ ಮೊದಲೇ ಮಾಡಿದ ಯೋಜನೆ, ಅದು ಮಹದೇವಪ್ಪನ ಯೋಜನೆಯಂತೆ ನಡೆಯಿತು.



ಎಲ್ಲರೂ ಬಂಧಿಯಾದದ್ದಕ್ಕಿಂತ, ತಮ್ಮ ನೆಚ್ಚಿನ ನಾಯಕ ಅವರ ಸಂಗಡಿಗರ ಸಾವಿನ ಬಗ್ಗೆ ದುಃಖದಿಂದಲೇ ವಿವರಿಸುತ್ತಾರೆ.

**ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿ :** ಹೊಸರಿತ್ತಿ ಸಮಿಪದ ಹಾಲಗಿ, ತಾ॥ ಹಾವೇರಿ ವಯಸ್ಸು; ೯೪

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಇಡೀ ಗ್ರಾಮವೇ ಭಾಗಿಯಾಗಿ ಚಳುವಳಿಗೆ ಧುಮುಕಿದ್ದು ಅಪರೂಪ. ಆದರೆ ಜಿಲ್ಲೆಯ ಹಾವೇರಿ ತಾಲೂಕಿನ ಹಾಲಗಿ ಎಂಬ ಚಿಕ್ಕ ಗ್ರಾಮ ದೊಡ್ಡದೊಂದು ಪ್ರಶಸ್ತಿಗೆ ಪಾತ್ರವಾಯಿತು. ಊರಿನ ಚಳುವಳಿಗಾರರಲ್ಲಿ ಫಕ್ಕೀರಯ್ಯ ಹಾಲಯ್ಯ ಕುಲಕರ್ಣಿಯೂ ಒಬ್ಬರು. ಬಡಕುಟುಂಬದಲ್ಲಿ ಜನಿಸಿದ ಇವರು ಮಹದೇವಪ್ಪ ಮೈಲಾರ ಮಾತುಗಳಿಂದ ಚಳುವಳಿಗೆ ಧುಮುಕಿದರು. ಮಹದೇವಪ್ಪ ತಮ್ಮ ಊರಿಗೆ ಬಂದಾಗ ಶಾಲೆಗೆ ಹೋಗುವ ಮಕ್ಕಳಿಗೆ ನೀವು ಶಾಲೆಗೆ ಹೋಗುವ ಪೂರ್ವದಲ್ಲಿ ಹರಿಜನ ಕೇರಿಗೆ ಹೋಗಿ ಕಸ ಗೂಡಿಸಿ ನಂತರ ಶಾಲೆಗೆ ಹೋಗಬೇಕೆಂದು ಹೇಳಿದರು. ವಿಶೇಷವೆಂದರೆ ಹಾಲಗಿಯ ಶಾಲಾ ಮಕ್ಕಳು ಹಾಗೆ ಮಾಡುತ್ತಿದ್ದರು. ಇದನ್ನು ಸ್ವತಃ ತಾವು ಪಾಲಿಸಿದ ಬಗ್ಗೆ ಫಕ್ಕೀರಯ್ಯ ನೆನಪಿಸಿಕೊಳ್ಳುತ್ತಾರೆ.

ಇವರೊಂದಿಗೆ ಶಾಲಾ ಸ್ನೇಹಿತ ಮತ್ತು ತಮ್ಮೊಂದಿಗೆ ಹರಿಜನ ಕೇರಿಯಲ್ಲಿ ಕಸ ಗುಡಿಸಲು ಬರುತ್ತಿದ್ದ ಚಂದುಸಾಬ್ ವಾಲೀಕಾರ, ಯಮನೂರು ಸಾಬ್ ನದಾಫ್, ರಾಮಣ್ಣ ಬಡಗಿ, ನಿಂಗನಗೌಡ ಕಾಕಡೆ, ರಾಮಣ್ಣ ಉಂಡಿ, ಬುಡ್ನೇಸಾಬ್ ವಾಲೀಕಾರ ಮುಂತಾದವರು ಚಳುವಳಿಗೆ ಧುಮುಕಿದರು. ಇಂದು ರಾಮಣ್ಣನ ಪತ್ನಿ ಶ್ರೀಮತಿ ನಾಗವ್ವ ಮಾತ್ರ ನಮ್ಮೊಂದಿಗಿದ್ದಾರೆ.

ಹರಿಜನ ಕೇರಿಯ ಸ್ವಚ್ಛತೆಯಿಂದ ಆರಂಭವಾದ ಸಾಮಾಜಿಕ ಕಾರ್ಯ ಚಳುವಳಿಗೆ ತಿರುಗಲು ಬಹಳ ಕಾಲ ಹಿಡಿಯಲಿಲ್ಲ. ಕಾರಣ ಮಹದೇವಪ್ಪನಂಥ ನಾಯಕನಿರುವಾಗ ಶಾಲೆ ಕಲಿತು ಮಾಡುವುದು ಏನು? ಎಂಬ ವಿಚಾರ ಮಾಡಿ ಮಹದೇವಪ್ಪನೊಂದಿಗೆ ಹೊರಟರು. ಪ್ರಾರಂಭದಲ್ಲಿ ಪ್ರಭಾತ್‌ಫೇರಿ ಮಾಡುವುದು, ನೀಲಗಿರಿ ಅಡವಿಯಲ್ಲಿದ್ದ ಚಳುವಳಿಗಾರರಿಗೆ ರಾತ್ರಿ ಊಟ ತೆಗೆದುಕೊಂಡು ಹೋಗುವ ಕಾರ್ಯವನ್ನು ಮಹದೇವಪ್ಪ ಇವರಿಗೆ ವಹಿಸಿದ್ದರು.

**ಶರಣಾಗಿದ್ದು :** ಹಾಲಯ್ಯ ಕುಲಕರ್ಣಿ ಮಹದೇವಪ್ಪನ ತಂಡದ

ಸದಸ್ಯನೆಂಬುದು ಪೊಲೀಸರಿಗೆ ತಿಳಿದು, ಇವರನ್ನು ಬಂಧಿಸಲು ಮನೆಗೆ ಬರುತ್ತಾರೆ. ಆಗ ಇವರ ಮನೆಯ ಕೆಲಸದಾಳು ದಾದಾಪೀರ ಹುಡುಗ ಇವರು ತಪ್ಪಿಸಿಕೊಳ್ಳಲು ಆಗದ ಸ್ಥಿತಿಯಲ್ಲಿ ಇದ್ದಾಗ ಮನೆಯ ಹಿಂದೆ ದನಗಳನ್ನು ಕಟ್ಟುವ ಕೊಟ್ಟಿಗೆಯಿದ್ದು, ಅಲ್ಲಿಗೆ ಇವರನ್ನು ಕರೆದುಕೊಂಡು ಜೆಲ್ಲಿ(ದೊಡ್ಡ ಬುಟ್ಟಿ)ಯಲ್ಲಿ ಕುಳ್ಳಿರಿಸಿ, ಇವರ ಮೇಲೆ ಸೊಪ್ಪಿಯ ದಂಟುಗಳನ್ನು ಮುಚ್ಚಿ ಹೊತ್ತುಕೊಂಡು ತಿಪ್ಪೆಯ ಕಡೆ ನಡೆದು ಇವರನ್ನು ಪೊಲೀಸರಿಂದ ತಪ್ಪಿಸಿದ ಘಟನೆಯನ್ನು ಅಭಿಮಾನದಿಂದ ಹೇಳುತ್ತಾರೆ. ಆದರೆ ಇವರು ಸಿಗದ ಕಾರಣ ಮನೆಯವರಿಗೆ ತೊಂದರೆ ನೀಡುತ್ತಿರುವ ವಿಷಯ ತಿಳಿದು ಪೊಲೀಸರಿಗೆ ಶರಣಾಗಿ, ೮ ತಿಂಗಳ ಶಿಕ್ಷೆಯನ್ನು ಅನುಭವಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯನ್ನು ಹತ್ತಿರದಿಂದ ಕಂಡ ಬಗ್ಗೆ ಸಂತೋಷಪಡುವ ಇವರು ತಮ್ಮ ನಾಯಕ ಮಹದೇವಪ್ಪ ಮತ್ತು ಸ್ನೇಹಿತರಾದ ತಿರುಕಪ್ಪ ಮಡಿವಾಳರ ಹಾಗೂ ವೀರಯ್ಯ ಹಿರೇಮಠ ಇವರು ಹುತಾತ್ಮರಾದ ವಿಷಯಕ್ಕೆ ತುಂಬಾ ಭಾವುಕರಾಗಿ ಅಂದಿನ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

**ಶಾಲಾ–ಕಾಲೇಜು ವಿದ್ಯಾರ್ಥಿಗಳೊಂದಿಗೆ ಚಳುವಳಿಕಾರ ಪರಮಣ್ಣ ಹರಕಂಗಿಯವರ ಸಂವಾದ:** ಹಾವೇರಿ, ಹಾನಗಲ್ಲು, ಶಿಗ್ಗಾವಿ, ಬ್ಯಾಡಗಿ ತಾಲೂಕುಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರೊಂದಿಗಿನ ಶಾಲಾ–ಕಾಲೇಜು ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮಗಳನ್ನು ಹಾವೇರಿ ಜಿಲ್ಲೆಯ ಮೈಲಾರ ಮಹದೇವಪ್ಪ ರಾಷ್ಟ್ರೀಯ ಸ್ಮಾರಕ ಟ್ರಸ್ಟ್(ರಿ), ಹಾವೇರಿ. ಇವರು ಜಿಲ್ಲಾ ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲೆಯ ಹಲವು ಶಾಲಾ–ಕಾಲೇಜುಗಳು ಮತ್ತು ಜಾನಪದ ವಿಶ್ವವಿದ್ಯಾಲಯ ಶಿಗ್ಗಾವಿ ಮುಂತಾದ ಕಡೆ ರಾಷ್ಟ್ರೀಯತೆಗೆ ಸಂಬಂಧಿಸಿದ ಜಾನಪದ, ಭಕ್ತಿಗೀತೆ–ಭಾವಗೀತೆ, ಕಂಸಾಳೆ ಹೀಗೆ ಮುಂತಾದವುಗಳೊಂದಿಗೆ ಸ್ವಾತಂತ್ರ್ಯ ಯೋಧರ ಬಗ್ಗೆ ಉಪನ್ಯಾಸಗಳು(ನಾನೂ ಹುತಾತ್ಮ ವೀರಯ್ಯ ಹಿರೇಮಠ, ಮೈಲಾರ ಮಹದೇವಪ್ಪ, ಹಾವೇರಿ ಜಿಲ್ಲೆಯಲ್ಲಿ ೧೯೪೨ರ ಚಳುವಳಿ, ಸ್ವಾತಂತ್ರ್ಯ ಹೋರಾಟದಲ್ಲಿ ನೈತಿಕತೆ ಮತ್ತು ರಾಷ್ಟ್ರೀಯತೆ ಕುರಿತಾದ ಉಪನ್ಯಾಸಗಳನ್ನು ನೀಡಿರುತ್ತೇನೆ) ಆ ಸಭೆ ಸಮಾರಂಭಗಳಿಗೆ ಹೋದಾಗ, ಗಮನಿಸಿದಂತೆ ವಿದ್ಯಾರ್ಥಿಗಳು ಅಂದಿನ ಸ್ವಾತಂತ್ರ್ಯಯೋಧರಾದ ನೆಗಳೂರಿನ ಪರಮಣ್ಣ ಹರಕಂಗಿ, ಅಕ್ಕಿಆಲೂರಿನ ಗುಡ್ಡಪ್ಪ ಹರಿಜನ, ಹಾನಗಲ್ಲನ ಸುಬ್ಬಣ್ಣಾಚಾರ್ಯ ಅಕ್ಕಿವಳಿ, ಹಾಲಗಿಯ ಫಕ್ಕೀರಯ್ಯ ಕುಲಕರ್ಣಿ ಇನ್ನೂ ಮುಂತಾದವರಿಗೆ ಕೇಳಿದ (ಹಲವು ಕಡೆ ಹೆಚ್ಚು ವಿದ್ಯಾರ್ಥಿಗಳು)ಪ್ರಶ್ನೆಯೆಂದರೆ 'ಭಗತ್‌ಸಿಂಗ್ ಅವರಿಗೆ ಸಿಕ್ಕ ಪ್ರಚಾರ ಇಷ್ಟೊಂದು ಕಾರ್ಯ ಮಾಡಿದ ಮೈಲಾರ ಮಹದೇವಪ್ಪಗೆ ಯಾಕೆ ಸಿಕ್ಕಿಲ್ಲ'? ಶಾಲಾ ಮಕ್ಕಳ ಮತ್ತು ಕಾಲೇಜು ಯುವಕ–ಯುವತಿಯರ ಈ ಪ್ರಶ್ನೆಗಳಿಗೆ ಚಳುವಳಿಗಾರರು ಕೊಟ್ಟ ಉತ್ತರ ಹೌದು ಎಂದು ಉತ್ತರಿಸುತ್ತಿದ್ದರು. ನನಗೂ ಆ ಪ್ರಶ್ನೆ ಕಾಡುತ್ತಿತ್ತು. ಮಕ್ಕಳ ಆ ಪ್ರಶ್ನೆಗೆ ಯೋಚಿಸಿದರೆ ಹೌದೆನಿಸುತ್ತದೆ, ಕಾರಣ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿರುವುದು ಹಿಂಸೆ–ಅಹಿಂಸೆಯಿಂದಲೋ? ಎಂಬ ಪ್ರಶ್ನೆ ಇಟ್ಟುಕೊಂಡು ಯೋಚಿಸಿದರೆ ಅಹಿಂಸೆಯನ್ನು ಒಪ್ಪಿಕೊಳ್ಳುತ್ತೇವೆ. ಅದಕ್ಕೆ ಕಾರಣ ಅಂದು ಭಾರತೀಯರೆಲ್ಲರೂ ಹಿಂಸಾರೂಪದಲ್ಲಿ ಹೋರಾಟ ಮಾಡಿದ್ದರೆ ಸಿಕ್ಕ ಅಥವಾ ಸಿಗುವ ಸ್ವಾತಂತ್ರ್ಯವನ್ನು ಅನುಭವಿಸಲು ಎಷ್ಟು ಜನ ಭಾರತೀಯರು ಇರುತ್ತಿದ್ದರು ಎಂಬ ಪ್ರಶ್ನೆಯನ್ನು ನಾವು ಕೇಳಿಕೊಂಡರೆ! ಗೊಂದಲದ ಮನಸ್ಥಿತಿ ನಮ್ಮದಾಗುತ್ತದೆ. ನಮ್ಮನ್ನಾಳುವ ಸರಕಾರದ ವಿರುದ್ಧ ಅಷ್ಟು ಸುಲಭವಾಗಿ ಜಯಗಳಿಸುವುದು ಸಾಧ್ಯವಿರಲಿಲ್ಲ. ತನ್ನ ಕೊನೆಯ ಉಸಿರಿರುವವರೆಗೂ ತನ್ನ ಮತ್ತು ತನ್ನ ಸಂಗಡಿಗರಲ್ಲಿ ಆಯುಧಗಳಿದ್ದರೂ ಅವುಗಳನ್ನು ಸರಕಾರಿ ಅಧಿಕಾರಿಗಳಿಗೆ ಹೆದರಿಸಲು ಮಾತ್ರ ಅವುಗಳನ್ನು ಉಪಯೋಗಿಸಿಕೊಂಡು ಸರಕಾರಕ್ಕೆ ಕಾಡಿದ ಅಥವಾ ತೊಂದರೆ ಕೊಟ್ಟ ಮಹದೇವಪ್ಪನ ತಂಡ ತಮ್ಮ ಕೊನೆಯ ವಿಧ್ವಂಸಕ ಕಾರ್ಯ ಹೊಸರಿತ್ತಿಯ ಹಫ್ತಾಲೂಟಿ ಪ್ರಕರಣದಲ್ಲಿ ತಮ್ಮ ಜೀವ ಹೋಗುತ್ತದೆ ಎನ್ನುವಾಗಲೂ ಆಯುಧಗಳನ್ನು ಬಳಸದೇ ಹುತಾತ್ಮರಾಗಿದ್ದನ್ನು ಗಮನಿಸುವುದಾದರೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗೆ ನಾವು ಹೌದು ಭಗತ್‌ಸಿಂಗ್ ಮತ್ತು ಅವರ ಸಂಗಡಿಗರಿಗೆ ಸಿಕ್ಕ ಗೌರವ, ಮಹದೇವಪ್ಪ ಮೈಲಾರ ಮತ್ತು ತಂಡದ ಸದಸ್ಯರಿಗೆ ಸಿಕ್ಕಿಲ್ಲವೆನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಮಹದೇವಪ್ಪ ಅಹಿಂಸಾ ಮಾರ್ಗದಿಂದ ಹುತಾತ್ಮನಾದವನು, ಅವನು ಮತ್ತು ಅವನ ಸಂಗಡಿಗರಿಗೆ ಸಿಗಬೇಕಾದ ಸರಕಾರಿ ಗೌರವಗಳು ಸಿಕ್ಕಿಲ್ಲವೆಂಬುದನ್ನು ಅಲ್ಲಗಳೆಯುವಂತಿಲ್ಲ.

'ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಸರಿತ್ತಿ' ಈ ಕಿರುಪುಸ್ತಕದಲ್ಲಿ ಹೊಸರಿತ್ತಿ ಹಾಗೂ ಅದರ ಸುತ್ತಮುತ್ತಲಿನ ಪರಿಸರದಲ್ಲಿ ನಡೆದ ಸ್ವಾತಂತ್ರ್ಯಹೋರಾಟದಲ್ಲಿ ಭಾಗಿಯಾದ ಚಳುವಳಿಕಾರರು ರಾಷ್ಟ್ರೀಯ

ಹೋರಾಟದೊಂದಿಗೆ ತಮ್ಮ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಅದರಲ್ಲಿಯೂ ಗುದ್ಲೆಪ್ಪ ಹಳ್ಳಿಕೇರಿ ಹಾಗೂ ಮಹದೇವಪ್ಪ ಮೈಲಾರ ಇವರಿರ್ವರ ನೇತೃತ್ವದಲ್ಲಿ ನಡೆದ ಕಾರ್ಯಗಳ ವಿವರಗಳನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡುವ ಚಿಕ್ಕ ಪ್ರಯತ್ನ ಮಾಡಿರುತ್ತೇನೆ. ಇಲ್ಲಿ ಮಾಹಿತಿ ಪಡೆದುಕೊಂಡಿರುವ ಚಳುವಳಿಕಾರರ ಪೂರ್ಣ ವಿವರಗಳನ್ನು ನೀಡಲಾಗಿಲ್ಲ, ಇಲ್ಲಿಯ ವಿಷಯಕ್ಕೆ ತಕ್ಕ ಹಾಗೆ ಸಂಕ್ಷಿಪ್ತವಾಗಿ ಈ ಕಿರುಪುಸ್ತಕಕ್ಕೆ ನ್ಯಾಯ ಒದಗಿಸುವ ಕಾರ್ಯ ಮಾಡಿರುತ್ತೇನೆ.

## ಗ್ರಂಥಋಣ


೧. ಡಾ. ಎಂ. ಎಂ. ಕಲಬುರ್ಗಿ, ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರೋ. ಆರ್. ವ್ಹಿ. ಹೊರಡಿ, ಎಸ್. ಎಚ್. ಪಾಟೀಲ, ಡಾ. ವ್ಹಿ. ವ್ಹಿ. ಹೆಬ್ಬಳ್ಳಿ, ಶ್ರೀ ನಿರಂಜನ ವಾಲಿಶೆಟ್ಟರ, ಉಕ್ಕಿನ ಮನುಷ್ಯ ೨೦೦೬ ಜೂನ್ ೬ ರಂದು ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರ ಶತಮಾನೋತ್ಸವ ಆಚರಿಸುತ್ತಿರುವ ಸಂದರ್ಭದ ಸ್ಮರಣ ಗ್ರಂಥ. ಪ್ರಕಾಶಕರು– ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನ (ರಿ), ಗಾಂಧೀ ಗ್ರಾಮೀಣ ಗುರುಕುಲ, ಹೊಸರಿತ್ತಿ, ೨೦೦೬.

೨. ಪ್ರೋ॥ ವಿ. ಸಿ. ಹಿತ್ತಲಮನಿ, ಮಾಡಿ ಮಡಿದ ಮೈಲಾರ ಮಹದೇವ. ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧೀನಗರ, ಬೆಂಗಳೂರು. ೧೯೯೯, ೨೦೧೨.

೩. ಪ್ರೋ. ವಿ. ಸಿ. ಹಿತ್ತಲಮನಿ, ಮಾಡಿ ಮಡಿದ ಮೈಲಾರ ಮಹದೇವ. ಚಲೇಜಾವ್ ಚಳುವಳಿಯ ಹುತಾತ್ಮ, ಶರಾವತಿ ಸಾಹಿತ್ಯ, ಮಂಜುನಾಥಪುರ, ಧಾರವಾಡ, ೧೯೮೭.

೪. ಕಾಮತ್ ಸೂರ್ಯನಾಥ(ಸಂ), ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ, ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳ್ಳಿ, ೧೯೯೨.

೫. ಕಾಮತ್ ಸೂರ್ಯನಾಥ(ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್ – ಭಾಗ –೨, ಕರ್ನಾಟಕ ರಾಜ್ಯ ಸರಕಾರ, ಕಾವೇರಿ ಭವನ, ಬೆಂಗಳೂರು, ೧೯೮೨.

೬. ಕಾಮತ್ ಸೂರ್ಯನಾಥ(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ, ೧, ೨, ಮತ್ತು ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೮.

೭. ಸಂಕಣ್ಣನವರ ಜಿ. ಸಂಕಮ್ಮ., ಹೋರಾಟದ ಒಂದು ನೋಟ, ಶ್ರೀಮತಿ ಸಿದ್ಧಮ್ಮ ಮಹದೇವಪ್ಪ ಮೈಲಾರ(ಬದುಕು–ಬರಹ), ಸಮೃದ್ಧಿ ಪ್ರಕಾಶನ, ಬ್ಯಾಡಗಿ, ೨೦೧೩.

೮. ಪರಮೇಶ ಲಿಂ. ಹರಕಂಗಿ.,ಸಂಗ್ರಾಮದ ನೆನಪುಗಳು.ಹಿರಿಯ ಸ್ವಾತಂತ್ರ್ಯಹೋರಾಟಗಾರ ಪರಮೇಶ ಲಿ. ಹರಕಂಗಿಯವರ ಹೋರಾಟದ ನೆನಪುಗಳು. ಪ್ರಕಾಶನ–ಹುತಾತ್ಮ ಮೈಲಾರ ಮಹದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಕಮಿಟಿ ಹಾವೇರಿ. ೨೦೦೭.

೯. ಚವಲಾರ ಸರೋಜಿನಿ(ಮು.ಸಂ), ಚಿರ ಚೇತನ, ಕೆ. ಎಫ್. ಪಾಟೀಲರ ಅಭಿನಂದನಾ ಗ್ರಂಥ, ಕೆ. ಎಫ್. ಪಾಟೀಲರ ೮೯ನೇಯ ವರ್ಧಂತಿ, ಸನ್ಮಾನ ಸಮಿತಿ ರಾಣೀಬೆನ್ನೂರು, ಜಿ. ಹಾವೇರಿ, ೧೯೮೯.

೧೦. ಚವಲಾರ ಸರೋಜಿನಿ(ಮು.ಸಂ), ಚಿರ ಚೇತನ, ಕೆ. ಎಫ್. ಪಾಟೀಲರ ಅಭಿನಂದನಾ ಗ್ರಂಥ, ಕೆ. ಎಫ್. ಪಾಟೀಲರ ೮೯ನೇಯ ವರ್ಧಂತಿ, ಸನ್ಮಾನ ಸಮಿತಿ ರಾಣೀಬೆನ್ನೂರು, ಜಿ. ಹಾವೇರಿ, ೧೯೮೯.

೧೧. ಚುರ್ಚಿಹಾಳ ಸಿ. ಎಂ., ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹೈದ್ರಾಬಾದ ವಿಮೋಚನಾ ಹೋರಾಟ., ಮುಂಡರಗಿ ತಾಲೂಕಾ ಸ್ವಾತಂತ್ರ್ಯಯೋಧರ ಸಂಘ ಮುಂಡರಗಿ, ಜಿಲ್ಲಾ, ಗದಗ, ೧೯೯೯.

೧೨. ದಾಬಡೆ ನರಸಿಂಹ, ಸ್ವಾತಂತ್ರ್ಯ ಸಂಗ್ರಾಮದ ನೋವು– ನಲಿವುಗಳು., ಸರ್ವೋದಯ ಶಿಕ್ಷಣ ಟ್ರಸ್ಟ್, ಧಾರವಾಡ, ೧೯೯೬.




೧೩. ಸಂದರ್ಶನ, ನೆಗಳೂರಿನ ಸ್ವಾತಂತ್ರ್ಯಯೋಧರಾದ ಪರಮಣ್ಣ ಹರಕಂಗಿ, ದೇವೇಂದ್ರಪ್ಪ ವಿಭೂತಿ. ಹಾಲಗಿಯ ಶ್ರೀಮತಿ ನಾಗವ್ವ ಉಂಡಿ ಮತ್ತು ಫಕ್ಕೀರಯ್ಯ ಹಾ. ಕುಲಮರ್ಣಿ, ಸುಬ್ಬಣ್ಣಾಚಾರ್ಯ ಅಕ್ಕಿವಳಿ ಇವರುಗಳು ನೀಡಿದ ಮಾಹಿತಿ, ೨೦೧೪–೧೫.












## ಹೊಸರಿತ್ತಿ ಭಾಗದದಲ್ಲಿ ಚಳುವಳಿಯಲ್ಲಿ ಮಹದೇವಪ್ಪ ಮೈಲಾರ ತಂಡದಲ್ಲಿ ಭಾಗಿಗಳಾದ ಹಾಗೂ ವಿವಿಧ ರೀತಿಯಲ್ಲಿ ಸಹಾಯ ಸಲ್ಲಿಸಿದವರ ರಾಷ್ಟ್ರೀಯ ಹೋರಾಟಗಾರರ ಯಾದಿ

| ಅ.ನಂ | ಹೆಸರು | ಊರು | ಅ.ನಂ | ಹೆಸರು | ಊರು |
|---|---|---|---|---|---|
| 1 | ಹನುಮಣ್ಣ ಜಂಗ್ಲಿ | ಹೊಸರಿತ್ತಿ | 25 | ನಿಂಗಪ್ಪ ಕೂರಗುಂದ | ಕೋಗನೂರು |
| 2 | ಬಸಪ್ಪ ನರಗುಂದ | ಹೊಸರಿತ್ತಿ | 26 | ಗೋಣೆಪ್ಪ ಕಮತದ | ಕೋಗನೂರು |
| 3 | ಬಸಪ್ಪ ಕುರಿ | ಹೊಸರಿತ್ತಿ | 27 | ಗುಡ್ಡಪ್ಪ ಡಿಳ್ಳೆಪ್ಪನವರ | ಕೋಗನೂರು |
| 4 | ನಿಂಗನಗೌಡ ಕಾಕಡೆ | ಹಾಲಗಿ | 28 | ಶಿವಯ್ಯ ಅಂಗಡಿ | ಕೋಗನೂರು |
| 5 | ಫಕ್ಕೀರಯ್ಯ ಕೆಸರವಳ್ಳಿಮಠ | ಹಾಲಗಿ | 29 | ಭಗವಂತಪ್ಪ ಬೂದನೂರು | ಕೋಗನೂರು |
| 6 | ಬುಡನ್‌ಸಾಬ್ ನದಾಫ್ | ಹಾಲಗಿ | 30 | ವೀರಯ್ಯ ಹಿರೇಮಠ | ಕೋಗನೂರು |
| 7 | ಚಂದುಸಾಬ್ ನದಾಫ್ | ಹಾಲಗಿ | 31 | ವಾಸುದೇವರಡ್ಡಿ ರಡ್ಡೇರ | ಕೋಗನೂರು |
| 8 | ಯಮನೂರುಸಾಬ್ ನದಾಫ್ | ಹಾಲಗಿ | 32 | ಫಕ್ಕೀರಡ್ಡಿ ರಡ್ಡೇರ | ಕೋಗನೂರು |
| 9 | ರಾಮಣ್ಣ ಉಂಡೆರ್ | ಹಾಲಗಿ | 33 | ವೀರಭದ್ರಗೌಡ ಪಾಟೀಲ | ಕೋಗನೂರು |
| 10 | ನಾಗವ್ವ ರಾ. ಉಂಡೆರ್ | ಹಾಲಗಿ | 34 | ಆರ್.ಬಿ.ಕೂರಗುಂದ | ಕೋಗನೂರು |
| 12 | ಫಕ್ಕೀರಯ್ಯ ಹಾ. ಕುಲಕರ್ಣಿ | ಹಾಲಗಿ | 35 | ಫಕ್ಕೀರಪ್ಪ ಕೊರಗುಂದ | ಕೋಗನೂರು |
| 13 | ಫಕ್ಕೀರಪ್ಪ ತಾವರೆ | ನೆಗಳೂರು | 36 | ನಿಸ್ಸೀಮಪ್ಪ ಚೆನ್ನೂರು | ಕೋಗನೂರು |
| 14 | ದೇವೇಂದ್ರಪ್ಪ ವಿಭೂತಿ | ನೆಗಳೂರು | 37 | ತಿರುಕಪ್ಪ ಮಡಿವಾಳರ | ಕೋಗನೂರು |
| 15 | ಪರಮಣ್ಣ ಲಿ. ಹರಕಂಗಿ | ನೆಗಳೂರು | 38 | ವೀರಯ್ಯ ಹಿರೇಮಠ | ಕೋಗನೂರು |
| 16 | ವಿರುಪಣ್ಣ ಹಾವೇರಿ | ನೆಗಳೂರು | 39 | ನೀಲಪ್ಪ ಡಿಳ್ಳೆಪ್ಪನವರ | ಕೋಗನೂರು |
| 17 | ಭೀಮರಡ್ಡಿ ಜಟ್ಟೆಪ್ಪನವರ | ಬೆಳವಗಿ | 40 | ಗುಂಡಪ್ಪ ಕೂರಗುಂದ | ಕೋಗನೂರು |
| 18 | ರುದ್ರಪ್ಪ ಅಕ್ಕಿ | ಬೆಳವಗಿ | 41 | ಚನ್ನಪ್ಪ ಕೂರಗುಂದ | ಕೋಗನೂರು |
| 19 | ಮಲ್ಲನಗೌಡ ಮ್ಯಾಗೇರ್ | ಬೆಳವಗಿ | 42 | ಫಕ್ಕೀರಸಾಬ್ ನದಾಫ್ | ಕೋಗನೂರು |
| 20 | ದೇವಕ್ಕ ರಾ. ಮನ್ನಂಗಿ | ಜಂಗಮನಕೊಪ್ಪ | 43 | ಇಷ್ಟಲಿಂಗಯ್ಯ ಹಿರೇಮಠ | ಹೆಬ್ಬಾಳ |
| 21 | ರಾಮನಾಂದ ಮನ್ನಂಗಿ | ಜಂಗಮನಕೊಪ್ಪ | 44 | ವೆಂಕಣ್ಣಾಚಾರ್ಯ ವಾಯಿ | ವಡವಿ |
| 22 | ಕೆ.ಬಿ. ಪೂರ್ವಾಚಾರಿ ಅರ್ಕಾಚಾರಿ | ಕಲಕೋಟಿ | 45 | ಹಾಲಪ್ಪ ಉಡಚಣ್ಣನವರ | ಹೆಬ್ಬಾಳ |
| 23 | ಸಿದ್ದಲಿಂಗಪ್ಪ ಹೊಸಮನಿ | ಕರ್ಜಗಿ | 46 | ಬಸವಕುಮಾರ ಮುಳಗುಂದಮಠ | ಶಿಗ್ಗಿ |
| 24 | ಹುಚ್ಚಣ್ಣನವರ ಕರಿಯಪ್ಪ | ಅಗಡಿ | 47 | ಆದಯ್ಯ ಹಿರೇಮಠ | ಶಿಗ್ಗಿ |

| | | | | | |
|---|---|---|---|---|---|
| 48 | ಗುಡ್ಡಪ್ಪ ಕುಲಕರ್ಣಿ | ಗುತ್ತಲ | 55 | ಗುರಪ್ಪ ಗೋದಿ | ಶಿಗ್ಗಿ |
| 49 | ಮುದಕಪ್ಪ ಹಡಪದ | ಬಿಜ್ಜೂರು | 56 | ಶಂಕರ ಮೋಟೆಬೆನ್ನೂರ | ಹಾವೇರಿ |
| 50 | ಯಲ್ಲಪ್ಪ ಕನವಳ್ಳಿ | ಬಿಜ್ಜೂರು | 57 | ಪಂಚಾಕ್ಷರಿ ವಳಸಂಗದ | ಹಾವೇರಿ |
| 51 | ಶಿವಲಿಂಗಪ್ಪ ಮಾಗನೂರ | ಹಾವೇರಿ | 58 | ವ್ಹಿ.ಈ.ಅಂಗಡಿ | ಹಾವೇರಿ |
| 52 | ವಿರೂಪಾಕ್ಷಪ್ಪ ಕಡ್ಲಿ | ಹಾವೇರಿ | 59 | ನರಸಪ್ಪ ಮಡಿವಾಳರ | ಹಾವೇರಿ |
| 53 | ಆರ್.ಪಿ.ಗಣಪುಲೆ | ಹಾವೇರಿ | 60 | ಲಕ್ಷ್ಮಣ ಕಾಕಡೆ | ಹಾವೇರಿ |
| 54 | ಚಿನ್ನಪ್ಪ ಹಳ್ಳಿ | ಹಾವೇರಿ | 61 | ಗೋವಿಂದಾಚಾರ್ಯ ಅಗ್ನಿಹೋತ್ರಿ | ಹಾವೇರಿ |

ಮಹದೇವಪ್ಪ ಮೈಲಾರ ತಂಡಕ್ಕೆ ಸಹಾಯ–ಸಹಕಾರ ನೀಡಿದ ಹಾವೇರಿಯ ತಂಡದ ಸದಸ್ಯರು

| | | | | | |
|---|---|---|---|---|---|
| 1 | ನರಸಪ್ಪ ಮಡಿವಾಳರ | ಹಾವೇರಿ | 12 | ಬಾಬುರಾವ್ ಹೆಜೀಬ್ | ಅಗಡಿ |
| 2 | ಶಿವಲಿಂಗಪ್ಪ ಹೇರೂರು | ಹಾವೇರಿ | 13 | ನಿಂಗಯ್ಯ ಮಾಧಾಪುರಮಠ | ಬಾಲೆಹೊಸೂರ |
| 3 | ಎಚ್.ಸಿ.ಕುಲಕರ್ಣಿ | ಹಾವೇರಿ | 14 | ಗೋವಿಂದಪ್ಪ ದೊಡ್ಡಮನಿ | ಅಂಕಲಿ |
| 4 | ಶಾಂತಪ್ಪ ಮಾಗಾವಿ | ಹಾವೇರಿ | 15 | ಫಕ್ಕೀರಗೌಡ್ರ ಚನ್ನಪ್ಪಗೌಡ | ನೀರಲಗಿ |
| 5 | ಪಂಚಾಕ್ಷಯ್ಯ ವಳಸಂಗದ | ಹಾವೇರಿ | 16 | ಚನ್ನಬಸಪ್ಪ ಕಲ್ಯಾಣಿ | ಬನ್ನಿಕೊಪ್ಪ |
| 6 | ವೆಂಕಪ್ಪ ವೇವುಂಡಿ | ಹಾವೇರಿ | 17 | ತಿಮ್ಮಣ್ಣ ರಟ್ಟಿಹಳ್ಳಿ | |
| 7 | ನಿಂಗನೌಡ ದೊಡ್ಡಗೌಡ್ರ | ತೋಟದಯಲ್ಲಾಪುರ | 18 | ಹನುಮಂತಪ್ಪ ರಟ್ಟಿಹಳ್ಳಿ | |
| 8 | ಬಿಂದುಮಾದವ ಬುರ್ಲಿ | ಧಾರವಾಡ | 19 | ಶಂಕರಪ್ಪ ಕಳ್ಳಿಹಾಳ | ಸೂರಣಗಿ |
| 9 | ಸಿಂಧೂರ ಸಿದ್ಧಪ್ಪ | ಅಕ್ಕಿಆಲೂರು | 20 | ರಾಮಪ್ಪ ಹೂವಿನಶಿಗ್ಗಿ | |
| 10 | ಕೆ.ಎಫ್.ಪಾಟೀಲ | ಹನುಮನಮಟ್ಟಿ | 21 | ಸಂಗಪ್ಪ ಗಡಪ್ಪನವರ | ಯಲವಿಗಿ |
| 11 | ಮಜೀದ್‌ಸಾಬ್ ಫೌಜದಾರ | ಹಾವೇರಿ | 22 | ಬಸಪ್ಪ ಚೆಕ್ಕಿ | ಹಿರೇಕುರವತ್ತಿ |

ಮಹದೇವಪ್ಪ ಮೈಲಾರ ತಂಡ ಹೊಸರಿತ್ತಿಯ ಕಂದಾಯ ಕೇಂದ್ರದ ಮೇಲೆ ದಾಳಿ ಮಾಡಿದ ಸಮಯಕ್ಕೆ ಪೊಲೀಸರ ಗಮನ ಅತ್ತ ಹೋಗದಂತೆ ಹಾವೇರಿಯ ನ್ಯಾಯಾಲಯದಲ್ಲಿ ಭಾಗವಹಿಸಿದ ಹೊಸರಿತ್ತಿ, ಹಾಲಗಿ ಭಾಗದ ಚಳುವಳಿಕಾರರು ಮಹಿಳೆಯರು ಹೆಚ್ಚು ಭಾಗವಹಿಸಿದ್ದು ವಿಶೇಷ. ಇವರೆಲ್ಲರ ವಯಸ್ಸು ೨೦ಕ್ಕಿಂತ ಕಡಿಮೆ. ಆ ಪ್ರಕರಣದಲ್ಲಿ ಭಾಗವಹಿಸಿದವರ ಯಾದಿ

| | | | |
|---|---|---|---|
| 1 | ಅಂಬವ್ವ ಅಂಗಡಿ | 7 | ಪೀರಮಾ ಕಾಲೇಸಾಬ್ |
| 2 | ಶಂಕರಗೌಡ ಕಾಕಡೆ | 8 | ಕರಿಯಪ್ಪ ಹ. ಮುದ್ದಿ |
| 3 | ಪುಟ್ಟವ್ವ ತೋಟದ | 9 | ಭೀಮವ್ವ ಚ. ಓಲೇಕಾರ |
| 4 | ಭಾಗವ್ವ ಪ. ಹಳ್ಳಿಗುಡಿ | 10 | ನಾಗವ್ವ ರಾ. ಉಂಡೆರ್ |
| 5 | ಭರಮವ್ವ ಸ. ಹಡಪದ | 11 | ಗಂಗವ್ವ ಯ. ಮಡಿವಾಳರ |
| 6 | ಭವಾನೆವ್ವ ವೀ. ಡಿಸಾಳೆ | | |

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |